3.ವಿತ್ತೀಯ ಕಾರ್ಯಕಲಾಪ

2008–09ನೇ ಸಾಲಿನ ಪೂರಕ ಅಂದಾಜುಗಳ ಮಂಡನೆಗೆ ಅನುಮತಿ ಕೋರಿಕೆ

ಅಧ್ಯಕ್ಷರು: 2008–09ನೇ ಸಾಲಿನಥ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಮಂಡಿಸುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ: 2008–09ನೇ ಸಾಲಿನ ಪೂರಕ ಅಂದಾಜುಗಳು(ಮೊದಲನೇ ಕಂತು) ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ–I)

4. 2008–09ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ

ಅಧ್ಯಕ್ಷರು: ಈಗ ಆಯವ್ಯಯದ ಮೇಲಿನ ಚರ್ಚೆ. ಮಾನ್ಯ ಮಹದೇವ್‌ಪ್ರಸಾದ್‌ರವರೆ ನಿನ್ನೆ ಅರ್ಧಕ್ಕೆ ನಿಲ್ಲಿಸಿದ್ದೀರಿ. ಈಗ ಅದನ್ನು ಮುಂದುವರೆಸಿ. ಆದಷ್ಟು 15 ನಿಮಿಷಗಳಲ್ಲಿ ಮುಗಿಸಿ. ಬಹಳಷ್ಟು ಜನ ಮಾನ್ಯ ಸದಸ್ಯರುಗಳು ಮಾತನಾಡುವವರಿದ್ದಾರೆ. ಎಲ್ಲರೂ ಬೇಗ ಬೇಗ ಮುಗಿಸಿದರೆ ಎಲ್ಲಾ ಸದಸ್ಯರಿಗೂ ಅವಕಾಶ ಸಿಗುತ್ತದೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಗುಂಡ್ಲುಪೇಟೆ):ನಿನ್ನೆ ಪ್ರಾರಂಭ ಮಾಡಿದಂಥ ಚರ್ಚೆಯನ್ನು ಮುಂದುವರೆಸಲು ಅವಕಾಶ ಮಾಡಿ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಈಗಾಗಲೇ ಕೃಷಿ ಇಲಾಖೆಯ ಬಗ್ಗೆ ನಿನ್ನೆ ಸಾಕಷ್ಟು ವಿಚಾರಗಳನ್ನು ಸದನಕ್ಕೆ ತಮ್ಮ ಮೂಲಕ ತರತಕ್ಕ ಪ್ರಯತ್ನವನ್ನು ಮಾಡಿದ್ದೇನೆ. ಏನಾಗಿದೆಯೆಂದರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ವಿಚಾರದಲ್ಲಿ ಏನು ಮಾನ್ಯ ಮುಖ್ಯಮಂತ್ರಿಯವರು ಮುಂಗಡ ಪತ್ರದಲ್ಲಿ ಪ್ರಸ್ತಾಪ ಮಾಡಿದ್ದಾರೆ, ವಯಸ್ಕರ ಶಿಕ್ಷಣ ಇಲಾಖೆಯೇನಿದೆ ಅದರ ಬಗ್ಗೆ ಯಾವುದೇ ವಿಚಾರವನ್ನು ಅವರ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ. ನಮ್ಮಲ್ಲಿ ಇನ್ನು 40–48 ಪರ್ಸೆಂಟ್ ಅನಕ್ಷರಸ್ಥರು ಇರುವ ಸ್ಥಿತಿಯಲ್ಲಿ ಅವರನ್ನು ಅಕ್ಷರಸ್ಥರನ್ನಾಗಿ ಮಾಡತಕ್ಕ ಕೆಲಸ 1987ರಿಂದ ನಿರಂತರವಾಗಿ ನಡೆಯುತ್ತಾ ಬಂದಿದೆ. ಕಲಿಕಾ ಕೇಂದ್ರವನ್ನು ಮುಂದುವರೆದ ಶಿಕ್ಷಣ ಕೇಂದ್ರವನ್ನು ಗ್ರಾಮಾಂತರ ಪ್ರದೇಶದಲ್ಲಿ ಪಂಚಾಯಿತಿ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವರಿಗೆ ಸರಿಯಾದ ಸಂಪನ್ಮೂಲವನ್ನು ಒದಗಿಸದಿರುವ ಕಾರಣ ಅವುಗಳೆಲ್ಲ ಆಗಾಗ್ಗೆ ಸ್ಥಗಿತವಾಗಿರುವುದನ್ನು ಕಾಣುತ್ತಿದ್ದೇವೆ. ಈ ರೀತಿಯಲ್ಲಿ ವಯಸ್ಕರ ಶಿಕ್ಷಣಕ್ಕೆ ಒಂದು ನಿರ್ದೇಶಾನಾಲಯವೂ ಇದ್ದು ಒಬ್ಬ ಐ.ಎ.ಎಸ್. ಅಧಿಕಾರಿ ಕಾರ್ಯನಿರ್ವಹಿಸುತ್ತಿದ್ದರೂ ಅದಕ್ಕೆ ಈ ಬಜೆಟ್‌ನಲ್ಲಾಗಲಿ ಅಥವಾ ಅವರ ಶಿಕ್ಷಣ ಇಲಾಖೆಯ ಯಾವುದೇ ಕಾರ್ಯಕ್ರಮದಲ್ಲಾಗಲಿ ಅನುದಾನವನ್ನು ಒದಗಿಸತಕ್ಕ

ಪ್ರಸ್ತಾವನೆ ಇಲ್ಲ. ವಯಸ್ಕರ ಶಿಕ್ಷಣ ಸಮಿತಿ ಎಂದು ಮೈಸೂರಿನಲ್ಲಿ 1949 ರಲ್ಲಿ ಪ್ರಾರಂಭವಾದಂಥ ಸಂಸ್ಥೆ ಇದೆ. ಅದಕ್ಕೆ ಸ್ವಂತ ಕಟ್ಟಡ ಇದ್ದು ರಾಜ್ಯಾದಂತ ವಿದ್ಯಾಪೀಠಗಳನ್ನು ಮಾಡಲು ನೂರಾರು ಎಕರೆ ಹಿಂದೆ ಅನೇಕ ಗಣ್ಯರು ಭೂಮಿಯನ್ನು ದಾನ ಮಾಡಿ ಆ ಸಮಿತಿಗೆ ಕೊಟ್ಟಿದ್ದು ಇದೆ. ಸಾಕ್ಷರತಾ ಆಂದೋಲನ ಬರುವುದಕ್ಕಾಗಿ ಮೊದಲು ಹಿಂದೆ ರಾತ್ರಿ ಶಾಲೆಗಳೇನು ನಡೆಯುತ್ತಿದ್ದವು, ಅವು ಆ ಒಂದು ಸಮಿತಿಯ ಮೂಲಕ ನಡೆಯುತ್ತಿದ್ದವು. ಅಂತಹ ಸಮಿತಿ ಇವತ್ತು ನಿರ್ಲಕ್ಷಕ್ಕೆ ಒಳಗಾಗಿದೆ. ಸರ್ಕಾರದ ಅಧಿಕಾರಿಗಳೇನು ಕಾರ್ಯದರ್ಶಿ ಮಟ್ಟದಲ್ಲಿ ಶಿಕ್ಷಣ ಇಲಾಖೆಯಲ್ಲಿ ಇದ್ದಾರೆ ಅವರಿಗೆ ಆ ಸಮಿತಿಯ ಬಗ್ಗೆ ಸರಿಯಾದ ಪರಿಕಲ್ಪನೆ ಇಲ್ಲದಿರುವ ಕಾರಣ ಯಾವುದೋ ವಕ್ರದೃಷ್ಟಿಯನ್ನು ಆ ಸಮಿತಿಯ ಮೇಲೆ ಇಟ್ಟುಕೊಂಡು ಅದನ್ನು ಸಕಾರದ ವಶಕ್ಕೆ ಕೊಡುವ ಪ್ರಯತ್ನ ಮಾಡಿದ್ದಾರೆ. ಸರ್ಕಾರದ ನ್ಯಾಯಾಲಯದ ಆಜ್ಞೆ ಇದ್ದರೂ ಆ ಸಂಸ್ಥೆಯನ್ನು ಮತ್ತೇ ಅಸ್ಥಿತ್ವಕ್ಕೆ ತರುವ ಕೆಲಸಕ್ಕೆ ಸರ್ಕಾರ ಮುಂದಾಗಿಲ್ಲ. ತಾವು ಕೂಡ ಹಿಂದೆ ಕಂದಾಯ ಸಚಿವರಾಗಿದ್ದ ಸಂದರ್ಭದಲ್ಲಿ ನೋಂದಾವಣೆ Act ನೊಳಗೆ ಆ ಸಂಸ್ಥೆಯನ್ನು ಅಸ್ಥಿತ್ವಕ್ಕೆ ತರಬೇಕೆಂದು ಮಾಡಿದ್ದರೂ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಮಂತ್ರಿಗಳ ಆದೇಶವನ್ನು ಉಲ್ಲಂಘನೆ ಮಾಡಿ ಅದನ್ನು ಮತ್ತೇ ಸರ್ಕಾರಕ್ಕೆ ವಹಿಸುವ ಕೆಲಸವನ್ನು ಮಾಡಿದ್ದಾರೆ. ಅದನ್ನು ಪುನರ್ಪರಿಶೀಲನೆ ಮಾಡಿ ಪ್ರಾಥಮಿಕ ಶಿಕ್ಷಣ ಸಚಿವರು ಇದರ ಬಗ್ಗೆ ಗಮನ ಕೊಟ್ಟು ಅದನ್ನು ಪುನರ್ ಅಸ್ಥಿತ್ವಕ್ಕೆ ತರಬೇಕು. ಸುಮಾರು ಒಂದೂವರೆ ಕೋಟಿ ರೂಪಾಯಿ ಹಣ ಕಳೆದ ಹತ್ತು ವರ್ಷಗಳಿಂದ ಬ್ಯಾಂಕ್‌ನಲ್ಲಿ ಹಾಗೆಯೇ ಉಳಿದಿದೆ. ಕೋರ್ಟ್ ಆದೇಶ ಇರುವುದರಿಂದ ಅದನ್ನು ಖರ್ಚು ಮಾಡುವಂತೆಯೂ ಇಲ್ಲ. ಅದನ್ನು ಬಳಕೆ ಮಾಡಲೂ ಅವಕಾಶ ಇಲ್ಲದಂತಾಗಿದೆ. ಈ ರೀತಿಯಲ್ಲಿ ಆ ಸಂಸ್ಥೆ ನಿರ್ಜೀವವಾಗಿದೆ. ಅದಕ್ಕೆ ಜೀವ ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕು. ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಿಗೂ ಆದ್ಯತೆಯನ್ನು ಕೊಡಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಿಗೂ ಆಧ್ಯತೆ ಕೊಡಬೇಕು. ಉನ್ನತ ಶಿಕ್ಷಣದಲ್ಲಿ ಹಿಂದಿನ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡಿತ್ತು. ಇಷ್ಟು ವರ್ಷಗಳಾದರೂ 67 ತಾಲ್ಲೂಕುಗಳಲ್ಲಿ ಪ್ರಥಮ ದರ್ಜೆ ಕಾಲೇಜೇ ಇರಲಿಲ್ಲ. ಆ ಕೇಂದ್ರಗಳಲ್ಲಿ ಒಂದೊಂದು ಕಾಲೇಜನ್ನು ಪ್ರಾರಂಭ ಮಾಡಿದ್ದೇವೆ. ಕಾಲೇಜಿಗೆ ಬೇಕಾದಂತಹ ಕಟ್ಟಡ ಹಾಗೂ ಸಿಬ್ಬಂದಿ ಕೊರತೆ ಇದೆ. ಕೇವಲ ಒಬ್ಬರು ಪ್ರಾಚಾರ್ಯರು ಒಬ್ಬರು ಗ್ರೂಪ್

ಡಿ ವರ್ಗದವರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. ಯಾವುದೇ ಅಧ್ಯಾಪಕರ, ಸಿಬ್ಬಂದಿ ವರ್ಗದವರ ನೇಮಕಾತಿ ಕೂಡ ಆಗಿಲ್ಲ. ಆದುದರಿಂದ, ಉನ್ನತ ಶಿಕ್ಷಣ ವಿಚಾರದಲ್ಲಿ ಅಧ್ಯಾಪಕರನ್ನು ನೇಮಕ ಮಾಡತಕ್ಕಂಥದ್ದು ಹಾಗೂ ಸಂಪನ್ಮೂಲಗಳನ್ನು ಒದಗಿಸಿಕೊಡುವಂತಹ ಕೆಲಸವಾಗಬೇಕು. ಮಾನ್ಯ ರೇವಣ್ಣನವರ ಕೃಪೆಯಿಂದ ನಾಲ್ಕು ಇಂಜಿನೀಯರಿಂಗ್ ಕಾಲೇಜುಗಳು ಮತ್ತು ಮಾನ್ಯ ಕುಮಾರ ಸ್ವಾಮಿಯವರ ಅಭಿಲಾಷೆಯಿಂದ ಇವತ್ತು ಚಾಮರಾಜನಗರದಲ್ಲಿ ಕಾಲೇಜುಗಳು ಪ್ರಾರಂಭವಾಗಿವೆ. ಕಳೆದ ಬಾರಿ ಕೊನೆಯ ಹಂತದಲ್ಲಿ ಅನುಮತಿ ದೊರಕಿದ್ದರಿಂದ ಕೇವಲ 100 ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದಿದ್ದರು. ಈ ಸಲ ಇನ್ನೂ ಸಿಇಟಿ ಕಂಪ್ಲೀಟ್ ಆಗಿಲ್ಲ ಆಗಲೇ 240 ಏನು ನಿಗಧಿತ ಸಂಖ್ಯೆ ಸೀಟುಗಳಿವೆ ಅಷ್ಟೂ ಕೂಡ ಆ ಕಾಲೇಜಿಗೆ ಭರ್ತಿಯಾಗಿವೆ. ಹಾಗಾಗಿ ಅಲ್ಲಿ ಕಟ್ಟಡದ ಕೊರತೆ ಇದೆ. ಅಧ್ಯಾಪಕರ ಕೊರತೆ ಇದೆ. Hostel facility ಇಲ್ಲ. ಚಾಮರಾಜನಗರ ಒಂದು ಜಿಲ್ಲಾ ಕೇಂದ್ರವಾಗಿ ಹತ್ತು ವರ್ಷವಾದರೂ ಕೂಡ ಅದು ಇನ್ನೂ ತಾಲ್ಲೂಕು ಕೇಂದ್ರದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದು ತಮ್ಮ ಗಮನಕ್ಕೂ ಬಂದಿದೆ. ತಾವು ಉಪ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅಲ್ಲಿ ಬಂದ್ದೀರಿ. ಮಾನ್ಯ ಉನ್ನತ ಶಿಕ್ಷಣ ಸಚಿವರು ಅಲ್ಲಿ ವಸತಿ ನಿಲಯದ ಕಟ್ಟಡ, ಕಾಲೇಜ್ ಕ್ಯಾಂಪಸ್ ಹಾಗೂ ಶಿಕ್ಷಕರ ನೇಮಕ, ಪರಿಣಿತಿ ಹೊಂದಿರುವಂತಹ visiting professor ಗಳನ್ನು ನೇಮಿಸಿ ಪಾಠ ಪ್ರವಚನಗಳಿಗೆ ಅವಕಾಶ ಮಾಡಿಕೊಡುವ ವ್ಯವಸ್ಥೆಯಾಗಬೇಕು. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಹಾಸ್ಟೆಲ್‌ಗಳಲ್ಲಿ ಇರುವಂತಹ ವಿದ್ಯಾರ್ಥಿಗಳಿಗೆ ಭೋಜನ ವೆಚ್ಚವನ್ನು ಹೆಚ್ಚಿಸಿದ್ದೀರಿ ಇದು ಅಗತ್ಯವಿರುವಂತಹ ಕೆಲಸ, ಅದನ್ನು ನೀವು ಮಾಡಿದ್ದೀರಿ. ಇದಕ್ಕೆ ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ಇಟ್ಟಿರುವಂತಹ ಹಣ ಬಹಳ ಕಡಿಮೆ. ಹಿಂದುಳಿದ ವರ್ಗದಲ್ಲಿ ಪರಿಶಿಷ್ಟ ಜಾತಿ ನಿಗಮ ಏನಿದೆ ಅದರಲ್ಲಿ ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಡಾ.ಅಂಬೇಡ್ಕರ್ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಇರಬಹುದು. ಇದರಲ್ಲಿ ಪ್ರತಿ ಕ್ಷೇತ್ರದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಂತಹ ಸಂಖ್ಯೆ ಬಹಳ ಕಡಿಮೆ ಇದೆ. ಸಾವಿರಾರು ಜನರು ಸೌಲಭ್ಯವನ್ನು ಪಡೆಯುವಲ್ಲಿ ಮುಂದೆ ಬರುತ್ತಾರೆ. ಅವರನ್ನು ಆಯ್ಕೆ ಮಾಡುವಾಗ ನೀವು 30–40 target ಮಿತಿಗೊಳಿಸಿದಾಗ ಅಲ್ಲಿ ಶಾಸಕರು ಇರಬಹುದು, ಅಥವಾ ಜನಪ್ರತಿನಿಧಿಗಳು ಇರಬಹುದು ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂತದ್ದು ಬಹಳ ಕಷ್ಟದ ಕೆಲಸ. ನಿನ್ನೆ ಮಾನ್ಯ ಸದಸ್ಯರಾದ ಸುಧಾಕರ್ ಅವರು ಮಾತನಾಡುತ್ತಾ, 500 ರಿಂದ 600 ಅಡಿ ಆಳಕ್ಕೆ ಹೋಗುವ ಪರಿಸ್ಥಿತಿಯಲ್ಲಿ ಕೊಳವೆ ಬಾವಿಗಳಿವೆ. ಅವುಗಳಿಗೆ ನೀಡಿರತಕ್ಕಂತಹ ಹಣ

ಬಹಳ ಕಡಿಮೆ. ಅದನ್ನು ಹೆಚ್ಚಿಸಬೇಕು. ಶ್ರಮ ಶಕ್ತಿ ಯೋಜನೆಯಲ್ಲಿ ಕೆಲವು ಹಿಂದುಳಿದ ವರ್ಗಗಳು ಅವಲಂಬಿತವಾಗಿರುವಂತಹ ಕುಲ ಕಸುಬು ಏನಿದೆ ಅದಕ್ಕೆ ನೆರವು ನೀಡತಕ್ಕ ಯೋಜನೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 60 ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಅದಕ್ಕೆ ಇವತ್ತು 1,400 ಅರ್ಜಿಗಳು ಬಂದಿವೆ. ಆದ್ದರಿಂದ ಯಾವ ರೀತಿಯಾಗಿ ಯೋಜನೆಗಳನ್ನು ಜಾರಿಗೊಳಿಸಬೇಕು ಎಂಬುದನ್ನು ತಾವು ಹೇಳಬೇಕಾಗುತ್ತದೆ. ಆದುದರಿಂದ, ಶ್ರಮ ಶಕ್ತಿ ಯೋಜನೆಗೆ ವಿಶೇಷ ಅನುದಾನವನ್ನು ಸರ್ಕಾರ ಕೊಡಬೇಕು. ಕೆಲವು ಜಾತಿ, ಜನಾಂಗದ ಹೆಸರನ್ನು ಪ್ರಾರಂಭದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕ್ಷತ್ರಿಯ, ಉಪ್ಪಾರ, ಸವಿತಾ, ಮಡಿವಾಳ, ದೇವಾಂಗ, ಕುಂಬಾರ, ಕಂಬಾರ ಇತ್ಯಾದಿ ಸಂಘ ಸಂಸ್ಥೆಗಳಿಗೆ ಸಹಾಯ ಧನ ಎಂದು ಪ್ರಸ್ತಾಪ ಇದೆ. ಇದರೊಳಗೆ ಗಜಗಾರ ಜನಾಂಗ ಇದೆ ಅವರು ಕುಲುಮೆ ಕೆಲಸ ಮಾಡತಕ್ಕಂತವರು. ಪ್ರತಿ ಗ್ರಾಮದಲ್ಲಿ 3–4 ಕುಟುಂಬಗಳಷ್ಟೆ ಇರುತ್ತವೆ. ಅವರಿಗೆ ಆ ಗ್ರಾಮದಲ್ಲಿ ಜಾತಿ ಬೆಂಬಲವೂ ಇರುವುದಿಲ್ಲ. ಆದರೆ, ರೈತರಿಗೆ ಉಪಯೋಗವಾಗುವಂತಹ ಎಲ್ಲಾ ಸಲಕರಣೆಗಳನ್ನು ಮಾಡುವ ವೃತ್ತಿಯನ್ನು ಅವಲಂಬಿಸಿರತಕ್ಕಂತವರು. ಅವರಿಗೆ ಯಾವುದೇ ರೀತಿಯಾಗಿ ಗ್ರಾಮಾಂತರ ಪ್ರದೇಶದಲ್ಲಿ ಸೌಲಭ್ಯ ದೊರಕುತ್ತಿಲ್ಲ. ಏಕೆಂದರೆ, ಅವರಿಗೆ ಸೌಲಭ್ಯವನ್ನು ಕೊಡಬೇಕೆಂದು ಪಂಚಾಯಿತಿ ವ್ಯಾಪ್ತಿಯಲ್ಲಿ ಯಾರೂ ಮುಂದೆ ಬರುವುದಿಲ್ಲ. ಅದುದರಿಂದ ಅಂತಹ ಕಡಿಮೆ ಸಂಖ್ಯೆ ಇರತಕ್ಕಂತಹ ಜನಾಂಗಗಳು ಏನಿವೆ ಅವರ ಒಂದು ಸಂಘವನ್ನು ಅಥವಾ ಜನಗಳನ್ನು ಗುರ್ತಿಸಿ ಮನೆಗಳನ್ನು ನಿರ್ಮಾಣ ಮಾಡತಕ್ಕಂತದ್ದಾಗಲಿ ಅಥವಾ ಅವರ ಕುಲ ಕಸುಬಿಗೆ ನೆರವಾಗುವಂತಹ ಆರ್ಥಿಕ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಭಾಗದಲ್ಲಿ ಅದರಲ್ಲೂ ವಿಶೇಷವಾಗಿ, ಚಾಮರಾಜ ನಗರಗಳಲ್ಲಿ ಉಪ್ಪಾರ ಜನಾಂಗವಿದೆ. ಇವತ್ತು ಚಾಮರಾಜನಗರ ಜಿಲ್ಲೆಯಿಂದ ಆ ಜನಾಂಗವನ್ನು ಪ್ರತಿನಿಧಿಸತಕ್ಕ ಒಬ್ಬರು ಶಾಸಕರು ಶಾಸನ ಸಭೆಯನ್ನು ಪ್ರವೇಶ ಮಾಡಿದ್ದಾರೆ. ಉಪ್ಪಾರ ಜನಾಂಗಕ್ಕೆ ಇಡೀ ರಾಜ್ಯದಲ್ಲಾಗಲಿ, ಶಾಸನ ಸಭೆಯಲ್ಲಾಗಲಿ, ವಿಧಾನ ಪರಿಷತ್ತಿನಲ್ಲಾಗಲಿ ಅವಕಾಶ ಇರಲಿಲ್ಲ. ಇವತ್ತು ವಿಧಾನ ಸಭೆಗೆ ಒಬ್ಬರು ಆ ಜನಾಂಗದಿಂದ ಪ್ರತಿನಿಧಿಸತಕ್ಕಂತಹ ಅವಕಾಶವನ್ನು ಕಾಂಗ್ರೆಸ್ ಪಕ್ಷ ಕಲ್ಪಿಸಿಕೊಟ್ಟಿದೆ. ಆ ಜನ ಕೂಡ ಅವರನು ಆಯ್ಕೆ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಆ ಜನಾಂಗ ಜೀವನ ಮಾಡತಕ್ಕಂತಹ ಪರಿಸ್ಥಿತಿಯನ್ನು ನೀವು ಒಂದು ಸರಿ ಬಂದು ನೋಡಿದರೆ ಅವರು ಬಹಳ ಹೀನಾಯ ಪರಿಸ್ಥಿತಿಯಲ್ಲಿದ್ದಾರೆ. ಮೋಳೆಗಳು ಎಂಬುದು? ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲದಲ್ಲಿದೆ. ಮಾನ್ಯ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ

ಸಂದರ್ಭದಲ್ಲಿ ಬಡಗಳ ಮೋಳೆ ಎಂಬ ಗ್ರಾಮದಲ್ಲಿ ವಾಸ್ತವ್ಯವನ್ನು ಮಾಡಿದ್ದರು. 24 ದಿನಗಳಲ್ಲಿ ಒಂದು ಗ್ರಾಮವನ್ನು ಪುನರ್ ರದಚನೆ ಮಾಡಿದಂತಹ ಹೆಗ್ಗಳಿಕೆ ಕೂಡ ಅವರಿಗೆ ಇದೆ. ಇಡೀ ಪರಿಸ್ಥಿತಿಯನ್ನು ನೋಡಿದಂತಹ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿಗಳು ಈ ಒಂದು ಜನಾಂಗಕ್ಕೆ ವಸತಿಯನ್ನು ಒದಗಿಸಬೇಕೆಂದು ಹೇಳಿ, "ಗುಡಿಸಲು ರಹಿತ" ಎಂಬ ಒಂದು ಕಾರ್ಯಕ್ರಮವನ್ನು ಗುಂಡ್ಲುಪೇಟೆ, ಕೊಳ್ಳೇಗಾಲ, ಚಾಮರಾಜನಗರದಲ್ಲಿ ಘೋಷಣೆ ಮಾಡಿದ್ದರು. ಇಡೀ ಚಾಮರಾಜನಗರದಲ್ಲಿ ಉಪ್ಪಾರ ಜನಾಂಗ ಇದೆ. ಅವರ ಸ್ಥಿತಿಗತಿ ಸುಧಾರಣೆಯಾಗಬೇಕಾದರೆ, ಅವರ ಶೈಕ್ಷಣಿಕ ಮಟ್ಟ ಹೆಚ್ಚಾಗಬೇಕಾದರೆ ಅಲ್ಲಿ ಹೆಚ್ಚಿನ ಸೌಲಭ್ಯವನ್ನು ಜನಾಂಗಕ್ಕೆ ನೀಡಬೇಕಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಅನುದಾನವನ್ನು ಈ ಒಂದು ಜನರಿಗೆ ನೀಡತಕ್ಕಂಥದ್ದು ಮತ್ತು ಗುಡಿಸಲು ರಹಿತ ಗ್ರಾಮಗಳನ್ನಾಗಿ ಮಾಡುವುದಕ್ಕೆ ಹೆಚ್ಚಿನ ಒತ್ತು ಕೊಡಬೇಕೆಂದು ಮುಂಗಡ ಪತ್ರಕ್ಕೆ ಉತ್ತರಿಸುವಾಗ ಮುಖ್ಯ ಮಂತ್ರಿಗಳು ಹೇಳುತ್ತಾರೆಂದು ಈ ಸಂದರ್ಭದಲ್ಲಿ ಹೇಳುತ್ತಾ, ವಸತಿ ವಿಚಾರದಲ್ಲಿ 30 40 ಸಾವಿರಕ್ಕೆ ಹೆಚ್ಚಿಸಿದ್ದೀರಿ. ಅದೊಂದು ಸಮಾಧಾನ ಪಡತಕ್ಕಂತಹ ವಿಚಾರ. ಇವತ್ತಿನ constrction cost ಗಮನಿಸಿದಾಗ 40 ಸಾವಿರ ಬಹಳ ಕಡಿಮೆಯಿದೆ. ಅದನ್ನು 50 ಸಾವಿರಕ್ಕೆ ಹೆಚ್ಚಿಸಿದರೆ ಬಹಳ ಒಳ್ಳೆಯದು. ಆದರೆ, ಅವರ ಸಂಕಲ್ಪದಂತೆ ಬಜೆಟ್ ಪ್ರಣಾಳಿಕೆಯಲ್ಲಿ ಅವರು ಬಹಳ ಹೆಮ್ಮೆಯಿಂದ ಹೇಳಿಕೊಂಡಿರತಕ್ಕಂತಹ ವಿಚಾರ, ಬಡ ಜನರಿಗೆ ನೀಡಿದ ಆಶ್ರಯ, ಇಂದಿರಾ ಆವಾಸ್, ವಸತಿ ಯೋಜನೆಯ ಸಾಲ ಮನಾ ಸುಮಾರು 650 ಕೋಟಿ ರೂಪಾಯಿ ಎಂದು ಪುಸ್ತಕದಲ್ಲಿ mention ಮಾಡಿದ್ದಾರೆ. ಆದರೆ, ಆ ಪ್ರಸ್ತಾಪ ಇವತ್ತು ಇಲ್ಲ. ನಿನ್ನೆ ಮಾನ್ಯ ಸಿ.ಟಿ.ರವಿ ಅವರು Reading room ನಲ್ಲಿರುವ paper ಗಳನ್ನು ತಂದು ಬಜೆಟ್ನಲ್ಲಿರುವ ಅಂಶವನ್ನು ಪ್ರಸ್ತಾಪ ಮಾಡಿದರು. ಆದರೆ 650 ಕೋಟಿ ರೂಪಾಯಿ ಇಲ್ಲಿ ಪ್ರಸ್ತಾಪವಾಗಿಲ್ಲ. ಇದರ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ತಿಳಿಸುತ್ತಾರೆಯೇ ಎನ್ನುವುದನ್ನು ತಮ್ಮ ಮೂಲಕ ಕೇಳಬಯಸುತ್ತೇನೆ. ಸಾಲ ಮನ್ನಾ ಮಾಡಬೇಕು. ಏಕೆಂದರೆ, ಆಶ್ರಯ, ಅಂಬೇಡ್ಕರ್ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಿಸಿಕೊಂಡಿರುವ ಫಲಾನುಭವಿಗಳು ಯಾರೂ ಸಾಲ ಕಟ್ಟುವ ಸ್ಥಿತಿಯಲ್ಲಿಲ್ಲ. ಆದುದರಿಂದ ಸಾಲ ಮನ್ನಾ ಮಾಡಬೇಕು. ಜೊತೆಗೆ ವಿವಿಧ ಹಂತದಲ್ಲಿರುವಂತಹ ಸುಮಾರು ಒಂದು ಲಕ್ಷ ಮನೆಗಳು ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಅಡಿಯಲ್ಲಿವೆ, ಅವು ಪೂರ್ಣಗೊಳ್ಳುವ ಸ್ಥಿತಿಯಲ್ಲಿ ಇಲ್ಲ. ನೀವು ಏನೇ ಕಾನೂನನ್ನು ಜಾರಿಗೆ ತಂದು ಸಾಲ ವಸೂಲಾತಿ ಮಾಡುತ್ತೇವೆಂದು ಹೇಳಿ ಅಥವಾ ಅವರ ಮೇಲೆ

ಕ್ರಿಮಿನಲ್ ಕೇಸ್ ಹಾಕಿದರೂ ಕೂಡ ಆ ಮನೆಗಳನ್ನು ಪೂರ್ಣಗೊಳಿಸಿಕೊಳ್ಳುವ ಸ್ಥಿತಿಯಲ್ಲಿ ಅವರು ಇಲ್ಲ. ನೀವು ಯಾವ ರೀತಿಯಾಗಿ ಮುಂದಿನ ಸಾಲಿನಲ್ಲಿ ಕೊಡುವಂತಹ ಮನೆಗಳಿಗೆ ಹತ್ತು ಸಾವಿರ ರೂಪಾಯಿಯನ್ನು ಹೆಚ್ಚಿಸಿದ್ದೀರಿ ಅದೇ ರೀತಿ ಅವರಿಗೂ ಪ್ರೋತ್ಸಾಹ ಹಣವನ್ನು ತಾವು ಘೋಷಣೆ ಮಾಡಬೇಕು. ಮೊದಲನೆಯ ಹಂತದಲ್ಲಿರತಕ್ಕಂಥವರಿಗೆ 10 ಸಾವಿರ ರೂಪಾಯಿ ಹಣ, ಎರಡನೇ ಹಂತದ payment ತೆಗೆದುಕೊಂಡಿರುವರು ಪೂರ್ಣಗೊಳಿಸಿದರೆ 5 ಸಾವಿರ ಎಂದು ಘೋಷಣೆ ಮಾಡಿ, 2 ಅಥವಾ 3 ತಿಂಗಳು ಎಂದು ಒಂದು ದಿನಾಂಕ ನಿಗಧಿಪಡಿಸಿ ಅಷ್ಟರೊಳಗೆ ಪೂರ್ಣಗೊಳಿಸಿಕೊಳ್ಳಬೇಕು. ಇಲ್ಲದಿದ್ದರೆ ಪೂರ್ಣ ಹಣವನ್ನು ನೀವು ಮರು ಪಾವತಿ ಮಾಡಬೇಕಾಗುತ್ತದೆ ಎನ್ನುವಂತಹ ಎಚ್ಚರಿಕೆಯನ್ನೂ ಕೊಟ್ಟು ಅವರಿಗೆ ಪ್ರೋತ್ಸಾಹ ಘೋಷಣೆ ಮಾಡಿದರೆ, ಆ ವಿವಿಧ ಹಂತಗಳಲ್ಲಿರುವ ಸುಮಾರು 1 ಲಕ್ಷ ಮನೆಗಳೇನಿವೆ, ಅವುಗಳು ಪೂರ್ಣಗೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇಲ್ಲದಿದ್ದರೆ ಅವರೂ ಕೂಡ ನಮಗೂ 40 ಸಾವಿರ ರೂಪಾಯಿಗಳನ್ನು ಕೊಡಿ ಎಂದು demand ಮಾಡುವಂತಹ ಸನ್ನಿವೇಶ ನಿರ್ಮಾಣವಾಗುತ್ತದೆ. ಆದ್ದರಿಂದ ಮಾನ್ಯ

ಶ್ರೀ ಹೆಚ್.ಡಿ.ರೇವಣ್ಣ:- ಕೇಂದ್ರದ ನೆರವಿನಿಂದ ಇಂದಿರಾ ಆವಾಸ್ ಯೋಜನೆ ಅಡಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ರಾಜೀವ್ ಗಾಂಧಿ ವಸತಿ ನಿಗಮ ರಾಜ್ಯದ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಇವತ್ತು ಮಳೆಯಾಗುತ್ತಿದೆ, ಆದರೆ ಹಣ release ಆಗಿಲ್ಲ. ದಯಮಾಡಿ ಕೂಡಲೇ ಹಣ release ಮಾಡಬೇಕು. ಇಲ್ಲದಿದ್ದರೆ, ಕೆಲವು ಬಡ ರೈತರು ಕಟ್ಟಿಕೊಂಡಿರತಕ್ಕಂಥ ಮನೆಗಳು ದುಸ್ಥಿತಿಗೆ ಈಡಾಗುತ್ತವೆ. ಕೂಡಲೇ ಹಣ release ಮಾಡುವಂತೆ ವಸತಿ ಸಚಿವರು ಹೇಳಬೇಕು.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್:- ಅದೇ ರೀತಿ ನಿನ್ನೆ ಕೂಡ ನಾನು ಮಾತನಾಡುವಾಗ ಹೇಳಿದೆ. ಮಾನ್ಯ ಮುಜರಾಯಿ ಸಚಿವರು ಈಗ ತಾನೇ ಇಲ್ಲೇ ಇದ್ದರು, ಎಲ್ಲೋ ಹೊರಗಡೆ ಹೋಗಿದ್ದಾರೆಂದು ಕಾಣುತ್ತದೆ. ನಮ್ಮಲ್ಲಿ ಮಲೆ ಮಹದೇಶ್ವರ ಸ್ವಾಮಿ ಬೆಟ್ಟ ಇದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ನಗರ ಪ್ರದೇಶಗಳಲ್ಲಿ ಆಶ್ರಯ ಮನೆಗಳಾಗಲಿ, ಇಂದಿರಾ ಆವಾಸ್ ಮನೆಗಳನ್ನಾಗಲಿ ನಿರ್ಮಾಣ ಮಾಡತಕ್ಕ ಕೆಲಸ ಆಗಿಲ್ಲ. ಹಿಂದೆ ಸರ್ಕಾರ ಮೂರು ವರ್ಷಗಳಲ್ಲಿ ಒಂದು ಮನೆಯನ್ನೂ ಕೂಡ ಕಟ್ಟಲಿಕ್ಕೆ ಆಗಿಲ್ಲ. ಹಾಗಾದರೆ ನಗರ ಪ್ರದೇಶಗಳಲ್ಲಿ ಬಡವರು ಇಲ್ಲವೇ, ಹೇಗೆ ಎನ್ನುವುದನ್ನೂ ಕೂಡ ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಆಶ್ರಯ ಸಮಿತಿ ಗ್ರಾಮೀಣ ಭಾಗದಲ್ಲಿ ಇಂದಿರಾ ಆವಾಸ್ ಯೋಜನೆ ಮೂಲಕ ಅದನ್ನು ಜಾರಿ ಮಾಡುತ್ತಾರೆ. ಆದರೆ

ಪಟ್ಟಣದಲ್ಲಿ ಇವತ್ತು ಆ ಒಂದು ವ್ಯವಸ್ಥೆ ಇಲ್ಲ. ಮುಂದೆಯಾದರೂ ಕೂಡ ಅದಕ್ಕೆ ಸರ್ಕಾರ ಒತ್ತು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಎಸ್.ಮಹದೇವಪ್ರಸಾದರ:- ಮಲೆ ಮಹದೇಶ್ವರ ಬೆಟ್ಟವನ್ನು ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದ ಮಾದರಿಯಲ್ಲಿ ಅಭಿವೃದ್ಧಿ ಪಡಿಸಬೇಕೆಂದು ಹಿಂದೆ ನಾನು ಸಚಿವನಾಗಿದ್ದ ಅವಧಿಯಲ್ಲಿ ಪ್ರಸ್ತಾಪ ಆಗಿತ್ತು. ಆಗಿನ ಮುಖ್ಯಮಂತ್ರಿಗಳೂ ಕೂಡ ಅದನ್ನು ಮಾಡಬೇಕೆಂಬ ಬಗ್ಗೆ ಆಸಕ್ತಿಯನ್ನು ಹೊಂದಿದ್ದರು. ಅಚರ ಬಗ್ಗೆ ಸಭೆಯೊಂದನ್ನು ಕೂಡ ನಡೆಸಲಾಗಿತ್ತು. ಸರ್ಕಾರದ ಮುಂದೆ ಆ ಬಗ್ಗೆ ಪ್ರಸ್ತಾನೆ ಇದೆ. ಅದು ಮತ್ತು ಚಾಮುಂಡಿ ಬೆಟ್ಟ ಎರಡರದ್ದೂ ಪ್ರಸ್ತಾವನೆ ಇದೆ. ಇದನ್ನು ಮಾಡುವುದಕ್ಕೆ ಮಾನ್ಯ ಮುಜರಾಯಿ ಸಚಿವರು ಗಮನ ಹರಿಸಬೇಕು. ಆರಾಧನಾ ಯೋಜನೆಗೆ ಹೆಚ್ಚಿನ ಹಣವನ್ನು ಕೊಡಬೇಕು. ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಹೇಳುವುದಾದರೆ, ಈಗಾಗಲೇ ಡಾ: ರಾಜ್‌ಕುಮಾರ್‌ವರ ಸ್ಮಾರಕಕ್ಕೆ 5 ಕೋಟಿ ರೂಪಾಯಿಗಳನ್ನು ಹಿಂದಿದ್ದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನೀಡಲಾಗಿತ್ತು. ಅದನ್ನು ಮತ್ತೆ ಪ್ರಸ್ತಾಪ ಮಾಡಿದ್ದಾರೆ. ಇದರ ಉದ್ದೇಶವೇನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅದರ ಬಗ್ಗೆ ಈಗಾಗಲೇ ಸಾಕಷ್ಟು ಕಾರ್ಯಕ್ರಮ ಚಾಲನೆಯಾಗಿದೆ. ಅದಕ್ಕಾಗಿ ಒಂದು ಸಮಿತಿ ಕೂಡ ರಚನೆಯಾಗಿದೆ. ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಅವರ ನೇತೃತ್ವದಲ್ಲಿ ವಿನ್ಯಾಸ ಹೇಗೆ ಇರಬೇಕು ಎಂಬ ಬಗ್ಗೆ ಚರ್ಚೆಯಾಗಿದೆ. ಇದೆಲ್ಲಾ ಈಗಾಗಲೆಏ ಪ್ರಗತಿಯಲ್ಲಿರುವ ವಿಚಾರ. ತಾವು ತಮ್ಮ 'ಸಂಕಲ್ಪ'ದಲ್ಲಿ 'ಹಳ್ಳಿ ಹಳ್ಳಿಗೊಂದು ಸೈಬರ್ ಕೆಫೆ, ಸುಸಜ್ಜಿತ ಸಮುದಾಯ ಭವನ, ಬಣ್ಣದ ಟಿ.ವಿ. ಮತ್ತು ಕಂಪ್ಯೂಟರ್‌ಗಳನ್ನು ಕೊಡುತ್ತೇವೆ' ಎಂದು ಹೇಳಿದ್ದೀರಿ. ಅದರ ಪ್ರಸ್ತಾಪ ಮುಂಗಡ ಪತ್ರದಲ್ಲಿ ಎಲ್ಲೂ ಕಾಣುತ್ತಿಲ್ಲ. 'ಜಿಲ್ಲೆಗೊಂದು ರಂಗ ಮಂದಿರ, ಕಲಾ ಭವನ, ವರ್ಷ ಪೂರ್ತಿ ಜಿಲ್ಲೆಯ ವಿವಿಧ ಕಲಾವಿದರಿಂದ ಕಾರ್ಯಕ್ರಮಕ್ಕೆ ಪ್ರೋತ್ಸಾಹ, ಗಡಿ ನಾಡಿನ ಎಲ್ಲಾ ತಾಲ್ಲೂಕಿನಲ್ಲಿ ಕನ್ನಡ ಭವನ, ಮುಖ್ಯಮಂತ್ರಿ ಚಂದ್ರುರವರ ನೇತೃತ್ವದ ಕನ್ನಡ ನುಡಿ, ಕನ್ನಡ ಗಡಿ ಜಾಗೃತಿ ಜಾಥಾ ಸಮಿತಿಯ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸುವುದು' ಎಂದೂ ಸಹ ಹೇಳಿದ್ದೀರಿ. ಇದು ನಾನು ಹೇಳಿರುವ ಮಾತಲ್ಲ. ಮಾನು ಮುಖ್ಯಮಂತ್ತಿಗಳು ಚುನಾವಣಾ ಸಂದರ್ಭದಲ್ಲಿ ಎಲ್ಲಾ ಕಡೆಗೂ ಭಾಷಣ ಮಾಡಿದಂತಹ ಸಂದರ್ಭದಲ್ಲಿ ಇದನ್ನು ಪ್ರಸ್ತಾಪಿಸಿದರು. ಅವರ ಪ್ರಣಾಳಿಕಾಶ ಪುಸ್ತಕದಲ್ಲಿ ಇದೆಲ್ಲಾ ಇದೆ. ಇವತ್ತು ಮುಖ್ಯಮಂತ್ರಿ ಚಂದ್ರುರವರ ವರದಿಯ ಬಗ್ಗೆ ಒಂದು ಪದ ಕೂಡ ಈ ಮುಂಗಡ ಪತ್ರದಲ್ಲಿ ಪ್ರಸ್ತಾಪವಿಲ್ಲ. ಮುಖ್ಯಮಂತ್ರಿ ಚಂದ್ರು ಅವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಮಾಡಿ, ಅವರಿಗೆ ಸಂಪುಟ ದರ್ಜೆ ಸಚಿವರ

ಸ್ಥಾನಮಾನ ಕೊಡುವ ಪ್ರಯತ್ನ ನಡೆಯಿತೇ ಹೊರತು ಅವರ ವರದಿಯ ಬಗ್ಗೆ ಯಾವುದೇ ಪ್ರಸ್ತಾಪ ಮಾಡದಿರುವುದ ದುರದೃಷ್ಟಕರ. ಅವರು ಸುಮಾರು ಒಂದು-ಒಂದೂವರೆ ತಿಂಗಳ ಕಾಲ ಇಡೀ ಗಡಿ ಭಾಗದ 67 ತಾಲ್ಲೂಕುಗಳಲ್ಲಿ ಪ್ರಾವಾಸ ಮಾಡಿ, ಜನರನ್ನು ಜಾಗೃತಿಗೊಳಿಸಿದರು. ಅವರು ಬಿ.ಜೆ.ಪಿ. ಪಕ್ಷದಲ್ಲಿ ಇದ್ದುದ್ದರಿಂದ ಜಾಥಾದಲ್ಲಿ ಭಾಗವಹಿಸಿದ್ದವರೆಲ್ಲಾ ಆ ಪಕ್ಷಕ್ಕೆ ಬೆಂಬಲವಾಗಿ ನಿಂತರು. ಆದರೆ ಅವರ ಹೋರಾಟದ 40 ಬೇಡಿಕೆಗಳು ಏನಿತ್ತೋ, ಅದರ ಪ್ರಸ್ತಾಪ ಎಲ್ಲೂ ಆಗದಿರುವುದು ಎದ್ದು ಕಾಣುತ್ತಿದೆ. ಆ ಒಂದು ವಿಚಾರದಲ್ಲಿ ಸ್ವಲ್ಪ ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕೆಂದು ಕೋರುತ್ತೇನೆ. ಇವತ್ತು ಗುಲ್ಬರ್ಗಾ ಜಿಲ್ಲಾ ರಂಗ ಮಂದಿರ, ಬಹಳ ಹಳೆಯ construction, ಅದು ಇನ್ನೂ ಪೂರ್ಣಗೊಂಡಿಲ್ಲ. ಅದು ಆಗಬೇಕು. ಅದಕ್ಕೊಂದು ಲಕ್ಷ ಕೊಡುತ್ತೇವೆಂದು ಹೇಳಿದ್ದಾರೆ. ಅದೇ ರೀತಿ, ಇವತ್ತು 7 + 2 = 9 ಹೊಸ ಜಿಲ್ಲೆಗಳಾಗಿವೆ. ಆ 9 ಜಿಲ್ಲೆಗಳಲ್ಲೂ ಜಿಲ್ಲಾ ರಂಗ ಮಂದಿರಗಳಿಲ್ಲ. ಜಿಲ್ಲಾ ರಂಗ ಮಂದಿರಗಳನ್ನು ನಿರ್ಮಿಸಬೇಕೆಂದು ಹಿಂದೆ ನಾನು ಸಚಿವನಾಗಿದ್ದಾಗ ಕೂಡ ಸರ್ಕಾರಕ್ಕೆ ಒತ್ತಾಯ ತಂದಿದ್ದೆ. ಆ ಸಂದರ್ಭದಲ್ಲಿ ಮಧ್ಯದಲ್ಲೇ ಸರ್ಕಾರ ಪತನ ಆಗಿದ್ದರಿಂದಾಗಿ ಅದನ್ನು ಜಾರಿಗೆ ತರಲ್ಲಿಕ್ಕಾಗಲಿಲ್ಲ. ಈಗಲಾದರೂ ಮುಖ್ಯಮಂತ್ರಿಗಳು ಆ 9 ಜಿಲ್ಲೆಗಳಲ್ಲೂ ಜಿಲ್ಲಾ ರಂಗ ಮಂದಿರಗಳ ರಚನೆಗೆ ಕನಿಷ್ಟ ತಲಾ 3 ಕೋಟಿ ರೂಪಾಯಿಗಳ ಅನುದಾನವನ್ನು ಇಡಬೇಕು. ಗಡಿ ತಾಲ್ಲೂಕು ಏನು 52 ಇವೆ. ಅದರಲ್ಲಿ 45 ತಾಲ್ಲೂಕಿಗೆ ಮಾತ್ರ ಅನುದಾನ ಕೊಟ್ಟಿದ್ದೀರಿ

ಅಧ್ಯಕ್ಷರು:- ಟೈಮ್ ಲಿಮಿಟ್ ಇದೆ, ಬೇಗ ಮುಗಿಸಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:- ಮಾನ್ಯ ಅಧ್ಯಕ್ಷರೆ, ಹೇಳುವ ವಿಚಾರ ಬಹಳಷ್ಟು ಇದೆ.

ಅಧ್ಯಕ್ಷರು:- ಆಯಿತು, ಸ್ವಲ್ಪ ಬೇಗ ಮುಗಿಸಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:- ನಾನೇನೂ ಇಲ್ಲಿ ಟೀಕೆಗೋಸ್ಕರ ಮಾತನಾಡುತ್ತಿಲ್ಲ.

ಅಧ್ಯಕ್ಷರು:- ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ, ಅದರಲ್ಲೇನೂ ಸಂಶಯವಿಲ್ಲ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:- 47 ಗಡಿ ತಾಲ್ಲೂಕುಗಳಲ್ಲೂ ಗಡಿ ಭವನಗಳನ್ನು ಮಾಡಬೇಕು. ಮಾನ್ಯ ಉಪಾಧ್ಯಕ್ಷರಾಗಿ ಬೋಪಯ್ಯನವರು ಈಗ ತಾನೇ ಆಯ್ಕೆಯಾದರು ವೀರಾಜಪೇಟೆ ತಾಲ್ಲೂಕಿನಲ್ಲಿ ಕನ್ನಡಿಗರ ಪರಿಸ್ಥಿತಿ ಚೆನ್ನಾಗಿಲ್ಲ. ಅಲ್ಲಿ ಎಲ್ಲಾ ಮಲೆಯಾಳಿಮಯವಾಗಿದೆ. ವಿರಾಜಪೇಟೆ ತಾಲ್ಲೂಕಿನಲ್ಲಿ ಇವತ್ತು ಕೃಷಿ ಕಾರ್ಮಿಕರು ಏನು ಬಂದು ನೆಲೆಸಿದ್ದಾರೋ, ಅವರೇ ಪೂರ್ತಿ ಅಲ್ಲಿ

ಆಕ್ರಮಿಸಿಕೊಂಡು, ಅಲ್ಲಿ ಕನ್ನಡ ಮಾತನಾಡುವವರ ಸಂಖ್ಯೆಯೇ ಬಹಳ ಕಡಿಮೆಯಾಗಿದೆ. ಅಂತಹ ಕಡೆ ಒಂದು ಗಡಿ ಭವನ ಮಾಡಬೇಕು. ಅದಕ್ಕೆ ಅವಕಾಶ ಮಾಡಿಕೊಡಬೇಕು. ಯಾವ ರೀತಿ ಇವತ್ತು ಕೊಡಗು ಜಿಲ್ಲೆಯನ್ನು ಗುರುತಿಸಿ ಅವರಿಗೆ ಉಪಾಧ್ಯಕ್ಷ ಸ್ಥಾನ ನೀಡಿದ್ದೀರೋ, ಅದೇ ರೀತಿ ಆ ಕೊಡಗು ಜಿಲ್ಲೆಯಲ್ಲಿ ಕನ್ನಡ ಭಾಷೆ ನಶಿಸುತ್ತಾ ಬರುತ್ತಿದೆ. ಅಲ್ಲಿ ಭಾಷೆಗೆ ಹೆಚ್ಚಿನ ಉತ್ತೇಜನ ಕೊಡಬೇಕಾದರೆ, ಅಂತಹ ಗಡಿ ತಾಲ್ಲೂಕುಗಳೇನು ಇವೆ. ಬೆಳಗಾಂನಲ್ಲಿ ಇರಬಹುದು, ಕೋಲಾರದಲ್ಲಿ ಇರಬಹುದು, ಅಲ್ಲಿ ಗಡಿ ಭವನಗಳನ್ನು ನಿರ್ಮಿಸಬೇಕು. ಕೋಲಾರದಲ್ಲಿ ಇವತ್ತು ತೆಲುಗು ಭಾಷೆಯೇ ಪ್ರಾಮುಖ್ಯತೆ ಪಡೆದುಕೊಂಡಿದೆ. ಅಂತಹ ಕಡೆ ಇವತು ಗಡಿ ಭವನಗಳನ್ನು ಮಾಡಿ ಕನ್ನಡ ಭಾಷೆಯ ಬೆಳವಣಿಗೆಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಾಗ ಮಾತ್ರ ಈ ಒಂದು ಕಳಕಳಿ ಇಲ್ಲಿ ವ್ಯಕ್ತ ಆಗುತ್ತದೆ. ಆದುದರಿಂದ, ಅದನ್ನು ಗಡಿ ತಾಲ್ಲೂಕುಗಳಲ್ಲಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆಶಕ್ತ ಕಲಾವಿದರೇನಿದ್ದಾರೆ, ಅವರಿಗೆ ಮಾಸಾಶನವನ್ನು ಹೋದ ಸರ್ಕಾರದಲ್ಲಿ 500 ರೂ.ಗಳಿಂದ 1000 ರೂ.ಗಳಿಗೆ ಹೆಚ್ಚಿಸಲಾಗಿದೆ. ಆದರೆ ಅದು ಅವರಿಗೆ ಸಾಲುತ್ತಿಲ್ಲ, ಇವತ್ತು ಎಂ.ಪಿ.ಶಂಕರ್‌ರವರು ನಮ್ಮನ್ನು ಅಗಲಿದ್ದಾರೆ. ಅವರು ಕೊನೆಯ ಸಂದರ್ಭದಲ್ಲಿ ತಮ್ಮ ಚಿಕಿತ್ಸೆಗೆ ಅವರು ಪಟ್ಟಂತಹ ಒಂದು ಪಾಡು ನೀವು ಗಮನಿಸಿರಬೇಕು. ಮಾನು ಮುಖ್ಯಮಂತ್ರಿಗಳು ಆಗ 1 ಲಕ್ಷ ರೂ.ಗಳ ಅನುದಾನವನ್ನು ಕೂಡ ಕೊಟ್ಟಿದ್ದರು. ಆ ತರಹದ ಎಷ್ಟೋ ಆಶಕ ಚಲನಚಿತ್ರ ಕಲಾವಿದರಿಗೆ ಇವತ್ತು ಮಾಸಾಶನ ಸಿಗುತ್ತಿಲ್ಲ. ಪ್ರತಿ ವರ್ಷ 600 ಜನರಿಗೆ ಕೊಡಲು ಟರ್ಗೆಟ್ ಅನ್ನು ಇಲಾಖೆಯವರು ನಿಗದಿ ಮಾಡಿದ್ದಾರೆ. ಸುಮಾರು 8-10 ಸಾವಿರ ಅರ್ಜಿಗಳು ಪೆಂಡಿಂಗ್ ಇವೆ. ವರ್ಷಕ್ಕೆ 400 ಕೊಡುತ್ತಾ ಹೋದರೆ ಅರ್ಜಿ ಹಾಕಿರುವವರಿಗೆಲ್ಲಾ ಪೂರ್ಣಗೊಳಿಸುವ ಹೊತ್ತಿಗೆ ಅವರೆಲ್ಲಾ ಕಾಲವಾಗಿ ಬಿಡುತ್ತಾರೆ. ಆದ್ದರಿಂದ ಏಕಕಾಲದಲ್ಲಿ ಎಲ್ಲಾ ಅರ್ಹ ಅರ್ಜಿಗಳನ್ನು ಪರಿಗಣಿಸಿ ಅವರಿಗೆ ಮಾಸಾಶನ ಕೊಡುವಂತಹ ವ್ಯವಸ್ಥೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಆಗಬೇಕು. 25 ಕೋಟಿ ರೂ.ಗಳನ್ನು ವಿಶ್ವ ಕನ್ನಡ ಸಮ್ಮೇಳನಕ್ಕೆ, ನವೆಂಬರ್‌ನಲ್ಲೇ, ಡಿಸೆಂಬರ್‌ನಲ್ಲೋ ಮಾಡುತ್ತೇವೆಂದು ಕೊಟ್ಟಿದ್ದೀರಿ.

(ಈ ಹಂತದಲ್ಲಿ ಮಾನ್ಯ ಉಪ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಬಹುಶಃ ಮಾಡುವುದಾದರೆ, ನವೆಂಬರ್‌ನಲ್ಲಿ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಮಾಡಬಹುದು. ಹಿಂದೆ ಇದಕ್ಕಾಗಿ 10 ಕೋಟಿ ರೂ.ಗಳನ್ನು ಇಡಲಾಗಿತ್ತು. ಈಗ ಅದನ್ನು 25 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೀರಿ. ಆದರೆ ಅದಕ್ಕೆ ಹಣವಿಡುವುದು ಮುಖ್ಯವಲ್ಲ. ಈಗನಿಂದಲೇ ಅದಕ್ಕೆ ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ವಿಶ್ವ

ಕನ್ನಡ ಸಮ್ಮೇಳನಕ್ಕಾಗಿಯೇ ಹಿರಿಯ ಅಧಿಕಾರಿ ಒಬ್ಬರನ್ನು ನೇಮಕ ಮಾಡಬೇಕು. ಒಂದು ಕಮಿಷನರ್ ಹುದ್ದೆಯನ್ನು ಹಿಂದೆ ಅದಕ್ಕಾಗಿ ನೇಮಕ ಮಾಡಲಾಗಿತ್ತು. ಆ ತರಹ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ. ಏಕೆಂದರೆ, ಬೇರೆ ಬೇರೆ ದೇಶದಿಂದ ಬರುವವರೆಲ್ಲಾ ವೀಸಾಗೆ ಈಗಿನಿಂದಲೇ apply ಮಾಡಿಕೊಳ್ಳಬೇಕಾಗುತ್ತದೆ. ಕೊನೇ ಗಳಿಗೆಯಲ್ಲಿ ಅವರನ್ನು ಆಹ್ವಾನಿಸುವುದಕ್ಕಾಗುವುದಿಲ್ಲ. ಆದ್ದರಿಂದ ಅದಕ್ಕೆ ಈಗಿನಿಂದಲೇ ಸಿದ್ಧತೆಗಳನ್ನು ಮಾಡತಕ್ಕಂಥ ಕೆಲಸ ಮಾಡಿದರೆ ಮಾತ್ರ ಆ 25 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಸಮ್ಮೇಳನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಮತ್ತೆ ಅದನ್ನು ಮಾಡಬೇಕು, ಈಗಿನಿಂದಲೇ ಆ ಕಾರ್ಯಕ್ಕೆ ಚಾಲನೆ ಕೊಡಬೇಕು. ಬಿ.ವಿ.ಕಾರಂತರು ಬದುಕಿದ್ದ ಸಂದರ್ಭದಲ್ಲಿ ಅನೇಕ ಪರಿಕರಗಳನ್ನು, ಪುಸ್ತಕಗಳನ್ನು ಅವರು ರಾಷ್ಟ್ರಾದ್ಯಂತ ಸಂಚಾರ ಮಾಡಿ, ನಾಟಕ, ಕಲಡ ಮತ್ತು ಸಾಹಿತ್ಯದ ಬಗ್ಗೆ ಸಂಗ್ರಹ ಮಾಡಿದ್ದರು. ಪ್ರೇಮ ಕಾರಂತ್‌ರವರೂ ಸಹ ದಿವಂಗತರಾದರು. ಅವರು ಇದ್ದಂತಹ ಸಂದರ್ಭದಲ್ಲಿ ನಾನು ಹೋಗಿ, ಅವುಗಳನ್ನೆಲ್ಲಾ ಸಂಗ್ರಹಿಸಿ, ರಂಗಾಯಣದಲ್ಲಿ ಅವುಗಳನ್ನು ವಸ್ತು ಸಂಗ್ರಹಾಲಯದ ರೂಪದಲ್ಲಿ ಇಡಬೇಕೆಂದು ಪ್ರಯತ್ನ ಮಾಡಿದ್ದೆ. ಅದಕ್ಕಾಗಿ ಅವರಿಗೆ 10 ಲಕ್ಷ ರೂ.ಗಳನ್ನು ನೆರವಿನ ಘೋಷಣೆ ಕೂಡ ಮಾಡಲಾಗಿತ್ತು. ಆದರೆ ಕಾರಣಾಂತರಗಳಿಂದ ಅದು ಕೈಗೂಡಿಲ್ಲ. ಅದನ್ನು ಮಾಡಬೇಕಾದ ಅಗತ್ಯವಿದೆ. ರಾಮನಗರದಲ್ಲಿ ಡಾ: ಹೆಚ್.ಎಲ್.ನಾಗೇಗೌಡ ಸ್ಥಾಪಿಸಿರುವ ಜಾನಪದ ಲೋಕದ ರೀತಿ ಉತ್ತರ ಕರ್ನಾಟಕದಲ್ಲೂ ಜಾನಪದ ಲೋಕವನ್ನು ಸ್ಥಾಪನೆ ಮಾಡಬೇಕು. ಆ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಕೇವಲ ಹಣ ಘೋಷಣೆ ಮಾಡುವುದರಿಂದ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬರುವುದಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನೇರವಾಗಿ ಡೈರೆಕ್ಟರ್ ಎನ್ನುವ ಹುದ್ದೆಯೇ ಇಲ್ಲ. ಅಲ್ಲಿ ಇಲಾಖೆಯವರು ಇರಬೇಕೋ deputation ಮೇಲೆ ಇರಬೇಕೋ? ಒಂದೂ ಅರ್ಥವಾಗುತ್ತಿಲ್ಲ. ನೌಕರ ವರ್ಗ ಸಾಕಷ್ಟು ಸಂಖ್ಯೆಯಲ್ಲಿ ಖಾಲಿ ಇದೆ. ಆ ಇಲಾಖೆಗೆ ಹೆಚ್ಚಿನ ಮಹತ್ವವನ್ನು ಕೊಡಬೇಕಾದರೆ ಆ ಹುದ್ದೆಗಳನ್ನು ಭರ್ತಿ ಮಾಡಬೇಕು.

ಪ್ರತಿಯೊಂದು ಜಿಲ್ಲೆಗೆ ಸಹಾಯಕ ನಿರ್ದೇಶಕರೆಂದು ಏನು ಇದ್ದಾರೆ ಅವರಿಗೆ ಒಂದೊಂದು ವಾಹನಗಳನ್ನು ಒದಗಿಸಬೇಕು. ಅವರನ್ನು ಅಟೆಂಡರ್ ರೀತಿ ಎಲ್ಲಾ ಕಡೆ ಸಿಇಒ, ಜಿಲ್ಲಾಧಿಕಾರಿಗಳು ಸುತ್ತಾಡಿಸುತ್ತಾರೆ. ಆದುದರಿಂದ ಅವರಿಗೆ ಆ ರೀತಿ ಸ್ಥಾನಮಾನವನ್ನು ಕೊಡಬೇಕು. ಇವತ್ತಿನವರೆಗೆ ಸರ್ಕಾರ ಬಂದು ಎರಡು ತಿಂಗಳಾಯಿತು, ಅಕಾಡೆಮಿಗಳಿಗೆ ಅಧ್ಯಕ್ಷರ ನೇಮಕವಾಗಲಿಲ್ಲ, ಅವನ್ನೆಲ್ಲಾ ಹಾಗೆ ಉಳಿಸಿಕೊಂಡು ಬಂದಿದ್ದೀರಿ, ಅವುಗಳನ್ನೆಲ್ಲಾ ಆದಷ್ಟು ಬೇಗ ನೇಮಕ

ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಒಂದು ರಾಷ್ಟ್ರೀಯ ನಾಟಕ ಶಾಲೆಯನ್ನು ತೆರೆಯುವುದಕ್ಕೆ ಪ್ರಸನ್ನ ಎಂಬ ರಂಗಕರ್ಮಿಗಳು ಆಮರಣಾಂತ ಉಪವಾಸ ಕುಳಿತಾಗ ಸರ್ಕಾರ ಹೋಗಿ ಅವರ ಮನವೊಲಿಸಿ ಪ್ರಯತ್ನ ಮಾಡಿತು. ಆದರೆ ಇವತ್ತಿನವರೆಗೆ ಆ ರಾಷ್ಟ್ರೀಯ ನಾಟಕ ಶಾಲೆ ಮಾಡುವ ಕಾರ್ಯ ಮುಂದಕ್ಕೆ ಹೋಗಿಲ್ಲ, ಅದನ್ನು ಸ್ಥಾಪನೆ ಮಾಡುವ ಪ್ರಯತ್ನ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿ, ಅವರು ಉತ್ತರ ಕೊಡುವ ಸಂದರ್ಭದಲ್ಲಿ ಈ ಬಗ್ಗೆ ತಿಳಿಸುತ್ತಾರೆಂದು ಭಾವಿಸುತ್ತೇನೆ. ಜೊತೆಗೆ ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ರಂಗಮಂದಿರಕ್ಕೆ ಪೂರಕ ಅಂದಾಜಿನಲ್ಲಾದರೂ ನೀಡುವ ಮೂಲಕ ಅಲ್ಲೊಂದು ಸುಸಜ್ಜಿತವಾದ ಜಿಲ್ಲಾ ರಂಗಮಂದಿರ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿಯಲ್ಲಿ ನಮ್ಮ ಪ್ರವಾಸೋದ್ಯಮ ಇಲಾಖೆಯಲ್ಲಿ ಹಿಂದಿನ ಸರ್ಕಾರದಲ್ಲಿ ಹೊಸ ಕಲ್ಪನೆಯಲ್ಲಿ ಜಲಪಾತೋತ್ಸವವೆಂದು ಮಾಡಿದೆವು. ಬಹುಶಃ ಗಗನಚುಕ್ಕಿ ಬರಚುಕ್ಕಿ ಇದೇ ಸಂದರ್ಭದಲ್ಲಿ ಭೋರ್ಗರೆಯುತ್ತಿರುವಾಗ ನಯಾಗರ ಫಾಲ್ಸ್‌ನಲ್ಲಿ ಲೈಟಿಂಗ್ ಕೊಟ್ಟು ಯಾವ ರೀತಿ ಜನಾಕರ್ಷಣೆಯನ್ನು ಮಾಡಿದ್ದಾರೆ ಆ ರೀತಿಯಲ್ಲಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಿ ಲಕ್ಷಾಂತರ ಜನ ಅದನ್ನು ಟಿವಿಗಳಲ್ಲಿ ನೋಡುವಂತಾಗಲಿ, ಬರಚುಕ್ಕಿಯಲ್ಲಿ ನೂರುವರ್ಷಗಳ ಹಿಂದೆ ವಿದ್ಯುತ್ ಉತ್ಪಾದನಾ ಘಟಕ ಆರಂಭವಾಗಿದ್ದು, ಅಲ್ಲಿಂದ ಇಲ್ಲಿಯವರೆಗೆ ಯಾವುದೇ ಅಭಿವೃದ್ಧಿಯಾಗಿಲ್ಲ. ಅದಕ್ಕೆ ಪ್ರವಾಸೋದ್ಯಮ ಇಲಾಖೆ ಮೂಲಕ ಚಾಲನೆ ಮಾಡಿ ಕೇಂದ್ರ ಸರ್ಕಾರವನ್ನು ಕೇಳಿದ್ದಕ್ಕೆ 7 ಕೋಟಿ ರೂಪಾಯಿಗಳನ್ನು ಇವತ್ತು ಬಿಡುಗಡೆ ಮಾಡಿದೆ. ಅದಕ್ಕೆ ಬೇಕಾದ ರಾಜ್ಯ ಸರ್ಕಾರದ ಅನುದಾನವನ್ನು ಪ್ರವಾಸೋದ್ಯಮ ಇಲಾಖೆಯ ಮೂಲಕ ಬಿಡುಗಡೆ ಮಾಡುವುದರ ಮೂಲಕ ಜಲಪಾತಗಳನ್ನು ಅಭಿವೃದ್ಧಿಪಡಿಸುವ ಒಂದು ಯೋಜನೆಯನ್ನು ಟೂರಿಸಂ ಇಲಾಖೆಯ ಜೊತೆಗೂಡಿ ಮಾಡಬೇಕೆಂಬುದನ್ನು ಹೇಳಬಯಸುತ್ತೇನೆ. ನಮ್ಮ ಚಾಮರಾಜನಗರ ಜಿಲ್ಲೆಗೆ ಒಂದು ವಿಮಾನ ನಿಲ್ದಾಣವನ್ನು ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ಚಾಮರಾಜನಗರಕ್ಕೆ ಜನರು ಬರುವುದೇ ಕಷ್ಟ. ಆದುದರಿಂದ ಮಲೆಮಹಾದೇಶ್ವರ ಬೆಟ್ಟದಲ್ಲಿ ಒಂದು ವಿಮಾನ ನಿಲ್ದಾಣವನ್ನು ಮಾಡಿದರೆ ಸ್ವಲ್ಪ ಪ್ರವಾಸಿಗರು ಅಲ್ಲಿಗೆ ಬರುವುದಕ್ಕಾಗುತ್ತದೆ. ಹೊಗೇನ್‌ಕಲ್ ಫಾಲ್ಸ್ ಇವತ್ತು ಅಂತರ್‌ರಾಜ್ಯ ಗಡಿ ವಿವಾದದಲ್ಲಿ ಹಾಗೂ ತಮಿಳು ನಾಡಿನ ಕುಡಿಯುವ ನೀರಿನ ಯೋಜನೆಯ ವಿಚಾರದಲ್ಲಿ ಬಹಳ ಚರ್ಚೆಯಲ್ಲಿದೆ. ನಮ್ಮ ಭಾಗದಿಂದ ಆ ಒಂದು ವ್ಯೂ ಪಾಯಿಂಟ್ ಏನಿದೆ, ಅದು ನಮ್ಮ ಜಿಲ್ಲೆಯ, ನಮ್ಮ ರಾಜ್ಯದಲ್ಲಿರುವುದು. ಆದರೆ ಅದು ಪೂರ್ಣ ಅರಣ್ಯ ಇಲಾಖೆಗೆ

ಸೇರಿಕೊಂಡಿರುವುದರಿಂದ ಅಲ್ಲಿ ನಾವು ಅಭಿವೃದ್ಧಿಪಡಿಸುವುದಕ್ಕೆ ತೊಂದರೆ ಇದೆ. ಆದುದರಿಂದ Jungle Lodges and Resorts ಮುಖಾಂತರ ಒಂದು ಹತ್ತು ಎಕರೆ ಜಮೀನನ್ನು ಬಿಡುಗಡೆ ಮಾಡಿಸಿಕೊಂಡು ಅಲ್ಲಿ ಒಂದು Jungle Lodge ಅನ್ನು ಪ್ರಾರಂಭ ಮಾಡಿದರೆ ನಮ್ಮ ರಾಜ್ಯದಿಂದಲೂ ಪ್ರವಾಸಿಗರನ್ನು ಆಕರ್ಷಣೆ ಮಾಡುವುದಕ್ಕೆ ಸಾಧ್ಯವಿದೆ. ಇವತ್ತು ತಮಿಳುನಾಡು ಯಥೇಚ್ಚವಾಗಿ ನಮ್ಮಲ್ಲಿರುವ ಪ್ರಕೃತಿ ಸೌಂಧರ್ಯವನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ' ಆ ಬಗ್ಗೆ ಪ್ರಸ್ತಾಪವಾಗಬೇಕಾಗಿತ್ತು ಆ ಬಗ್ಗೆ ಆಗಿಲ್ಲ, ಇದನ್ನು ಉತ್ತರದಲ್ಲಾದರೂ ತಿಳಿಸಬೇಕು. ಏಕೆಂದರೆ ಈತ ಇವನ್ನು ಸೇರಿಸಿದರೆ ಇವೆಲ್ಲಾ ಪೂರ್ಣಗೊಳ್ಳಬೇಕಾದರೆ 5 ವರ್ಷ ಬೇಕು. ತಾವು ಇನ್ನೂ 4 ಬಜೆಟ್ ಮಂಡಿಸುವ ಅವಕಾಶವಿದೆ, ಆಗ ತಿಳಿಸುತ್ತೇವೆಂದು ಹೇಳಬಹುದು, ಪ್ರಾರಂಭದಲ್ಲಿ ತಿಳಿಸಿದರೆ ಅದಕ್ಕೆ ಚಾಲನೆ ಸಿಗುತ್ತದೆ, ಆದುದರಿಂದ ಆ ಕೆಲಸವನ್ನು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇನ್ನು ವಾಣಿಜ್ಯ ಮತ್ತು ಕೈಗಾರಿಕೆಯ ವಿಚಾರದಲ್ಲಿ ನಮ್ಮ ಭಾಗಕ್ಕೆ ಬಹಳ ಅನ್ಯಾಯವಾಗಿದೆ. ಹೇಳಿಕೇಳಿ ನಮ್ಮ ಚಾಮರಾಜನಗರ ಜಿಲ್ಲೆ ಬರಡು ಭೂಮಿ. ಅಲ್ಲಿ ಅಲ್ಪಸ್ವಲ್ಪ ಗಣಿಗಾರಿಕೆಗೆ ಅವಕಾಶವಿದೆ. ಹಿಂದೆ ಸಂತೆಮಾರೇನಹಳ್ಳಿಯಲ್ಲಿ ಒಂದು ಗ್ರಾನೈಟ್ ಪಾರ್ಕ್ ಮಾಡಬೇಕೆಂದು ಪ್ರಯತ್ನವನ್ನು ಕೂಡ ಮಾಡಲಾಗಿತ್ತು. ಇವತ್ತು ಅಲ್ಲೊಂದು ಗ್ರಾನೈಟ್ ಪಾರ್ಕ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. 6 ವಿಶೇಷ ವಲಯಗಳನ್ನು ಖಾಸಗಿ ಸಯಭಾಗಿತ್ವದಲ್ಲಿ ರೂಪಿಸಲಾಗುವುದೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಬಳ್ಳಾರಿ, ಕೊಪ್ಪಳ, ರಾಯಚೂರು, ಬಾಗಲುಕೋಟೆ, ಉಕ್ಕು ವಲಯ, ಸಿಮೆಂಟ್ ವಲಯ ಮತ್ತೆ ಆಹಾರ ವಲಯ ಎಂದು 6 ಸ್ಥಳಗಳನ್ನು ಹೇಳಿದ್ದಾರೆ. ಏಕೆಂದರೆ ನಮಗೆ ನೋವಿದೆ, ನಮ್ಮ ಜಿಲ್ಲೆಯಾಗಿ 10 ವರ್ಷವಾಯಿತು, ಇವತ್ತು ಚಾಮರಾಜನಗರ ಜಿಲ್ಲೆಯಲ್ಲಿ ಯಾರು ಬಿಜೆಪಿ ಶಾಸಕರು ಗೆಲ್ಲಲಿಲ್ಲವೆಂದು ಆ ಜಿಲ್ಲೆಯನ್ನು ಕೈಬಿಟ್ಟರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಮುಂದೆ ಅನೇಕ ಸಂದರ್ಭಗಳಲ್ಲಿ ನಮ್ಮ ಜಿಲ್ಲೆಯ ಸಭೆ ಸಮಾರಂಭಗಳಿಗೆ ಬರಬೇಕಾಗುತ್ತದೆ. ಯಾವುದಾದರೂ ಒಂದು ಕೈಗಾರಿಕಾ ವಲಯದಲ್ಲಿ ಚಾಮರಾಜನಗರ ಜಿಲ್ಲೆಯನ್ನು ಸೇರಿಸುತ್ತೇವೆ ಎನ್ನುವ ಉತ್ತರವನ್ನು ಅವರು ಕೊಟ್ಟರೆ ನಮಗೆಲ್ಲಾ ಖುಷಿಯಾಗುತ್ತದೆ, ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ನಮ್ಮ ಭಾಗಕ್ಕೆಲ್ಲಾ ಬಹಳ ನೆರವನ್ನು ಕೊಡುತ್ತಾರೆಂದು ಬಹಳ ಆಸೆಯನ್ನು ಇಟ್ಟುಕೊಂಡಿದ್ದೇವೆ. ಅವರು ಚಾಮರಾಜನಗರ ಜಿಲ್ಲೆಯನ್ನು ಅಷ್ಟು ನಿರ್ಲಕ್ಷ ಮಾಡಬಾರದು ಎಂದು ಹೇಳಿ, ಕೈಗಾರಿಕಾ ವಲಯದಲ್ಲಿ ನಮ್ಮ ಜಿಲ್ಲೆಗೆ ಒಂದು ಗ್ರಾನೈಟ್ ಪಾರ್ಕ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆಂದು ನಾನು

ಆಶಿಸುತ್ತೇನೆ. ಇನ್ನು ಆಹಾರ ಇಲಾಖೆ ಬಗ್ಗೆ ಹೇಳುವುದಾದರೆ, ನಾನು ಕೂಡ ಈ ಆಹಾರ ಇಲಾಖಾ ಸಚಿವನಾಗಿ ಕೆಲಸವನ್ನು ಮಾಡಿದ್ದೇನೆ, ಇದರ ನಿರ್ವಹಣೆ ಮಾಡಿ ಜನರ ಮನ್ನಣೆಯನ್ನು ಗಳಿಸುವುದು ಬಹಳ ಕಷ್ಟ. ಹಾಗಾಗಿ, ಇಲ್ಲಿ ಏನಾಗಿದೆ ಎಂದರೆ, ಹಿಂದೆ ಜೆಡಿ(ಎಸ್) ಮತ್ತು ಕಾಂಗ್ರೆಸ್ ಪಕ್ಷ ಸೇರಿ ಸಮ್ಮಿಶ್ರ ಸರ್ಕಾರ ಮಾಡಿದ ಸಂದರ್ಭದಲ್ಲಿ 3 ರೂಪಾಯಿಗಳಿಗೆ ಒಂದು ಕೆ.ಜಿ ಅಕ್ಕಿಯನ್ನು ಕೊಡುವ ಘೋಷಣೆಯನ್ನು ಮಾಡಿದರೋ ಆಗ ಸಹಜವಾಗಿ ಗ್ರಾಹಕರಿಂದ ಬೇಡಿಕೆ ಜಾಸ್ತಿಯಾಯಿತು. ಆಗ ಬೆಂಗಳೂರು ನಗರ ಹೊರತುಪಡಿಸಿ ಒಂದು ಪುನರ್ ಸಮೀಕ್ಷೆ ಮಾಡಿ ಅರ್ಹ ಬಡ ಕುಟುಂಬಗಳನ್ನು ಗುರುತಿಸಬೇಕೆಂದು ತೀರ್ಮಾನ ಮಾಡಲಾಯಿತು. ಆ ರೀತಿ ಮಾಡಿದಾಗ ಸುಮಾರು 1,18,00,000 ಕುಟುಂಬಗಳನ್ನು ಗುರುತಿಸಿ, ಅದರಲ್ಲಿ ಅರ್ಹ ಬಡ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ಕೊಡಬೇಕೆಂಬುದಾಯಿತು. ಕೊಡುವ ಸಂದರ್ಭದಲ್ಲಿ ಇಲಾಖೆಯನ್ನು ಗಣಕೀಕರಣ ಮಾಡಬೇಕು, ಆಗ ಪಾರದರ್ಶಕತೆ ಬರುತ್ತದೆ, ಅದರಿಂದ ಈ ಸೋರಿಕೆಯನ್ನು ತಡೆಗಟ್ಟಬಹುದು ಎಂದು ತೀರ್ಮಾನಿಸಲಾಯಿತು. ಪ್ರತಿ ತಿಂಗಳು ಈ ಆಹಾರ ವಿತರಣೆಯಲ್ಲಿ ಸರ್ಕಾರಕ್ಕೆ ಕನಿಷ್ಟ 10 ಕೋಟಿ ರೂಪಾಯಿಗಳು ನಷ್ಟವಾಗುತ್ತದೆ, ಇದು ಮಧ್ಯವರ್ತಿಗಳ ಪಾಲಾಗುತ್ತಿದೆ. ಗೋದಾಮುಗಳಿಂದ ಆಹಾರ ಸರಬರಾಜು ಆಗುವುದರಲ್ಲಿರಬಹುದು ಅಥವಾ ನ್ಯಾಯಬೆಲೆ ಅಂಗಡಿಗಳಿಂದ ಗ್ರಾಹಕರಿಗೆ ತಲುಪಿಸುವುದರಲ್ಲಿ ಪ್ರತಿ ತಿಂಗಳು ಸುಮಾರು 10 ಕೋಟಿ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಗುತ್ತಿದೆ. ಇದನ್ನು ತಡೆಗಟ್ಟಲು ಒಂದು ಪಾರದರ್ಶಕವಾದ ರೀತಿಯಲ್ಲಿ ಇಲಾಖೆಯಲ್ಲಿ ಗಣಕೀಕರಣ ಮಾಡಿ, ಅಲಾಟ್‌ಮೆಂಟ್‌ನಿಂದ ಹಿಡಿದು ವಿತರಣೆಯವರೆಗೆ ಮತ್ತು ರೇಷನ್ ಕಾರ್ಡ್‌ಗಳನ್ನು ಕೂಡ ಫೋಟೋಗ್ರಾಫಿ ಮಾಡಿಸಿ ಪ್ರತಿಯೊಬ್ಬ ಫಲಾನುಭವಿಯ ಫೋಟೋ ಮತ್ತು ಅವರ ಕುಟುಂಬವರ್ಗದವರ ಫೋಟೋ ಇದ್ದರೆ ದುರ್ಬಳಿಕೆಯಾಗುವುದು ತಪ್ಪುತ್ತದೆ. ಮತ್ತೆ ಯಾರೋ ಫಲಾನುಭವಿ ಈ ಕಾರ್ಡನ್ನು ದುರ್ಬಳಕೆ ಮಾಡುವುದು ತಪ್ಪುತ್ತದೆ. ಒಬ್ಬ ನ್ಯಾಯಬೆಲೆ ಅಂಗಡಿಯವರು 50–100 ಕಾರ್ಡ್‌ಗಳನ್ನು ತಮ್ಮ ವಶದಲ್ಲಿಟ್ಟುಕೊಂಡಿರುತ್ತಾರೆ, ಆ ಅನುಕೂಲವನ್ನು ಅವರು ಪಡೆಯುತ್ತಿರುತ್ತಾರೆ ನೇರವಾಗಿ ಫಲಾನುಭವಿಗೆ ಅದು ಹೋಗುವುದೇ ಇಲ್ಲ. ಏಕೆಂದರೆ, ಸರಿಯಾದ ರೀತಿಯಲ್ಲಿ ನ್ಯಾಯಬೆಲೆ ಅಂಗಡಿಯವರು ನಡೆಸಿದರೆ ಇಲಾಖೆ ಕೊಡುವ ಕಮಿಷನ್‌ನಲ್ಲಿ ರಾಜ್ಯದ 20,000 ನ್ಯಾಯಬೆಲೆ ಅಂಗಡಿಗಳನ್ನು ನಡೆಸುವುದಕ್ಕೆ ಸಾಧ್ಯವೇ ಇಲ್ಲ. ಅವರು ಏನು ಮಾಡುತ್ತಾರೆಂದರೆ, ಈ ರೀತಿ ಹಳದಿ, ಬಿಪಿಎಲ್ ಕಾರ್ಡ್‌ಗಳನ್ನು ತಮ್ಮಲ್ಲಿಟ್ಟುಕೊಂಡು ಅನುಕೂಲ ಪಡೆಯುತ್ತಿರುತ್ತಾರೆ. ಅದನ್ನು ತಪ್ಪಿಸುವುದಕ್ಕೋಸ್ಕರ, ಗಣಕೀಕೃತ

ಪೋಟೋ ಕಾರ್ಡ್‌ಗಳನ್ನು ನೀಡುವ ಪ್ರಯತ್ನವನ್ನು ಇಲಾಖೆ ಮಾಡಿತು. ಸರ್ಕಾರಿ ಅಧಿಕಾರಿಗಳು ಬದಲಾವಣೆಯಾದಂತೆ ನಾವು ಬದಲಾವಣೆಯಾದೆವು. ಅನಂತರ ಮತ್ತೊಂದು ಸರ್ಕಾರದಲ್ಲಿ ಅದಕ್ಕೆ ಪ್ರಯತ್ನ ನಡೆಯಿತು, ಸರಿಯಾದ ತೀರ್ಮಾನಗಳಾಗಲಿಲ್ಲ, ಆ ನಂತರ ರಾಜ್ಯಪಾಲರ ಆಡಳಿತ ಬಂತು ಚುನಾವಣೆ ಬಂತು ಮತ್ತೆ ಈಗ ಸರ್ಕಾರ ಅಸ್ಥಿತ್ವಕ್ಕೆ ಫಲಾನುಭವಿಗಳಿಗೆ ಕೊಡುವವರೆಗೆ ಈ ಸಮಸ್ಯೆ ಇದೇ ರೀತಿಯಾಗಿ ಚರ್ಚೆಯಲ್ಲಿರುತ್ತದೆ. ಆದುದರಿಂದ ಆ ಕಾರ್ಡ್ ಕೊಡಿಸುವ ಕೆಲಸವನ್ನು ಬಹಳ ತ್ವರಿತಗತಿಯಲ್ಲಿ ಮಾಡಿ. ಇನ್ನು ಒಂದು ತಿಂಗಳೋ ಎರಡು ತಿಂಗಳಲ್ಲೋ ಆ ಪೋಟೋ ಕಾರ್ಡ್‌ಗಳನ್ನು ಮಾಡಿಸಿ ಕೊಟ್ಟರೆ ಆಗ ಎಲ್ಲರೂ ತಮ್ಮ ಕಾರ್ಡ್‌ಗಳನ್ನು ಹೊಂದಿರುತ್ತಾರೆ, ಯಾರೇ ಹೆಚ್ಚುವರಿಯಾಗಿ ಕಾರ್ಡ್ ಕೇಳಿದರೂ ಕೂಡ ಕಂಪ್ಯೂಟರ್‌ನಲ್ಲಿ ಅವರ ಪೋಟೋ ಟ್ರೇಸ್ ಆಗುತ್ತದೆ, ಇದರಿಂದ ಅವರಿಗೆ ಕಾರ್ಡ್ ಇದೆಯೋ ಇಲ್ಲವೋ ಎನ್ನುವುದು ಗೊತ್ತಾಗುತ್ತದೆ, ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇವತ್ತು ಆಹಾರ ಇಲಾಖೆಯಲ್ಲಿ ಏನಾಗಿದೆ ಎಂದರೆ, ನಮ್ಮ ಅಧಿಕಾರಿಗಳು ಗೊಂದಲವನ್ನು ಸೃಷ್ಟಿ ಮಾಡುತ್ತಿದ್ದಾರೆ, ಇದು ಜನಗಳಿಂದ ಸೃಷ್ಟಿಯಾಗಿರುವ ಗೊಂದಲವಲ್ಲ. ಹಿಂದೆ ಒಬ್ಬರು ಕಾರ್ಯದರ್ಶಿಗಳಿದ್ದರು, ಅವರು ಅನೇಕ ಸುತ್ತೋಲೆಗಳನ್ನು ರಾಜ್ಯಪಾಲರ ಆಡಳಿತದಲ್ಲಿ ಹೊರಡಿಸಿದರು ಆಗ ನಾವು ಹೇಳಿದರು, ನಮ್ಮ ಮಾತಿಗೆ ಬೆಲೆ ಇರುತ್ತಿರಲಿಲ್ಲ.

ಇವತ್ತು ಏನಾಗಿದೆ, 2001ರ ಜನಗಣತಿ ಪ್ರಕಾರ ನಮ್ಮ ರಾಜ್ಯದಲ್ಲಿ ಒಂದು ಕೋಟಿ ಎರಡು ಲಕ್ಷ ಕುಟುಂಬಗಳಿವೆ. ನಮ್ಮ 2005ರ ಆಹಾರ ಸಮೀಕ್ಷೆ ಪ್ರಕಾರ 1,39,6,828 ಜನ APL, BPL ಕಾರ್ಡುಗಳನ್ನು ಹೊಂದಿರುವ ಕುಟುಂಬಗಳಿವೆ ಎಂದು ಸಮೀಕ್ಷೆಯಿಂದ ತಿಳಿದು ಬಂದಿದೆ. 2001ರ ಜನಗಣತಿ ಪ್ರಕಾರ ಇರುವ ಕುಟುಂಬಗಳ ಸಂಖ್ಯೆಗೂ ಪಡಿತರ ವಿತರಣೆಗಾಗಿ ಮಾಡಿದ ಸಮೀಕ್ಷೆಯ ಕುಟುಂಬಗಳ ಸಂಖ್ಯೆಗೂ ಸುಮಾರು 37 ಲಕ್ಷ ಕುಟುಂಬಗಳು ಹೆಚ್ಚಾಗಿವೆ. ಏಕೆ ಹೆಚ್ಚಾಗಿವೆ ಎಂದರೆ, ಇವರು ಪಡಿತರ ವಿತರಣೆಯಲ್ಲಿ ನಮಗೂ ಏನಾದರೂ ಸೌಲಭ್ಯ ಸಿಗಬಹುದು, ರಿಯಾಯಿತಿ ದರದಲ್ಲಿ ಸಿಗುವಂತಹ ಆಹಾರ ಪದಾರ್ಥ ನಮಗೂ ಸಿಗಲಿ ಎನ್ನತಕ್ಕಂತಹ ದೃಷ್ಟಿಯಿಂದ ಇಷ್ಟು ವಿಭಜಿತ ಕುಟುಂಬಗಳ ಸಂಖ್ಯೆ ಹೆಚ್ಚಾಗಿದೆ. ಆದರೆ ಈ BPL card ratio ತೆಗೆಯುವಾಗ ಆಹಾರ ಇಲಾಖೆ ಪತ್ತೆ ಹಚ್ಚಿರುವಂತಹ ಸಮೀಕ್ಷೆಯಲ್ಲಿ ಬಂದಿರುವಂತಹ ಕುಟುಂಬಗಳ ಸಂಖ್ಯೆ ಏನಿದೆ, ಇದರ ಮೇಲೆ ಶೇಕಡವಾರು ತೆಗೆಯಬೇಕೇ ಹೊರತು, ನೀವು 2001ರ ಜನಗಣತಿ ಶೇಕಡಾವಾರು ಇಟ್ಟುಕೊಂಡು 80% ಆಗಿದೆ, 90% ಆಗಿದೆ, ಕ್ಯಾನ್ಸಲ್ ಮಾಡಿ ಎಂದರೆ, ಇದಕ್ಕೆ ಏನಾದರೂ ಅರ್ಥ ಇದೆಯಾ? 2001ರ ಜನಗಣತಿ ಪ್ರಕಾರ 60,000

ಕುಟುಂಬಗಳಿಗೆ ಏನು ಕೊಡುತ್ತಿದ್ದಾರೆ, ಅದರ ಪ್ರಕಾರ 58% ಬರುತ್ತದೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಆಹಾರ ಸಚಿವರು ಸಭೆ ಕರೆದಾಗ ಆ ಇಲಾಖೆಯವರು 77% ಇದೆ ಎಂದು ಹೇಳುತ್ತಾರೆ. ಇದನ್ನು 65%ಗೆ ಇಳಿಸಿ ಎಂದಾಗ ಕೆಳ ಹಂತದ ಅಧಿಕಾರಿಗಳು ಏನು ಮಾಡುತ್ತಾರೆಂದರೆ ಯಾರು ಸಿಗುತ್ತಾರೆ ಅವರ ಕಾರ್ಡ್‌ಗಳನ್ನು ಕಟ್ ಮಾಡಿ ಒಟ್ಟಿನಲ್ಲಿ 65%ಗೆ ಇಳಿಸಿ ಬಿಟ್ಟರೆ ನಾವು ಸೇಫಾಗಿರುತ್ತೇವೆ, ನಮಗೆ ಯಾವುದೇ ತೊಂದರೆ ಇಲ್ಲವೆಂದು ಹೇಳಿ, ಆ ಕೆಳ ಹಂತದ ಅಧಿಕಾರಿಗಳು ಈ ರೀತಿ ಮಾಡುತ್ತಾರೆ, ಸಿಕ್ಕಿ ಸಕ್ಕಿದವರ ಕಾರ್ಡ್‌ಗಳನ್ನೆಲ್ಲಾ ರದ್ದುಪಡಿಸುತ್ತಾ ಹೋಗುತ್ತಾರೆ. ಆದ್ದರಿಂದ ಇಲ್ಲಿ ಏನು ನೀವು ಜಿ–9 ಕೊಡಬೇಕೆಂದು ಒಂದು ಆದೇಶ ಮಾಡಿದ್ದೀರಿ, ಅದನ್ನು ಕೊಟ್ಟ ಮೇಲೆ ಕೂಡ ರಾಜ್ಯದಲ್ಲಿ 79 ಲಕ್ಷ BPL ಕಾರ್ಡ್‌ದಾರರು ಉಳಿಯುತ್ತಾರೆ, 59 ಲಕ್ಷ APL ಕಾರ್ಡ್‌ದಾರರು ಆ ಪ್ರಕಾರ ಸರ್ಕಾರದ ಲೆಕ್ಕ ಕೊಡುವುದು 77% ಆದರೆ ವಾಸ್ತವವಾಗಿ 57.0ಪ%ಗೆ ನಿಲ್ಲುತ್ತದೆ. ಸರ್ಕಾರ ನಿಗದಿಪಡಿಸಿರುವುದು 65% ಒಳಗಡೆ ಇರಬೇಕೆಂದು. ಇವತ್ತು 57% ಇದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಂಕಲ್ಪ ಭಾಷಣದಲ್ಲಿ ಕೂಡ ಹೇಳಿದ್ದಾರೆ. ಮೊದಲನೇ ವಿಚಾರವೇ ತಾವು ಹೇಳಿರತಕ್ಕಂಥದ್ದು, "ಬಿಜೆಪಿ ಯು ರಾಜ್ಯದಲ್ಲಿ ವಾರ್ಷಿಕ ರೂ. 30,000 ರವರೆಗೆ ಆದಾಯ ಇರುವವರನ್ನು ಕಡು ಬಡವರು ಎಂದು, ರೂ. 60,000 ವರೆಗಿನ ಆದಾಯ ಇರುವ ಕುಟುಂಬಗಳನ್ನು ಬಡವರೆಂದು ಗುರುತಿಸುವ ಪ್ರಮುಖ ನಿರ್ಧಾರ ತೆಗೆದುಕೊಂಡಿದೆ" ಎಂದು ಹೇಳಿದ್ದಾರೆ. ಇದನ್ನು free ಯಾಗಿ ಬಿಟ್ಟು ಬಿಟ್ಟರೂ ಏನೂ ತೊಂದರೆಯಾಗುವುದಿಲ್ಲ. ಇದನ್ನು ತಾವು ಜಾರಿಗೊಳಿಸಿದರೆ, ರಾಜ್ಯದಲ್ಲಿ ಕಾಡಗಳ ಸಮಸ್ಯೆ ಉದ್ಭವವಾಗುವುದಿಲ್ಲ. ಆಹಾರ ಸಚಿವರು ಕೂಡ ನೆಮ್ಮದಿಯಾಗಿ ನಿದ್ರೆ ಮಾಡಿ ಅವರ ಕೆಲಸವನ್ನು ಮಾಡಬಹುದು. ಆಹಾರ ಇಲಾಖೆಗೆ ಇರುವುದು ಕಾರ್ಡುಗಳ ವಿತರಣೆ ಕೆಲಸ ಒಂದೇ ಅಲ್ಲ. ಬೇಕಾದಷ್ಟು ಕೆಲಸಗಳಿರುತ್ತವೆ. ಆವರ್ತ ನಿಧಿ ಕೊಟ್ಟಿದ್ದೀರಿ, ಅದನ್ನು ಜಾರಿಗೊಳಿಸಬೇಕಾದವರೂ ಇದ್ದಾರೆ, ನಿಮ್ಮ Weight and Measurements ಇಲಾಖೆ ನೋಡಿಕೊಳ್ಳಬೇಕಾಗುತ್ತದೆ. ಬೇಕಾದಷ್ಟು ಇನ್ನು ಬೇರೆ ಬೇರೆ ಕೆಲಸಗಳಿವೆ. ತಾವು ಕಾರ್ಡ ಒಂದೇ ಪ್ರಮುಖವಾದ ಸಮಸ್ಯೆ ಎಂದು ಕಾಣುತ್ತಿರುವುದರಿಂದ ತಾವೇನು 30,000ಕ್ಕೆ ಘೋಷಣೆ ಮಾಡಿದ್ದೀರಿ, ಹಿಂದೆ ಕೂಡ ನಾನು ಮಂತ್ರಿಯಾಗಿದ್ದಾಗ ಕೂಡ ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆದು 30,000 ಕ್ಕೆ ಹೆಚ್ಚಿಸಬೇಕೆಂದು ಹೇಳಿದ್ದೇನೆ. ಅದನ್ನು ತಾವು ಜಾರಿಗೊಳಿಸಿದರೆ ರಾಜ್ಯದಲ್ಲಿ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸಿ, ಇವತ್ತು ತಮಿಳುನಾಡಿನಲ್ಲಿ ಏನಾಗಿದೆ ಎಂದರೆ, ಹತ್ತು

ಕೆ.ಜಿ.ಅಕ್ಕಿಯನ್ನು ಉಚಿತವಾಗಿ ಕೊಡುತ್ತಾರೆ. ಇನ್ನು ಹತ್ತು ಕೆ.ಜಿ.ಅಕ್ಕಿಯನ್ನು ಎರಡು ರೂಪಾಯಿಯಂತೆ ಕೊಡುತ್ತಾರೆ. ಅಲ್ಲಿ ಕಾರ್ಡುಗಳ ಪ್ರಶ್ನೆ ಬರುವುದಿಲ್ಲ. ಕೇಂದ್ರ ಸರ್ಕಾರದಲ್ಲಿ BPL ಪಟ್ಟಿ ಇದೆ. ಅದರಲ್ಲಿ ತಮಿಳುನಾಡಿನದ್ದು ಎಷ್ಟು ಎಂದರೆ, ಅದರಲ್ಲಿ ಪ್ರಸ್ತಾಪವೇ ಇಲ್ಲ. ತಮಿಳುನಾಡಿನಲ್ಲಿ BPL ಎನ್ನುವ ಪದಕ್ಕೆ ಅರ್ಥವಿಲ್ಲವೆಂದು ಆ ಪದವನ್ನೇ ತೆಗೆದು ಹಾಕಿದ್ದಾರೆ. ನಮ್ಮ ರಾಜ್ಯದಲ್ಲಿ 30 % ಎಂದು ಹೇಳುತ್ತಾರೆ. 30,000 ಕುಟುಂಬಗಳು BPL ನವರು ಎಂದು ಹೇಳುತ್ತಾರೆ. ನಾವು 60 ರಿಂಧ 70 ಸಾವಿರಕ್ಕೆ ಕೊಡುತ್ತದ್ದೇವೆ. BPL norms ಪ್ರಕಾರ ನಾವು 70,000 ಕುಟುಂಬಗಳಿಗೆ ಕೊಡುವುದಕ್ಕೆ ಬರುವುದಿಲ್ಲ. ದೆಹಲಿಯಲ್ಲಿ ಯಾವುದಾದರೂ ಒಂದು ಸಭೆಗೆ ಹೋಗಿ ನಾವು ರಾಜ್ಯದವರು ಪ್ರಸ್ತಾಪ ಮಾಡಿದರೆ, ಅದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ನಾವು 30,000 ಕ್ಕೆ ಹೆಚ್ಚಿಸಿಕೊಂಡಿದ್ದೇವೆ, ನಿಮ್ಮ ಲೆಕ್ಕ ನಮ್ಮ ಲೆಕ್ಕ ಬೇರೆ ಇದೆ, ನಾವು ನಮ್ಮ ರಾಜ್ಯದಲ್ಲಿ ನಮ್ಮದೇ ಆದ ರೀತಿಯಲ್ಲಿ ಬಡವರನ್ನು ಗುರುತಿಸಿಕೊಂಡಿದ್ದೇವೆ. ನಮಗೆ ಶಕ್ತಿ ಇದೆ, ನಮಗೆ ಎಷ್ಟೇ ಬಂಡವಾಳವಾದರೂ ರಾಜ್ಯದಿಂದ ಭರಿಸಿ ಬಡವರಿಗೆ ನಾವು ಅಕ್ಕಿ ವಿತರಣೆ ಮಾಡುತ್ತೇವೆಂದು ತಾವು ಘೋಷಣೆ ಮಾಡಿ ಬಿಟ್ಟರೆ, ನಿಮಗೆ ಜನ ಮತ ಕೊಟ್ಟಿದ್ದಾರೆ ಅದಕ್ಕೆ ಪಡುತ್ತಾರೆ. ಆ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಮಾಡಿದರೆ ಒಳ್ಳೆಯದು, ಅದ್ದರಿಂದ ಜನ ಬಹಳ ಸಂತುಷ್ಟರಾಗುತ್ತಾರೆಂದು ಹೇಳಿ, ಜನ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ದಯಮಾಡಿ ಅವರು ಇದನ್ನು ಘೋಷಣೆ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿದ್ದಾರೆ, ಅರಣ್ಯ ಇಲಾಖೆ ಬಗ್ಗೆ ಹೇಳಬೇಕೆಂದರೆ, ಅರಣ್ಯ ಇಲಾಖೆಯಲ್ಲಿ ನಾಲ್ಕಾರು ಪ್ರಸ್ತಾಪಗಳನ್ನು ಮಾಡಿದ್ದಾರೆ. ಅದರೆ ನಿಜವಾಗಿ ರೈತರಿಗೆ ಅಗತ್ಯ ಇರತಕ್ಕಂಥದ್ದು, ಮೂರು ವಿಚಾರ, ಒಂದು ಗಡಿ ಭಾಗ. ಹಾಸನ ಜಿಲ್ಲೆ ಇರಬಹುದು, ಚಾಮರಾಜ ನಗರ ಜಿಲ್ಲೆ ಇರಬಹುದು, ಮೈಸೂರು ಜಿಲ್ಲೆ ಇರಬಹುದು, ಅಥವಾ ರಾಮನಗರ ಜಿಲ್ಲೆ ಇರಬಹುದು. ಕಾಡು ಅಂಚಿನಲ್ಲಿರುವ ಪ್ರದೇಶಗಳು ಇವು. ಇವತ್ತು ಬನ್ನೇರುಘಟ್ಟದವರೆಗೂ ಆನೆಗಳು ಬರುತ್ತಿವೆ. ಸಕಲೇಶಪುರದವರೆಗೆ ಆನೆಗಳು ದಾಳಿ ಮಾಡುತ್ತಿವೆ. ನಮ್ಮ ಗುಂಡ್ಲುಪೇಟೆಯಲ್ಲಿ National Highway road ನಲ್ಲಿ ಆನೆಗಳು ರೋಡ್ ಕ್ರಾಸ್ ಮಾಡುತ್ತಿವೆ. ಅದನ್ನು ಶಾಶ್ವತವಾಗಿ ತಡೆಗಟ್ಟುವಂತಹ ರೀತಿಯಲ್ಲಿ ಆನೆ ತಡೆ ಕಂದಕ ಮತ್ತು ಸೋಲಾರ್ fencing ಅನ್ನು ಶಾಶ್ವತವಾಗಿ ಮಾಡಬೇಕು. ಅದನ್ನು ಆಗಷ್ಟು ಈಗಷ್ಟು ಮಾಡುವುದರಿಂದ ಎಲ್ಲೋ ಒಂದು ಕಡೆ ಎರಡು-ಮೂರು ಕಿ.ಮಿ. ಮಾಡುತ್ತಾರೆ,

ಅಲ್ಲಿ ಆನೆಗಳ ಹಾವಳಿಯನ್ನು ತಡೆಗಟ್ಟಬಹುದು, ಅದರ ಪಕ್ಕದಲ್ಲಿ ಖಾಲಿ ಇರುವ ಜಾಗದಲ್ಲಿ ಆನೆಗಳು ನುಸುಳಿ ಬರುತ್ತವೆ. ಮಾನ್ಯ ಉಪಾಧ್ಯಕ್ಷರಿಗೂ ಗೊತ್ತಿದೆ. ಮಡಿಕೇರಿ ಜಿಲ್ಲೆಯಲ್ಲಿ ಇರುವವರು. ಇದನ್ನು ಶಾಶ್ವತವಾಗಿ ತಡೆಗಟ್ಟುವಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದರೆ ಇಡೀ ನಮ್ಮ ಭಾಗದ ರೈತರು ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರನ್ನು ಬಹಳ ಹೆಮ್ಮೆಯಿಂದ ಕೊಂಡಾಡುತ್ತಾರೆ. ದಯಮಾಡಿ ಅವರು ತಮ್ಮ ಉತ್ತರದಲ್ಲಿ ಘೋಷಣೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಬೆಳೆ ಪರಿಹಾರದ ಬಗ್ಗೆ ಹೇಳಬೇಕೆಂದರೆ, ಯಾವುದೋ ಕಾಲದಲ್ಲಿ ಅಸೆಸ್ ಮಾಡಿದ ಬೆಳೆ ಪರಿಹಾರದ ಮೊತ್ತವನ್ನು ಈಗಲೂ ಕೊಡುತ್ತಿದ್ದಾರೆ. ಅದಕ್ಕೆ ಒಂದು committee constitute ಮಾಡಿದ್ದೇವೆ, ಅದರ ವರದಿ ಬಂದಿಲ್ಲವೆಂದು ಹೇಳುತ್ತಿದ್ದಾರೆ ಹೊರತು, ಆ ಕಮಿಟಿ 10 ವರ್ಷಗಳಿಂದ ಮೀಟಿಂಗ್ ಮಾಡುತ್ತಿದೆ, ಅದು ವರದಿ ಕೊಡಲಿಲ್ಲ, ನಮ್ಮ ರೈತರಿಗೆ ಪರಿಹಾರದ ಮೊತ್ತ ಹೆಚ್ಚಾಗಲಿಲ್ಲ. ಪರಿಹಾರದ ಮೊತ್ತ ಕೊನೆಗೆ ಬಂದರೆ 500 ರಿಂದ ಸಾವಿರ ರೂ.ಬರುತ್ತದೆ, ಅದರ ಓಡಾಟಕ್ಕೆ 4 ರಿಂದ 5 ನೂರು ರೂ.ರೈತರು ಖಚ ಮಾಡಿರುತ್ತಾರೆ. ಪರಿಹಾರದ ಮೊತ್ತ ಹೆಚ್ಚಿಸತಕ್ಕಂತಹ ಕೆಲಸವನ್ನು ಮಾಡಬೇಕು. ಸರ್ಕಾರಿ ನೌಕರರ ವಯಸ್ಸನ್ನು 60 ವರ್ಷಕ್ಕೆ ಬೇರೆ ಹೆಚ್ಚಿಸಿದ್ದೀರಿ. ಹಿಂದೆ ಒಬ್ಬ Conservator ಇದ್ದುದ್ದು ಇವತ್ತು 50 Consevator ಗಳಾಗಿದ್ದಾರೆ. ಹಿಂದೆ ಒಬ್ಬ Chief Conservator ಇದ್ದುದು ಇವತ್ತು 12 ಜನ Chief Conservator ಗಳಾಗಿದ್ದಾರೆ. ಕೆಳ ಹಂತದಲ್ಲಿ ರೇಂಜರ್‌ಗಳಿಲ್ಲ, ಗಾರ್ಡ್‌ಗಳಿಲ್ಲ, ವಾಚರ್‌ಗಳಿಲ್ಲ. ಕಾಡು ಕಾಯಬೇಕಾದ ಜನ ಒಬ್ಬರೂ ಇವತ್ತು ನೌಕರಿಯಲ್ಲಿ ಇಲ್ಲ. ACF ನಿಂದ ಯಾವ ಹುದ್ದೆಗಳೂ ಖಾಲಿ ಇಲ್ಲ. ಏಕೆಂದರೆ ನೀವು ಎಲ್ಲರಗೂ ಪ್ರಮೋಷನ್ ಕೊಟ್ಟು Conservator ಗಳು ಜೀಪುಗಳಲ್ಲಿ ಓಡಾಡುತ್ತಿದ್ದವರಿಗೆಲ್ಲಾ ಒಳ್ಳೊಳ್ಳೊಯ ಕಾರುಗಳನ್ನು ಕೊಡಿಸಿ, AC ಕಛೇರಿಗಳಲ್ಲಿ ಕೂರಿಸಿದ್ದೀರಿ. ಯಾವ Conservator ಕಾಡುಗಳಲ್ಲಿ ಓಡಾಡುವುದಿಲ್ಲ. ಇದನ್ನು ನಾನು ಬಹಳ ವಿಷಾದದಿಂದ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಅರಣ್ಯ ಭವನಕ್ಕೆ ತಾವು ಒಂದು ಸಲ ಹೋಗಿ ನೋಡಬೇಕು. ನಾನು ಕುಮಾರಸ್ವಾಮಿಯವರು ಮುಖ್ಯ ಮಂತ್ರಿಯಾಗಿದ್ದಾಗ ಒಂದು ಸಲ ಕರೆದುಕೊಂಡು ಹೋಗಿದ್ದೆ. ಎಲ್ಲಾ Conservators ತಮ್ಮ office ಗಳನ್ನು AC ರೂಮ್‌ಗಳನ್ನಾಗಿ ಮಾಡಿಕೊಂಡು ಕಾರ್ಪೆಟ್ಗಳನ್ನು ಹಾಕಿಕೊಂಡು ಅಲ್ಲಿಯೇ ಒಂದೆರಡು ಪ್ರಾಣಿಗಳ ಚಿತ್ರ ಮತ್ತು ಒಂದೆರಡು ಗಿಡಗಳನ್ನು ತರಿಸಿ ಇಟ್ಟುಕೊಂಡು ಅಲ್ಲಿಯೇ ಅರಣ್ಯ ಕಾಣುತ್ತಿದ್ದಾರೆ ಹೊರತು ಯಾರೂ ಕಾಡಿಗೆ ಹೋಗುವುದಿಲ್ಲ. ಒಂದೊಂದು ಫೈಲ್ clear ಆಗಬೇಕಾದರೆ ಒಂದು ವರ್ಷವಾದರೂ ಫೈಲ್

ಮೂಮೆಂಟ್ ಆಗುವುದಿಲ್ಲ. ಕೆಳ ಹಂತದ ವಾಚರ್, ಗಾರ್ಡ್ಸ್ ಏನಿದ್ದಾರೆ ಅವರನ್ನು ನೇಮಕ ಮಾಡಬೇಕು. ರೈತ ಅರಣ್ಯ ನಿಧಿ ಎಂದು ಸ್ಥಾಪನೆ ಮಾಡಿ ಮುಖ್ಯವಾಗಿ ಕಾಡು ಪ್ರಾಣಿಗಳು, ಅದು ಕಾಡಾನೆ ಇರಬಹುದು, ಕಾಡು ಹಂದಿ ಇರಬಹುದು, ಬೇರೆ ಪ್ರಾಣಿಗಳು ಏನು ಬೆಳೆ ನಾಶ ಮಾಡುವುದಕ್ಕೆ ಬರುತ್ತೆ, ತುರ್ತಾಗಿ ಅವುಗಳನ್ನು ತಡೆಗಟ್ಟುವುದಕ್ಕೆ, ಅವುಗಳನ್ನು ಓಡಿಸುವುದಕ್ಕೆ ಪಟಾಕಿ ಹಾಗೂ ಸಿಡಿಮದ್ದುಗಳು ಬೇಕಾಗುತ್ತವೆ. ಬೇರೆ ಬೇರೆ ಲೋಕಲ್ ವಾಚರ್‍ಗಳನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಅಥವಾ ರೈತರೇ ರಾತ್ರಿ ಕಾವಲು ಕಾಯುವಂತಹವರಿಗೆ ಡೈಲಿ ವೇಜಸ್ ಮೇಲೆ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಅಂಥದ್ದಕ್ಕೆ ಹಣವನ್ನು ಅಲ್ಲಿ ಎತ್ತಿಡಬೇಕಾಗುತ್ತದೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಈ ಮೂರೂ ವಿಷಯಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಘೋಷಣೆ ಮಾಡಬೇಕೆಂದು ತಮ್ಮ ಮುಖಾಂತರ ಕೇಳುತ್ತಾ, ಮಾನ್ಯ ಉಪಾಧ್ಯಕ್ಷರೆ, ಇನ್ನು ಅನೇಕ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವವನಿದ್ದೆ, ಕಡೆಯದಾಗಿ ಕೆ.ಇ.ಬಿ.ಯ ಕೆಲವು ವಿಚಾರಗಳ ಬಗ್ಗೆ ಹೇಳುವುದೇನೆಂದರೆ, 15 ಲಕ್ಷ ನೀರಾವರಿ ಪಂಪ್‍ಸೆಟ್ಟುಗಳಿಗೆ ಉಚಿತ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದಾರೆ. ಒಳ್ಳೆಯದು, ಸರ್ಕಾರ ಹೇಳಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ 1992ರಲ್ಲಿ ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಏನು ಘೋಷಣೆಯನ್ನು ಮಾಡಿದ್ದರೋ ಅಲ್ಲಿಂದ ಇಲ್ಲಿಯವರೆವಿಗೆ ವಿದ್ಯುತ್ ಪಂಪ್‍ಸೆಟ್ ಹೊಂದಿರುವವನೂ ಕೂಡ ಬಿಲ್ ಕಟ್ಟಿಕೊಂಡು ಬಂದಿಲ್ಲ. ಅದನ್ನೂ ಇನ್ನು ಮುಂದೆಯೂ ಕೂಡ ರೈತರು ಕಟ್ಟುವುದಿಲ್ಲ. ಆದುದರಿಮದ ಅಂಥದ್ದಕ್ಕೆ ಒಂದು ಘೋಷಣೆಯನ್ನು ಮಾಡಿ ಅದಕ್ಕೆ ಒಂದು ತೆರೆಯನ್ನು ಎಳೆದಿದ್ದಾರೆ. ಆ ಒಂದು ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಆದರೆ ಈಗ ಆಗಬೇಕಾಗಿರುವುದೇನೆಂದರೆ, 1992 ರಿಂದ ಬಾಕಿ ಏನಿದೆ ಅದನ್ನು ಮನ್ನಾ ಮಾಡಿದರೆ ಆಗ ರೈತರು ಸಾಲದಿಂದ ವಿಮುಕ್ತರಾಗುತ್ತಾರೆ. ಈಗ ಕೇಂದರ ಸರ್ಕಾರ 65 ಸಾವಿರ ಕೋಟಿ ರೈತರ ಸಾಲವನ್ನು ಮನ್ನಾ ಮಾಡಿತು. ಅದೇ ರೀತಿ ಇದು ಹೇಗಿದ್ದರೂ ಕೂಡ ನಿಮಗೆ ಬರದೇ ಇರುವಂಥ ಹಣವಾಗಿದೆ. ನಿಮ್ಮ ಕೈಯಲ್ಲಿ ವಸೂಲು ಮಾಡಲು ಆಗುವುದಿಲ್ಲ. ಏಕೆಂದರೆ ರೈತರನ್ನು ಕಟ್ಟಿ ಎಂದು ಒತ್ತಾಯ ಮಾಡುವುದಕ್ಕೂ ಆಗುವುದಿಲ್ಲ. ಆದುದರಿಂದ ಅಷ್ಟು ರೈತರಿಗೆ ನೀವು ಮನ್ನಾ ಮಾಡಿದರೆ ಇದರಿಂದ ಕೂಡ ನಿಮಗೆ ಒಳ್ಳೆಯ ಹೆಸರು ಬರುತ್ತದೆಯಾದ ಕಾರಣ ದಯಮಾಡಿ ಅದರ ಬಗ್ಗೆ ತಾವು ಕೊಡುವ ಉತ್ತರದಲ್ಲಿ ಘೋಷಣೆ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ನೀವು ಕೇವಲ ಪಂಪ್‍ಸೆಟ್‍ಗೆ ಉಚಿತ

ವಿದ್ಯುತ್ ಕೊಡುತ್ತೇವೆಂದು ಘೋಷಣೆ ಮಾಡುವುದರಿಂದ ರೈತರ ಸಮಸ್ಯೆ ಬಗೆಹರಿಯುವುದಿಲ್ಲ. ಅವರಿಗೆ ಮುಖ್ಯವಾಗಿ ಬೇಕಾಗಿರುವಂಥದ್ದು ಒಳ್ಳೆಯ ಗುಣಮಟ್ಟದ ಪೂರ್ತಿ ವೋಲ್ಟೇಜ್ ಇರತಕ್ಕಂಥ ವಿದ್ಯುತ್ ಮತ್ತು ನಿಗಧಿತ ವೇಳೆಯಲ್ಲಿ ಈ ವಿದ್ಯುತ್‌ನ್ನು ಕೊಡತಕ್ಕಂಥದ್ದು. ಇದನ್ನು ಸರ್ಕಾರ ಮಾಡುವುದಕ್ಕೆ ಏನಾದರೂ ಒಂದು ಕಾರ್ಯಕ್ರಮವನ್ನು ರೂಪಿಸಬೇಕು. ಈಗ ನೀವು ಉಚಿತವಾಗಿ ವಿದ್ಯುತ್‌ನ್ನು ಏನು ಕೊಡುತ್ತೀರಿ ಆ ಬಗ್ಗೆ ನನ್ನದೊಂದು ಸಲಹೆ ಇದೆ. ಮಾನ್ಯ ಈಶ್ವರಪ್ಪನವರು ಈಗ ಸದನದಲ್ಲಿ ಇಲ್ಲ. ನನ್ನ ಪ್ರಕಾರ ಈಗ ಮೀಟರ್ ಅನ್ನು ಅಳವಡಿಸಿರುವುದು ಒಳ್ಳೆಯ ಕಾರ್ಯಕ್ರಮ. ಅದನ್ನು ಯಾರು ಒಪ್ಪುತ್ತಾರೋ ಬಿಡುತ್ತಾರೋ ನನಗೆ ಗೊತ್ತಿಲ್ಲ. ಏಕೆಂದರೆ ನಿಮಗೆ ನಿರ್ಧಿಷ್ಟವಾಗಿ ಯಾವ ಯಾವ ಪಂಪ್‌ಸೆಟ್‌ನಲ್ಲಿ ಎಷ್ಟೆಷ್ಟು ವಿದ್ಯುತ್ ಬಳಕೆಯಾಗುತ್ತಿದೆ ಎನ್ನುವುದನ್ನು ತಿಳಿಯಬೇಕಾದರೆ ಇದನ್ನು ಮಾಡಬೇಕಾಗುತ್ತದೆ. ಹೇಗಿದ್ದರೂ ನೀವು ಉಚಿತವಾಗಿ ಕೊಡುತ್ತಿದ್ದೀರಿ, ಅದಕ್ಕೆ ಮೀಟರ್ ಅಳವಡಿಸುವುದರಿಂದ ಈಗ ತಾವೇನು 15 ಲಕ್ಷ ಪಂಪ್‌ಸೆಟ್ ಎಂದು ಹೇಳಿದ್ದೀರಿ ಇದರಲ್ಲಿ ಸುಮಾರು 3ರಿಂದ 4 ಲಕ್ಷದಷ್ಟು ಪಂಪ್‌ಸೆಟ್‌ಗಳು ಚಾಲ್ತಿಯಲ್ಲಿ ಇಲ್ಲ. ನಾನಾ ಕಾರಣಗೋಸ್ಕರ ರೈತರು ಇದರ ಸರ್ವಿಸ್ ಅನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದಾರೆ. ಏಕೆಂದರೆ, ಮುಂದೆ ಏನಾದರೂ ಒಂದು ಬೋರ್‌ವೆಲ್ ಕೊರೆಸಿದರೆ ಹೊಸದಾಗಿ ಪಂಪ್‌ಸೆಟ್‌ಗೆ ಸರ್ವಿಸ್ ಕೇಳುವ ಬದಲು ಇದನ್ನೇ ಬಳಕೆ ಮಾಡಬಹುದೆಂದು ಸರ್ವಿಸ್ ಅನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದಾರೆ. ಈ ರೀತಿ 3 ರಿಂದ 4 ಲಕ್ಷ ಪಂಪ್‌ಸೆಟ್‌ನವರೂ ಕೂಡ ಮಿನಿಮಮ್ ಹಣವನ್ನು ಪಾವತಿ ಮಾಡುತ್ತಿದ್ದಾರೆ. ಅದಕ್ಕೋಸ್ಕರ ನೀವು ಮೀಟ್ ಹಾಕುವುದರಿಂದ ಇಂಥದ್ದೂ ಕೂಡ ಗೊತ್ತಾಗುತ್ತದೆ. ಇನ್ನು ಅಕ್ರಮ-ಸಕ್ರಮಕ್ಕೆ ಒಂದು ಕೊನೆ ಅಳವಡಿಸುವುದರಿಂದ ಅನಧಿಕೃತವಾದವುಗಳು ಕೂಡ ಗೊತ್ತಾಗುತ್ತದೆ. ಇನ್ನು ಅಕ್ರಮ-ಸಕ್ರಮಕ್ಕೆ ಒಂದು ಕೊನೆ ಹಾಡಬೇಕು. ಸುಮಾರು ಐದಾರು ವರ್ಷದಿಂದ ನಾವು ಅಕ್ರಮ_ಸಕ್ರಮಕ್ಕೆ ಅವಧಿಯನ್ನು ಕೊಡುವುದು, ಅಂಥಾವರದ್ದನ್ನು ರೆಗುಲ್‌ರೈಸ್ ಮಾಡುವುದು ಆಗಿದೆ. ಇದರಿಂದ ಏನಾಗುತ್ತಿದೆಯೆಂದರೆ, ಇಲಾಖೆಯೊಳಗಡೆ ಒಂದು ಕಂಟ್ರೋಲ್ ಸಿಗುತ್ತಿಲ್ಲ. ಇದರಲ್ಲಿ ಏನಾಗುತ್ತದೆಂದರೆ ನಿಮಗೆ ರೆಗ್ಯುಲರ್ ಆಗಿ ಅಪ್ಲಿಕೇಶನ್ ಕೊಟ್ಟು ಸರ್ವಿಸ್ ಕೇಳಿದರೆ ಸರ್ವೀಸ್ ಪಡೆಯಲು ಎರಡು ವರ್ಷವಾಗುತ್ತದೆ. ಇದರಿಂದಾಗಿ ರೈತರು ಏನು ಮಾಡುತ್ತಾರೆಂದರೆ ತಮ್ಮ ಸ್ವಂತ ಖರ್ಚಿನಲ್ಲಿ ಸರ್ವಿಸ್ ತೆಗೆದುಕೊಂಡು ಆಮೇಲೆ ಅಕ್ರಮ-ಸಕ್ರಮ ಯೋಜನೆಯಲ್ಲಿ ಅಪ್ಲೈ ಮಾಡುತ್ತಾರೆ. ಇದರಿಂದ ಟಿ.ಸಿ ಗಳು ಓವರ್‌ಲೋಡ್ ಆಗುತ್ತವೆ. ಮತ್ತೆ ಟೇಲ್-ಎಂಡ್‌ನಲ್ಲಿ ಯಾರು ವಿದ್ಯುತ್ ಬಳಕೆ

ಮಾಡುತ್ತಿರುತ್ತಾರೋ ಅವರಿಗೆ ಸರಿಯಾದ ವೋಲ್ಟೇಜ್ ಬರುತ್ತಿಲ್ಲ. ಅದರಿಂದಾಗಿ ಈ ಅಕ್ರಮ-ಸಕ್ರಮವನ್ನು ಯಾವುದೇ ಪೆನಾಲ್ಟಿ ಇಲ್ಲದೇ ಉಚಿತವಾಗಿ ಕೊಡುತ್ತೇವೆಂದು ಘೋಷಣೆ ಮಾಡಿ ಒಂದು ನಿರ್ಧಿಷ್ಟ ದಿನಾಂಕವನ್ನೂ ಕೂಡ ಘೋಷಣೆ ಮಾಡಿ ಹೊಸದಾಗಿ ಅರ್ಜಿ ಹಾಕುವವರಿಗೆ ಮೂರು ತಿಂಗಳೊಳಗೆ ನಾವು ವಿದ್ಯುತ್ ಕೊಡುತ್ತೇವೆಂದು ಸರ್ಕಾರ ಘೋಷಣೆಯನ್ನು ಮಾಡಬೇಕು. ಆರೀತಿ ಘೋಷಣೆಯನ್ನು ಮಾಡಿದಾಗ ಹೊಸದಾಗಿ ಸರ್ವಿಸ್ ತೆಗೆದುಕೊಳ್ಳುವವರಿಗೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಇನ್ನು ರೂರಲ್ ಲೋಡ್ ಮ್ಯಾನೇಜ್‌ಮೆಂಟ್ ಎಂದು ಹೇಳಿ ಆರ.ಎಲ್.ಎಂ.ಎಸ್. ಯೇಜನೆ ಇಂದು ಬೆಂಗಳೂರಿನಲ್ಲಿ ಬೆಸ್ಕಾಂನವರು ಮಾಡಿ ಇದನ್ನು ಜಾರಿಗೆ ತಂದಿದ್ದಾರೆ. ಇದು ಬಹಳ ಮುಖ್ಯವಾದ ಪಾಯಿಂಟ್ ಆಗಿದೆ. ಇದರಿಂದ ಹಳ್ಳಿಗಳಲ್ಲಿ 24 ಗಂಟೆ ವಿದ್ಯುತ್ ಕೊಡಲು ಅವಕಾಶವಿದೆ. ಇದನ್ನು ಬೆಂಗಳೂರಿನಲ್ಲಿ ಜಾಗಿಎ ತಂದಿರುವುದರಿಂದ ಅವರು ಈ ಸ್ಕೀಂನಿಂದ ಒಂದು ವ್ಯವಸ್ಥಿತವಾದ ರೀತಿಯಲ್ಲಿ ವಿದ್ಯುತ್ ಕೊಡುತ್ತಾರೆ. ಈ ಸ್ಕೀಂ ಅನ್ನು ಎಲ್ಲಾ ವಿದ್ಯುತ್ ನಿಗಮಗಳಲ್ಲಿಯೂ ಕೂಡ ಜಾರಿಗೆ ತರುವಂಥ ಕೆಲಸ ಆಗಬೇಕು. ಈಗೇನೋ ರೈತರ ಪಂಪ್‌ಸೆಟ್‌ಗೆ ನಾಲ್ಕು ಗಂಟೆ, ಐದು ಗಂಟೆ ವಿದ್ಯುತ್‌ನ್ನು ಕೊಡುತ್ತೀರಿ. ಆದರೆ ಬಲ್ಕ್ ಮಿಲ್ಕ್ ಕೂಲರ್‌ಗಳು ನಮ್ಮಲ್ಲಿ ಇವೆ. ಹಿಂದೆ ಕೆ.ಎಂ.ಎಫ್. ವತಿಯಿಂದ ಇವುಗಳನ್ನು ಮಾಡಿರುವುದು. ಅವುತಳನ್ನು ಜನರೇಟರ್‌ನಲ್ಲಿ ಓಡಿಸಿ, ಓಡಿಸಿ ನಮ್ಮ ಸೊಸೈಟಿಗಳೆಲ್ಲಾ ಲಾಸ್ ಆಗಿಬಿಡುತ್ತಿವೆ. ಇಂಥವುಗಳು, ಮತ್ತು ನಮ್ಮ ಹಳ್ಳಿಗಳಲ್ಲಿ ಫ್ಲೋರ್ ಮಿಲ್‌ಗಳನ್ನು ಇಟ್ಟುಕೊಂಡಿರುತ್ತಾರೆ, ಲೇಥ್‌ಗಳನ್ನು ಇಟ್ಟುಕೊಂಡಿರುತ್ತಾರೆ, ಇಂಥವರಿಗೆಲ್ಲಾ ಥ್ರೀ-ಫೇಸ್ ಕರೆಂಟ್ ಅವಶ್ಯಕತೆ ಇರುತ್ತದೆ. ಈ ಗುಡಿ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು ಇವೊತ್ತು ಮುಚ್ಚುವ ಸ್ಥಿತಿಯಲ್ಲಿವೆ. ಅವುಗಳಿಗಾಗಿ ಈ ಸ್ಕೀಂ ಅನ್ನು ಜಾರಿಗೆ ತರುವುದರಿಂದ ಸ್ವಲ್ಪ ಸುಧಾರಣೆಯಾಗುತ್ತವೆ. ಏಕೆಂದರೆ ಇಂದು ಕೇವಲ ವ್ಯವಸಾಯದಲ್ಲಿಯೇ ಜೀವನ ನಡೆಸುವುದು ಕಷ್ಟವಾಗಿದೆ. ಆದುದರಿಂದ ವಿದ್ಯುತ್‌ನ್ನು ಅವಲಂಬಿಸಿ ಬಹಳ ಜನರು ಜೀವನ ಮಾಡುವಂಥ ಸ್ಥಿತಿ ಗ್ರಾಮೀಣ ಪ್ರದೇಶದಲ್ಲಿರುವುದರಿಂದ ಈ ಸ್ಕೀಂ ಅನ್ನು ಜಾರಿಗೆ ತರಬೇಕೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಕಡೆಯದಾಗಿ ನಮ್ಮ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯ ಪ್ರವಾಸದಲ್ಲಿ ಬಹಳ ಭರವಸೆಯನ್ನು ಕೊಟ್ಟು ಬಂದಿದ್ದಾರೆ. ಕಬಿನಿ ಎರಡನೆಯ ಹಂತದ ಏತ ನೀರಾವರಿ ಯೋಜನೆಯನ್ನು ನಮ್ಮ ಸರ್ಕಾರ ಬಂದ ನಂತರ ನಾವು ಮಾಡಿಯೇ ತೀರುತ್ತೇವೆ ಎಂದು ಘೋಷಣೆಯನ್ನು ಮಾಡಿದ್ದಾರೆ. ನಮಗೆಲ್ಲರಿಗೂ ಗೊತ್ತಿದೆ. ನೀರಾವರಿ ವಿಚಾರದಲ್ಲಿ ಕಾವೇರಿ

ಟ್ರಿಬ್ಯೂನಲ್ ತೀರ್ಪಿನ ಬಗ್ಗೆ ನಾವು ಮೇಲ್ಮನವಿಯನ್ನು ಸಲ್ಲಿಸಿದ್ದೇವೆ. ಅದರ ಪ್ರಸ್ತಾಪದ ಅಗತ್ಯವಿಲ್ಲ. ಆದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿರುವುದರಿಂದ ಆ ಒಂದು ಯೋಜನೆಯನ್ನು ಜಾರಿಗೆ ತರುತ್ತಾರೆ ಎಂದು ಅಪಾರವಾದ ನಿರೀಕ್ಷೆ ನಮ್ಮ ಭಾಗದ ಜನರಲ್ಲಿದೆ. ಇದರಿಂದೇನೂ ಕೇವಲ ಮೂರ್‍ನಾಲ್ಕು ಟಿ.ಎಂ.ಸಿ.ನೀರಷ್ಟೇ ನಮ್ಮ ಚಾಮರಾಜನಗರ ಜಿಲ್ಲೆಗೆ ಬಳಕೆಯಾಗುವುದು. ಆದರೂ ನಮ್ಮ ಜನ ಬಹಳ ಆಸೆಯನ್ನು ಇಟ್ಟುಕೊಂಡಿದ್ದಾರೆ. ಆದುದರಿಂದ ಅದನ್ನು ಆದಷ್ಟು ಬೇಗ ಮಾಡಬೇಕು. ಇದರ ಜೊತೆಯಲ್ಲಿ ಕೂಗಲೂರು ಏತ ನೀರಾವರಿ ಎಂದು ನನ್ನ ಗುಂಡ್ಲುಪೇಟೆ ಕ್ಷೇತ್ರಕ್ಕೆ ಒಂದು ಟಿ.ಎಂ.ಸಿ.ನೀರಿನಲ್ಲಿ ನೀರಾವರಿ ಯೋಜನೆಯನ್ನು ಜಾರಿಗೆ ತರುವುದಕ್ಕೆ ಹಿಂದೆ ಸರ್ಕಾರ ಮಂಜೂರಾತಿಯನ್ನು ಕೊಟ್ಟಿದೆ. ಅದನ್ನೂ ಕೂಡ ಸರ್ಕಾರ ಮಾಡಬೇಕು. ಅದಕ್ಕೆಲ್ಲಾ ಈಗಿನಿಂದಲೇ ಸಿದ್ಧತೆ ಮಾಡಬೇಕಾಗುತ್ತದೆ. ಇದನ್ನೆಲ್ಲಾ ಮಾಡಬೇಕೆಂದು ಹೇಳಬಯಸುತ್ತೇನೆ. ಈಗೇನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮುಂಗಡಪತ್ರದಲ್ಲಿ ಎಲ್ಲಾ ಇಲಾಖೆಗಳನ್ನು ಪ್ರಸ್ತಾಪ ಮಾಡಿ ಅನೇಕ ಯೋಜನೆಗಳನ್ನು ಘೋಷಣೆ ಮಾಡಿದ್ದಾರೋ ಅವುಗಳು ಕಾರ್ಯಗತವಾಗಬೇಕಾದರೆ ಸಿಬ್ಬಂದಿಗಳ ಅವಶ್ಯಕತೆ ಬಹಳ ಇದೆ. ಕೃಷಿ ಇಲಾಖೆಯಲ್ಲಿ, ವಿಶೇಷವಾಗಿ ಅರಣ್ಯ ಇಲಾಖೆಯಲ್ಲಿ ರೈತರಿಗೆ ಸಂಬಂಧಿಸಿದಂತೆ, ಇವುಗಳಿಗೆ ಕೆಳ ಹಂತದಲ್ಲಿ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಯೋಜನೆಗಳನ್ನು ಜಾರಿಗೆ ತರುವ ಪ್ರಯತ್ನ ಮಾಡಿದರೆ ಯೇಜನೆ ಜಾರಿಯಾಗಲು ಸಾಧ್ಯವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸಂಕಲ್ಪ ಪುಸ್ತಕದಲ್ಲಿ ಏನು ಘೋಷಣೆಗಳನ್ನು ಮಾಡಿದರೋ ಅವುಗಳನ್ನು ಪ್ರಸ್ತಾಪ ಮಾಡಿದ್ದಾರೆ ಹೊರತು ಅವುಗಳು ಎಷ್ಟರ ಮಟ್ಟಿಗೆ ಕಾಯಾಗತವಾಗುತ್ತದೆ ಎಂದು ಮುಂದಿನ ಎಂಟು ತಿಂಗಳ ಅವಧಿಯಲ್ಲಿ ನಾವು ಕಾದು ನೋಡಬೇಕಾಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇನ್ನು ಕಡೆಯದಾಗಿ ಸಾರಾಯಿ ವಿಚಾರವಾಗಿ ಹೇಳುವುದೇನೆಂದರೆ, ನಿನ್ನೆಯ ದಿವಸ ಸಿ.ಟಿ.ರವಿಯವರು ರಿಡಿಂಗ್ ರೂಂನಲ್ಲಿರುವ ಬಹಳ ಪೇಪರ್‌ಗಳನ್ನು ತಂದಿದ್ದರು. ಅದರಲ್ಲಿ ಪ್ರಜಾವಾಣಿಯಲ್ಲಿ ಓದುಗರ ಅನಿಸಿಕೆ ಎಂದು ಬರುತ್ತದೆ. ಅದರಲ್ಲಿ ಏನು ಹೇಳಲಾಗಿದೆಯೆಂದರೆ ಸರ್ಕಾರದ ಬಣ್ಣ ಬಯಲು, ಬಡ ಕುಟುಂಬಗಳು ಬೀದಿ ಪಾಲು ಎಂದು ಬಂದಿದೆ. ಅದರಲ್ಲಿ ಗಂಗಾವತಿಯ ಸುಮಿತ್ರಾಕುಮಾರಸ್ವಾಮಿ ಎನ್ನುವವರು ಸಾರಾಯಿ ನಿಷೇಧ್ ನಂತರ ಕುಡಿತದ ಹಾವಳಿ ಕಡಿಮೆಯಾಗಿಲ್ಲ, ಮೊದಲು ದುಡಿಮೆಯ ಸ್ವಲ್ಪ ಹಣವನ್ನು ಸಾರಾಯಿ ಕುಡಿಯಲು ವೆಚ್ಚ ಮಾಡಿ ಉಳಿದ ಹಣವನ್ನು ಮನೆಯ ಖರ್ಚಿಗೆ ಕೊಡುತ್ತಿದ್ದವರು ಈಗ ಎಲ್ಲಾ ಹಣವನ್ನು ಬಾಟಲಿ ಮದ್ಯಕ್ಕೆ ಸುರಿಯುತ್ತಿದ್ದಾರೆ.

ಇದರಿಂದಾಗಿ ಸಾವಿರಾರು ಬಡ ಕುಟುಂಬಗಳ ಹೆಂಗಸರು, ಮಕ್ಕಳು ಉಪವಾಸ ಬೀಳುತ್ತಿದ್ದಾರೆ. ಹೀಗಿರುವಾಗ ಇನ್ನು ಹಳ್ಳಿಗಳಲ್ಲಿ ವೈನ್ ಶಾಪ್ ಪ್ರಾರಂಭವಾದರೆ ಅವರನ್ನು ದೇವರೇ ಕಾಪಾಡಬೇಕು ಎಂದು ಗಂಗಾವತಿ ಮಹಿಳೆಯೊಬ್ಬರು ಓದುಗರ ಅನಿಸಿಕೆಯಲ್ಲಿ ಬರೆದಿದ್ದಾರೆ. ಸಾರಾಯಿಯನ್ನು ನಿಲ್ಲಿಸಿ ನೀವು ಇಡೀ ರಾಜ್ಯಾದ್ಯಂತ ಮೆಚ್ಚುಗೆಯನ್ನು ಪಡೆದಿದ್ದೀರಿ. ಈಗ ಉದ್ಯೋಗ ಖಾತರಿಯಲ್ಲಿ ನೀವು 74 ರೂಪಾಯಿ ಎಂದು ಮಿನಿಮಮ್ ವೇಜಸ್ ಅನ್ನು ನಿಗಧಿ ಮಾಡಿದ್ದೀರಿ. ಈಗ ನೀವು ವೈನ್ ಶಾಪ್‌ಗಳನ್ನು ತೆರೆಯಲು ಅವಕಾಶ ಕೊಟ್ಟರೆ ಮಿನಿಮಮ್ ವೇಜಸ್ ಅನ್ನು ನೀವು 150 ರೂಪಾಯಿಗೆ ಹೆಚ್ಚಿಸ ಬೇಕಾಗುತ್ತದೆ. ಏಕೆಂದರೆ ಹಿಂದೆ 13 ರೂಪಾಯಿಗೆ ಪ್ಯಾಕೆಟ್ ಸಿಗುತ್ತಿತ್ತು. ಆಗ ಎರಡೋ, ಮೂರೋ ಪ್ಯಾಕೆಟ್ ಕುಡಿದು ಅವನು ತೃಪ್ತಿ ಪಟ್ಟುಕೊಂಡು ಇನ್ನು ಐವತ್ತು ರೂಪಾಯಿಗಳನ್ನು ಮನೆಗೆ ತಲುಪಿಸುತ್ತಿದ್ದ. ಈಗಲೂ ಕೂಡ ಮಿನಿಮಮ್ ವೇಜಸ್ 74 ರೂಪಾಯಿ ಕೊಟ್ಟು ಹಳ್ಳಿಗಳಲ್ಲಿ ವೈನ್ ಶಾಪ್‌ಗಳನ್ನು ತೆರೆಯಲು ಅವಕಾಶ ಕೊಟ್ಟುಬಿಟ್ಟರೆ ಮಿನಿಮಮ್ ವೇಜಸ್ ಅನ್ನು ನೀವು ಕನಿಷ್ಟ 150 ರೂಪಾಯಿಗಾದರೂ ಹೆಚ್ಚಿಸಬೇಕಾಗುತ್ತದೆ ಇಲ್ಲದಿದ್ದರೆ ಸಿ.ಟಿ.ರವಿಯವರು ಹೇಳಿದಂತೆ ಈ ಆದೇಶವನ್ನು ತಾವು ಪುನರ್-ಪರಿಶೀಲನೆ ಮಾಡಿದರೆ ಒಳ್ಳೆಯದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ(ರಾಮನಗರ): ಮಾನ್ಯ ಅಧ್ಯಕ್ಷರೆ, 2008-09ನೇ ಸಾಲಿನ ಆಯವ್ಯಯ ಮಂಡನೆ ಮಾಡಿದಂತಹ ಕಾಲದಲ್ಲಿ, ಸನ್ಮಾನ್ಯ ಆರ್ಥಿಕ ಸಚಿವರೂ ಆಗಿರುವ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ ಆಯವ್ಯಯದ ವಿಚಾರದಲ್ಲಿ ಮಾತನಾಡಲು ನನಗೆ ಅವಕಾಶ ಕಲ್ಪಿಸಿ ಕೊಳ್ಳದ್ದಕ್ಕಾಗಿ ಮೊಟ್ಟಮೊದಲನೆಯದಾಗಿ ನಾನು ನನ್ನ ಕೃತಜ್ಞತೆ ಸಲ್ಲಿಸುವುದಕ್ಕೆ ಬಯಸುತ್ತೇನೆ. ಕರ್ನಾಟಕದ ರಾಜ್ಯದಲ್ಲಿ ಮೆದಲನೇ ಬಾರಿಗೆ ಅದರಲ್ಲೂ ದಕ್ಷಿಣ ಭಾರತದ ಬಾಗಿಲನ್ನು ತೆರೆದು ಇವತ್ತು ಬಿಜೆಪಿ ಸರ್ಕಾರ ಪಕ್ಷೇತರ ಶಾಸಕರ ಸಹಕಾರದಿಂದ ಅಧಿಕಾರಕ್ಕೆ ಬಂದು ಸರ್ಕಾರವನ್ನು ರಚನೆ ಮಾಡಿದ 15-20 ದಿವಸಗಳಲ್ಲಿ ಬಜೆಟ್ ಅನ್ನು ಮಂಡನೆ ಮಾಡತಕ್ಕಂಥ ಒಂದು ಸಂದರ್ಭದಲ್ಲಿ ರಾಜ್ಯದ ಜನತೆ ಬಹಳ ಕುತೂಹಲದಿಂದ, ಬಹಳ ನಿರೀಕ್ಷೆಯಿಂದ, ಕಾದು ಕುಳಿತ್ತಿದ್ದರು. ರಾಜ್ಯದ ಜನತೆಯ ಜೊತೆಯಲ್ಲಿ ಮಾಧ್ಯಮಗಳು ಇರಬಹುದು, ಜನಪ್ರತಿನಿಧಿಗಳು ಇರಬಹುದು ಹಾಗೂ ವಿರೋಧ ಪಕ್ಷದಲ್ಲಿ ಇರುವಂತಹ ಸದಸ್ಯರುಗಳಾದ ನಮಗೆಲ್ಲರಿಗೂ ಕೂಡ ಮುಂದಿನ ದಿನಗಳಲ್ಲಿ ಯಾವುದೇ ರೀತಿಯಲ್ಲಿ ಟೀಕೆಗಳನ್ನು ಮಾಡುವುದಕ್ಕೆ ಅವಕಾಶವೇ

ಸಿಗುವುದಿಲ್ಲವೇನೋ ಎನ್ನುವಂತಹ ಭಾವನೆಯಲ್ಲಿ ನಾವೆಲ್ಲ ಇದ್ದೆವು ಎಂದು ಹೇಳುವುದಕ್ಕೆ ಬಯಸುತ್ತೇನೆ. 17ನೇ ತಾರೀಖು ಬಜೆಟ್‌ನ್ನು ಏನು ಮಂಡನೆ ಮಾಡಿದರು, 16ನೇ ತಾರೀಖಿನಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೆಲವು ಪತ್ರಿಕೆಗಳಿಗೆ ಸಂದರ್ಶನವನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ರಾಜುದ ಉದ್ದಗಲಕ್ಕೂ ಪ್ರವಾಸ ಮಾಡಿದ್ದಾರೆ. ಯಾವಾಗ ಸಿಗಲಿಲ್ಲವೆಂದು ರಾಜ್ಯಾದ್ಯಂತ ಪ್ರತಿಭಟನೆಗಳು ಪ್ರಾರಂಭವಾಯಿತು, ಆಗ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಉದ್ದಗಲಕ್ಕೂ ಐದಾರು ಭಾಗಗಳಲ್ಲಿ ಸಭೆಗಳನ್ನು ಮಾಡಿ, ಸಂವಾದ ಕಾರ್ಯಕ್ರಮಗಳಲ್ಲೂ ಭಾಗವಹಿಸಿ, ಈ ಬಾರಿ ರೈತರಿಗೆ ಹೆಚ್ಚು ಅನುಕೂಲಗಳನ್ನು ಮಾಡತಕ್ಕಂಥ ಬಜೆಟ್ ಮಂಡನೆ ಮಾಡುತ್ತೇವೆನ್ನುವ ವಿಷಯವನ್ನೂ ಕೂಡ ಪ್ರಸ್ತಾಪ ಮಾಡಿದ್ದರು. ಸನ್ಮಾನ್ಯ ಮುಖ್ಯಮಂತ್ರಿಗಳು 3ನೇ ಬಜೆಟ್‌ನ್ನು ಮುಂಡನೆ ಮಾಡಿದ್ದಾರೆ. ಬಹುಶಃ ದಿವಂಗತ ರಾಮಕೃಷ್ಣ ಹೆಗಡೆಯವರು ಹಾಗೂ ಮಾನ್ಯ ಸಿದ್ದರಾಮಯ್ಯನವರು ಆದನಂತರ ಸತತವಾಗಿ ಮೂರನೇ ಬಜೆಟ್‌ನ್ನು ಮಂಡಿಸುವಂತಹ ಒಂದು ಅವಕಾಶ ಸಿಕ್ಕಿದ್ದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಎನ್ನುವುದಕ್ಕೆ ನಾನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಆದರೆ ಹಿಂದಿನ ಎರಡು ಬಜೆಟ್‌ಗಳನ್ನು ಮಂಡನೆ ಮಾಡಬೇಕಾದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಟ್ಟಿ ಹಾಕಿದಂತಹ ವಾತಾವರಣ ಇತ್ತು ಎನ್ನುವುದನ್ನು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, 'I had now freedom I was like a bird in the golden cage with wings clipped. Now, I am a free bird' ಎನ್ನುವ ಮಾತನ್ನು ಹೇಳಿದ್ದಾರೆ. ಮತ್ತೆ ಕೆಲವು ಪತ್ರಿಕೆಗಳಲ್ಲಿ, ಸ್ವಚ್ಛಂದ ಹಕ್ಕಿಯಿಂದ ಕೆಲವು ಜನಪರ ಹೊರೆಯಿಲ್ಲದ ಬಜೆಟ್ ಎಂದು 16ನೇ ತಾರೀಖಿನಲ್ಲಿ ಮಾಧ್ಯಮಗಳು ಬಿತ್ತರಿಸಿದ್ದಾರೆ. ಅದರಲ್ಲು ಕೂಡ ಅವರು ಸಂದರ್ಶನವನ್ನು ಕೊಡತಕ್ಕಂಥ ಸಂದರ್ಭದಲ್ಲಿ, ರಾಜ್ಯದ ಹಣಕಾಸು ಸಚಿವರಾಗಿ ಹಾಗೂ ಉಪ ಮುಖ್ಯಮಂತ್ರಿಗಳಾಗಿ ಇಪ್ಪತ್ತು ತಿಂಗಳು ಸಮ್ಮಿಶ್ರ ಸರ್ಕಾರದಲ್ಲಿ ಪಲ್ಗೊಂಡಿದ್ದ ಹಾಲಿ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಈಗ ಪಂಜರದಿಂದ ಹೊರಬಂದು ಸ್ವತಂತ್ರವಾಗಿ, ಸ್ವಚ್ಛಂದವಾಗಿ ಹಾರಾಡುತ್ತಿರುವ ಹಕ್ಕಿ ಎಂದು ಹೇಳಿವೆ. ನಾನು ಇನ್ನೊಂದು ಪತ್ರಿಕೆಯಲ್ಲಿ ಗಮನಿಸಿದ್ದೇನೆ, ಕುಂತ್ರೆ ನಿಂತ್ರೆ ಬಜೆಟ್ ಧ್ಯಾನ, ಕಾಣದಂತೆ ಮಾಯವಾದ ಸಿ.ಎಂ., ಬಜೆಟ್ ಗುಟ್ಟು ಕೊಂಚ ಕೂಡ ಬಿಟ್ಟು ಕೊಡುತ್ತಿಲ್ಲವೆಂದು ಅವರ ಸುಪುತ್ರಿಯೂ ಹೇಳಿರತಕ್ಕಂಥ ಒಂದು ಸಂದರ್ಶನವನ್ನು ಗಮನಿಸಿದ್ದೇನೆ. ಈ ರೀತಿ ಬಹಳ ವಿಷಯ ಚರ್ಚೆ ಮಾಡಿದ್ದಾರೆ. ಅವರ ಕುಟುಂಬದ ಸದಸ್ಯರುಗಳು ಈ ಒಂದು ಬಜೆಟ್‌ನಲ್ಲಿ ನಮ್ಮ ತಂದೆಯವರು ಯಾವ ರೀತಿ ಕೊಡಬೇಕು ಎನ್ನುವುದರ ಬಗ್ಗೆ ಕಾರ್ಯೋನ್ಮುಖರಾಗಿ ಹೇಳಿರತಕ್ಕಂಥ ವರದಿಗಳನ್ನು

ಗಮನಿಸಿದ್ದೇನೆ, ಈ ಸಂದರ್ಭದಲ್ಲಿ ಅದರ ಸಂಪೂರ್ಣ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ನನಗೆ ಇದನ್ನೆಲ್ಲ ನೋಡಿದಾಗ ಎಲ್ಲೋ ಒಂದು ಕಡೆ "ಏನಪ್ಪ, ಇನ್ನು ಮುಂದೆ ಈ ರಾಜ್ಯದಲ್ಲಿ ಬೇರೆ ಯಾವ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವೇ ಇಲ್ಲವೇನೋ" ಎನ್ನುವಂತಹ ಭಾವನೆ ನನಗೂ ಕೂಡ ಬಂದು ಹೋಗಿತ್ತು. ನಾನೂ ನಡುಗಿ ಹೋಗಿಬಿಟ್ಟಿದ್ದೆನು. 16ನೇ ತಾರೀಖಿನ ಪತ್ರಿಕೆಗಳ ವರದಿಗಳನ್ನು ನೋಡಿದಾಗ ಆ ರೀತಿಯ ಭಾವನೆ ಉಂಟಾಗಿತ್ತು. ಹಿಂದೆ ಹಲವಾರು ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಿದಾಗ ಅವರು ಆ ಸಂದರ್ಭದಲ್ಲಿ ಆಡಳಿತ ಪಕ್ಷಗಳಿಗೆ ಹೇಳಿದ್ದಾರೆ. ನಿಮ್ಮ ಬಜೆಟ್‌ಗಳನ್ನು ನೋಡಿಬಿಟ್ಟರೆ ನಮ್ಮ ರಾಜ್ಯದಲ್ಲಿ ನಂದನವನ ಸೃಷ್ಟಿ ಆಗಿಯೇ ಹೋಯಿತು ಎನ್ನುವಂತಹ ಪ್ರತಿಕ್ರಿಯೆಗಳನ್ನು ಏನು ಇಲ್ಲಿ ಕುಳಿತು ವ್ಯಕ್ತಪಡಿಸಿದ್ದರು, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅವಕಾಶ ಏನು ಸಿಕ್ಕಿದೆ, ಬಹುಶಃ ಇನ್ನು ನಮ್ಮ ರಾಜಕೀಯ ಭವಿಷ್ಯಗಳನ್ನು ಸಂಪೂರ್ಣವಾಗಿ ಬಂದ್ ಮಾಡಿಬಿಡುತ್ತಾರೆ ಎಂದು ಎಲ್ಲೋ ಒಂದು ಕಡೆ ಭಯ ಪ್ರಾರಂಭವಾಗಿತ್ತು. ಆದರೆ ನಂತರದ ದಿನಗಳಲ್ಲಿ ಪರಿಸ್ಥಿತಿ ಏನು ಎನ್ನುವ ಬಗ್ಗೆ ಈಗಾಗಲೇ ಹಲವಾರು ಮಾಧ್ಯಮಗಳು ಬರೆದಿದ್ದಾರೆ. ಬಜೆಟ್ ಮಂಡನೆ ಆದನಂತರ, ಹಲವಾರು ಸಂದರ್ಭದಲ್ಲಿ ಅವರು ಈ ಭಾಗದಲ್ಲಿ ಕುಳಿತಿದ್ದಾಗ ಚುನಾವಣಾ ಬಜೆಟ್ ಎಂದು ಚರ್ಚೆ ಮಾಡಿದ್ದಾರೆ, ಆಡಳಿತ ಪಕ್ಷಗಳು ಹೇಳಿಕೆ ಕೊಟ್ಟಾಗ ಈ ಮಾತುಗಳನ್ನು ಹೇಳಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಒಳ್ಳೆಯ ಪ್ರಚಾರವೂ ಸಿಕ್ಕಿದೆ. ರಾಜ್ಯದ ಜನತೆ ಕೂಡ ಮಾಧ್ಯಮಗಳಲ್ಲಿ ಬಂದಿರುವಂತಹ ವರದಿಗಳನ್ನು ನೋಡಿದಾಗ ಇನ್ನೇನು ಈ ರಾಜ್ಯದಲ್ಲಿ ಯಾವುದೇ ರೀತಿಯ ಸಮಸ್ಯೆಗಳು, ಯಾವುದೇ ರಂಗದಲ್ಲೂ ಇರುವುದಿಲ್ಲ ಎನ್ನುವ ಭಾವನೆಯನ್ನು ಮೂಡಿಸುವಂತಹ ನಿಟ್ಟಿನಲ್ಲಿ ಸನಮಾನ್ಯ ಮುಖ್ಯಮಂತ್ರಿಗಳು ಮೊದಲನೇ ಹಂತದಲ್ಲಿ ಯಶಸ್ವಿಯಾಗಿದ್ದಾರೆ ಎನ್ನುವಂತಹ ಭಾವನೆ ಮೂಡುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಕೆಲವು ಪತ್ರಿಕೆಗಳಲ್ಲಿ, ಜನಪ್ರಿಯ ಮಂತ್ರ, ಚುನಾವಣಾ ತಂತ್ರ ಎಂದು ಬರೆದಿದ್ದಾರೆ. ಚುನಾವಣಾ ತಂತ್ರ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದು ಮಾಧ್ಯಮದಲ್ಲಿಯೇ ಬರೆದಿರುವಂತಾದ್ದು. ಮತ್ತೊಂದು ಪತ್ರಿಕೆಯಲ್ಲಿ, ಗ್ರಾಮ ಸುಖಾಯ, ನಗರ ಹಿತಾಯ ಎಂದು ಬಂದಿದೆ. ಯಡಿಯೂರಪ್ಪನವರ ಹ್ಯಾಟ್ರಿಕ್ ಬಜೆಟ್, ಲೋಕಸೇವೆ, ಬಿಬಿಎಂಪಿ ಚುನಾವಣೆ ಮೇಲೆ ಕಣ್ಣು ಎಂದು ಬರೆದಿದ್ದಾರೆ. ಇನ್ನೊಂದು ಪತ್ರಿಕೆಯಲ್ಲಿ ಬರೆಯುತ್ತಾರೆ ಅನ್ನದಾತನಿಗೆ ಬೂರಿ ಭೋಜನ. ನಮ್ಮ ನಾಡು ಭಾಷೆಯಲ್ಲಿ ಬೂರಿ ಎನ್ನುವುದಕ್ಕೆ

ಇನ್ನೊಂದು ಅರ್ಥವಿದೆ. ಅದು ಎಲ್ಲರಿಗೂ ಅರ್ಥವಾಗಿರಬಹುದು ಎನ್ನುವುದು ನನ್ನ ಭಾವನೆ. ಚುನಾವಣೆಗಾಗಿ ಛೂ ಮಂತ್ರ.

(ಈ ಹಂತದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಮಾಧ್ಯಮಗಳಲ್ಲಿ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿರತಕ್ಕಂಥ ಬಜೆಟ್ ಎನ್ನುವುದನ್ನು ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ಬಣ್ಣಬಣ್ಣದ ಚಿತ್ರಣವನ್ನು ಸೃಷ್ಟಿ ಮಾಡಿದ್ದಾರೆ, ಇದನ್ನೆಲ್ಲಾ ನೋಡಿದಾಗ ನಮಗೆ ಎಲ್ಲೋ ಒಂದು ಕಡೆ ಮೈನಡುಕ ಆಯಿತು. ನಮ್ಮನ್ನು ಮತ್ತು ಈ ರಾಜ್ಯದ ಜನತೆಯನ್ನು ದಿಕ್ಕು ತಪ್ಪಿಸುವುದಿರಲಿ, ಈ ರಾಜ್ಯದಲ್ಲಿರುವಂತಹ ಮಾಧ್ಯಮಗಳನ್ನು ದಿಕ್ಕು ತಪ್ಪಿಸಿದ್ದಾರೆ ಎಂದು ನನಗೆ ಅನುಮಾನ ಇತ್ತು. ಇವತ್ತು ಈ ಬಜೆಟ್ ಅನ್ನು ಏನು ಮಂಡನೆ ಮಾಡಿದ್ದಾರೆ, ಈ ಬಜೆಟ್‌ನಲ್ಲಿ ಯಾವ ರೀತಿ ಒಂದು ಆರ್ಥಿಕ ಚಿತ್ತಣವನ್ನು ಇಡಬೇಕು, ಅದರ ಜೊತೆಗೆ ಈ ರಾಜ್ಯದ ಅಭಿವೃದ್ಧಿ ಯಾವ ರೀತಿಯಲ್ಲಿ ಹೋಗಬೇಕೆಂದು ದೂರಕೃಷ್ಟಿಯನ್ನು ಹೊಂದಿರಬೇಕಾದಂತಹ ಈ ಬಜೆಟ್, ಯಾವುದೇ ರೀತಿಯ ದೂರದೃಷ್ಟಿ ಇಲ್ಲದೆ ಇರುವಂತಹ ಬಜೆಟ್ ಎನ್ನವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇಲಾಖೆಗಳಿಗೆ ಶೇಕಡವಾರು ಎಷ್ಟು ಹಣವನ್ನು ಪ್ರತಿವರ್ಷ ನಿಗದಿ ಮಾಡುತ್ತಿದ್ದಾರೆ ಎನ್ನುವುದನ್ನು ನಾನು ಈ ಸದನಕ್ಕೆ ಬಂದ ದಿವಸದಿಂದ ಗಮನಿಸುತ್ತಿದ್ದೇನೆ. ಪ್ರತಿ ಸಂದರ್ಭದಲ್ಲೂ ನಾವು ಚರ್ಚೆಯನ್ನು ಮಾಡತಕ್ಕಂಥಾದ್ದು, ಈ ವರ್ಷ ಶೇಕಡವಾರು ಎಷ್ಟು ಹಣವನ್ನು ಇಟ್ಟು, ಹಿಂದಿನ ವರ್ಷ ಏನಿತ್ತು, ನಾವು ಏನು ಇಟ್ಟಿದ್ದೆವು, ಇವತ್ತು ಏನು ಇಟ್ಟಿದ್ದೇವೆ, ಈ ಶೇಕಡವಾರು ವಿಇಡಯಗಳಿಗೆ ನಮ್ಮ ಮಾತುಗಳನ್ನು ಸೀಮಿತಗೊಳಿಸಿದ್ದೇವೆ, ಯಾರೂ ತಪ್ಪು ತಿಳಿಯದಿದ್ದರೆ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ, ಇನ್ನು ಮುಂದಿನ ದಿನಗಳಲ್ಲಿ ಶೇಕಡವಾರು ಇಷ್ಟು ಇಟ್ಟಿದ್ದೇವೆ ಎನ್ನುವುದನ್ನು ತೆಗೆದು ಹಾಕಬೇಕು ಎಂದು ಹೇಳುವುದಕ್ಕೆ ಬಯಸುತ್ತೇನೆ. ನಾವು ಇವತ್ತು ಶೇಕಡವಾರು ಹಣ ಎಷ್ಟು ಹೆಚ್ಚು ಇಟ್ಟಿದ್ದೇವೆ ಎನ್ನುವುದು ಮುಖ್ಯವಲ್ಲ. ಈ ರಾಜ್ಯದಲ್ಲಿ ಇರತಕ್ಕಂಥ ಸಮಸ್ಯೆಗಳು ಏನಿವೆ, ಈ ರಾಜ್ಯದಲ್ಲಿ ಯಾವ್ಯಾವ ರಂಗದಲ್ಲಿ ಜನರ ತೊಂದರೆಗಳಿವೆ, ಯಾವರ ವಗಾದ ಜನತೆ ಇವತ್ತು ನೋವನ್ನು ಅನುಭವಿಸುತ್ತಿದ್ದಾರೆ, ನಗರ ಪ್ರದೇಶಗಳು ಹೇಗಿವೆ. ವಸತಿ ಇಲಾಖೆಗೆ ಯಾವ ಕಾರ್ಯಕ್ರಮಗಳನ್ನು ಕೊಡಬೇಕು, ಇವುಗಳಿಗೆ ಯುದ್ಧೋಪಾದಿಯಲ್ಲಿ ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಕೊಡಬೇಕು ಎನ್ನುವುದು ಮುಖ್ಯವೇ ಹೊರತು, ಅದರಲ್ಲಿ ನಾವು ಎಷ್ಟು ಶೇಕಡವಾರು ಯಶಸ್ವಿಯಾಗುತ್ತೇವೆ ಎನ್ನುವುದು ಮುಖ್ಯವೇ ಹೊರತು, ನಾವು ಶೇಕಡವಾರು ಎಷ್ಟು ಹಣವನ್ನು ನಿಗದಿ ಮಾಡಿದ್ದೇವೆ ಎನ್ನುವುದು

ಅಪ್ರಸ್ತುತ ಎನ್ನುವುದು ನನ್ನ ಭಾವನೆ. ನಾನು ಸದನದ ಈ ಭಾಗದಲ್ಲಿ ಕುಳಿತು ನಮ್ಮ ಪಕ್ಷದ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ನಾಯಕತ್ವವನ್ನು ಏನು ಕೊಟ್ಟಿದ್ದಾರೆ, ನಾನು ಮೊದಲ ಬಾರಿಗೆ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಾಗ ಮೊದಲನೆ ಇಪ್ಪತ್ತು ತಿಂಗಳು ಕೊನೇ ಬೆಂಚಿನಲ್ಲಿ ಇರುತ್ತಿದ್ದೆನು. ಈಗ ಈ ಭಾಗದಲ್ಲಿ ಕುಳಿತು ಕೆಲಸ ಮಾಡುವಂತಹ ಸಂದರ್ಭ ನನ್ನ ಪಾಲಿಗೆ ಏನು ಬಂದಿದೆ, ನನಗೆ ಬೇರೆ ಮಾರ್ಗವೇ ಎಲ್ಲ, ಇವತ್ತು ಒಬ್ಬ ವಿದ್ಯಾರ್ಥಿಯ ರೀತಿಯಲ್ಲಿ ಕೆಲಸವನ್ನು ಮಾಡಬೇಕಾದಂತಹ ಒಂದು ಅನಿವಾರ್ಯ ಪರಿಸ್ಥಿತಿಯಲ್ಲಿ ನಾನು ಬಂದಿದ್ದೇನೆ, ಕಳೆದ 10-15 ವರ್ಷಗಳ ವಿಧಾನ ಸಭೆಯ ಕಲಾಪಗಳಲ್ಲಿ ಆಯವ್ಯಯಗಳನ್ನು ಮಂಡನೆ ಮಾಡತಕ್ಕಂಥ ಸಂದರ್ಭಗಳಲ್ಲಿ ಮಾನ್ಯ ಸದಸ್ಯರುಗಳು ಚರ್ಚೆ ಮಾಡಿರುವಂತಹ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿರುವುದನ್ನು ನಾನು ಗಮನಿಸಿದ್ದೇನೆ.

ಇವತ್ತು ಈ ಒಂದು ಸಂದರ್ಭದಲ್ಲಿ ನಾನು ಹೇಳುವಂಥಾದ್ದು ಏನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯವನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ, ಅವರು ಈ ವರ್ಷದ ಕಾರ್ಯಕ್ರಮಗಳನ್ನು ಹೇಳುವುದರ ಜೊತೆಗೆ ಆರ್ಥಿಕ ಪರಿಸ್ಥಿತಿಯ ಚಿತ್ರಣವನ್ನು ಇಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಅವರ ಭಾಷಣದಲ್ಲಿ ಹೇಳಿರುವಂಥಾದ್ದು. ರಾಜ್ಯದ ಸೀಮಿತ ಹಣಕಾಸು ಸಂಪನ್ಮೂಲ ಮತ್ತು ಅತಿ ಕಡಿಮೆ ಆರ್ಥಿಕ ಅವಕಾಶ ಇರುವುದರಿಂದ ನಮ್ಮ ರಾಜ್ಯದಲ್ಲಿ ಅಭಿವೃದ್ಧಿಯೇತರ ಖರ್ಚನ್ನು ಆದಷ್ಟು ಕಡಿಮೆ ಮಾಡಿ ನಮ್ಮ ಸಂಪನ್ಮೂಲಗಳನ್ನು ಬಂಡವಾಳ ಹೂಡಿಕೆಗೆ ತೊಡಗಿಸಬೇಕೆಂದು ಹೇಳಿದ್ದಾರೆ. ಈ ನಿವ್ವಳ ಉಳಿಕೆ ಆಯವ್ಯಯವನ್ನು ನೋಡಿದರೆ ಸುಮಾರು 4,500 ಕೋಟಿ ರೂಪಾಯಿಗಳನ್ನು ಮಾರುಕಟ್ಟೆಯಿಂದ ಸಾಲ ಎತ್ತುವ ಮೂಲಕ ಪಡೆಯುವುದಕ್ಕಾಗಿ ಹೇಳಿದ್ದಾರೆ. ಅದಲ್ಲದೆ ಭೂಮಿ ಮಾರಾಟ ಮಾಡುವುದರಿಂದ 3,000 ಕೋಟಿ ರೂಪಾಯಿಗಳ ಸಂಗ್ರಹ ಆಗಬಹುದೆಂಬ ನರೀಕ್ಷೆಯನ್ನು ಇಟ್ಟಿದ್ದಾರೆ. ಈ ರೀತಿ ಸಾಲ ಪಡೆದಂಥ ಹಣವನ್ನು ಶಾಶ್ವತವಾದಂಥ ಕಾರ್ಯಕ್ರಮಗಳನ್ನು ತರುವುದಕ್ಕಿಂತ ಹೆಚ್ಚಾಗಿ ಕೇವಲ ಕೆಲವು ಜನಪ್ರಿಯ ಕಾರ್ಯಕ್ರಮಗಳಿಗೆ ಹಣವನ್ನು ವಿನಿಯೋಗ ಮಾಡುವುದರ ಮುಖಾಂತರ ಈ ರಾಜ್ಯವನ್ನು ಎಷ್ಟರ ಮಟ್ಟಿಗೆ ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಾರೆ ಎನ್ನುವಂಥದ್ದು ನಮ್ಮ ನಿಮ್ಮೆಲ್ಲರ ಪ್ರಶ್ನೆ ಇರುವಂಥಾದ್ದು, ಈ ಒಂದು ವಿಷಯದಲ್ಲಿ ನಾನು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು 2008-09ನೇ ಸಾಲಿನಲ್ಲಿ 9% GSDP ಬೆಳವಣಿಗೆ ಆಗಬೇಕೆಂದು ಹೇಳಿದ್ದಾರೆ. ಈ ರೀತಿಯಾಗಿ ಬೆಳವಣಿಗೆ ಆಗಬೇಕಾದರೆ ಕನಿಷ್ಠ ಪಕ್ಷ 30%-40% GSDP

ಬಂಡವಾಳವನ್ನು ಹೂಡಬೇಕಾಗುತ್ತದೆ. ಇದನ್ನು ಯಾವ ಮೂಲದಿಂದ ಭರಿಸುತ್ತಾರೆನ್ನುವಂಥದ್ದನ್ನು ಇಲ್ಲಿ ಹೇಳಿಲ್ಲ. ಅಲ್ಲದೆ 9% GSDP ನಿರೀಕ್ಷಿತ ಬೆಳವಣಿಗೆ ಆಗಬೇಕಾದರೆ, ಮುಂಬರುವ ವರ್ಷಗಳಲ್ಲಿ ಆರ್ಥಿಕ ಯೋಜನೆ 25,953 ಕೋಟಿ ರೂಪಾಯಿಗಳು ಏನೆಏನೂ ಸಾಕಾಗುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರೇ ವ್ಯಕ್ತಪಡಿಸಿದ್ದಾರೆ. 2008–09ನೇ ಸಾಲಿನಲ್ಲಿ ಅವರ ಆಯವ್ಯಯದ ಪ್ರಕಾರವೇ 2,985.45 ಕೋಟಿ ರೂಪಾಯಿಗಳು ಎಂದು ಹೇಳಿದ್ದು ಅದು GSDP ಯ 1.3% ನಷ್ಟು ಇರುತ್ತದೆ. ಆದರೆ, ಅದೇ ವರ್ಷಕ್ಕೆ ಪರಿಷ್ಕೃತ ಅಂದಾಜಿನ ಆರ್ಥಿಕ ಕೊರತೆ 6,985.48 ಕೋಟಿ ರೂಪಾಯಿಗಳೆಂದು ಅದು GSDP ಯ 2.83%ರಷ್ಟೆಂದು ತೋರಿಸಲಾಗಿದೆ. ಆದರೆ ರಾಜ್ಯ ಸಕಾರದಮ ಮಧ್ಯಮಾವಧಿ ವಿತ್ತೀಯ ಯೋಜನೆ ಅಂದಾಜುಗಳು 2008–2012 ಪ್ರಕಾರ ರಾಜಸ್ವ ಖರ್ಚು 2007–08ನೇ ಸಾಲಿನಲ್ಲಿ 0.74%ರಷ್ಟು ಇದ್ದು ತದನಂತರ 1.38% ಎಂದು ತೋರಿಸಲಾಯಿತು. ಆದುದರಿಂದ ಕ್ರೋಢೀಕೃತ ವಿತ್ತೀಯ ಕೊರತೆಯನ್ನು, fiscal deficit ಅನ್ನು 2.84 ನಿಂದ 2.74 ಎಂದು ಇಳಿಸಲಾಗಿದೆ. ಹೀಗಿದ್ದಲ್ಲಿ ಮೇಲ್ಕಂಡ ಆಯವ್ಯಯ ಯಾವ ರೀತಿಯಲ್ಲಿ ಕ್ರೋಢೀಕೃತ ಕೊರತೆಯಾಗುತ್ತದೆ? ಅದರಲ್ಲೇನ್ನಾದರೂ ರಾಜ್ಯಸಕಾರವು ವಿದ್ಯುತ್ ವ್ಯಯಕ್ಕೆ ನೀಡಿರುವ ಸಬ್ಸಿಡಿಯನ್ನೂ ರಾಜಸ್ವ ವೆಚ್ಚಕ್ಕೆ ಸೇರಿಸಿದೆಯೇ? ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ವಿವರಣೆಯನ್ನು ನೀಡಬೇಕೆಂಬ ಮನವಿಯನ್ನು ಈ ಸಂದರ್ಭದಲ್ಲಿ ಮಾಡಬಯಸುತ್ತೇನೆ. ಪ್ರಮುಖವಾಗಿ ಅವರು ಬಜೆಟ್ ಅನ್ನು ಮಂಡನೆ ಮಾಡುವ ಸಂದರ್ಭದಲ್ಲಿ ಕೃಷಿ ಇಲಾಖೆಯ ವಿಷಯವನ್ನೇ ಮೊದಲನೆಯ ವಿಷಯವನ್ನಾಗಿ ಇಟ್ಟಿದ್ದಾರೆ. ಅವರು ಈ ಸರ್ಕಾರವನ್ನು ರಚನೆ ಮಾಡಬೇಕಾದರೆ ನಾನು ರೈತರ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕಾರ ಮಾಡಿದ್ದೇನೆಂದು ಹೇಳಿದ್ದಾರೆ. ರೈತರ ನೆರವಿಗೆ ಇವತ್ತು ಪರಿಹಾರೋಪಾಯಗಳನ್ನು ರೂಪಿಸಲು ರಾಜಧಾನಿಯಿಂದ ಹಿಡಿದು ಇಡೀ ರಾಜ್ಯದ ಉದ್ದಗಲಕ್ಕೂ ಪ್ರವಾಸ ಮಾಡಿದ್ದೇನೆಂದು, ಇವನ್ನೆಲ್ಲಾ ಹೇಳಿ, ಇವತ್ತು ಕೃಷಿ ಇಲಾಖೆಯ ವಿಷಯದಲ್ಲಿ ಅವರೇನು ಪ್ರಸ್ತಾಪ ಮಾಡಿದ್ದಾರೆ. ಹಲವಾರು ಬಾಬ್ತುಗಳಿಂದ ಕೃಷಿ ಇಲಾಖೆಗೆ ಕೊಟ್ಟಿರತಕ್ಕಂಥ ಸುಮಾರು 8,000 ಕೋಟಿ ರೂಪಾಯಿಗಳವರೆಗೆ ನಾವು ಈ ವರ್ಷದ ಬಜೆಟ್‌ನಲ್ಲಿ ರೈತರಿಗೋಸ್ಕರವಾಗಿ ಹಣವನ್ನು ಇಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನು ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಾವು ಕಳೆದ ವರ್ಷ ರಾಜ್ಯದಲ್ಲಿದ್ದಂಥ ರೈತರ ಆತ್ಮಹತ್ಯೆಯ ಪ್ರಕರಣಗಳನ್ನು ಗಮನಿಸಿದರೆ ಬೀದರ್ ಜಿಲ್ಲೆಯಲ್ಲಿ ಪ್ರವಾಸ ಮಾಡುವಂಥ ಸಂದರ್ಭದಲ್ಲಿ ರೈತರ ಸಾಲವನ್ನು ಮನಾ

ಮಾಡತಕ್ಕಂಥ ಯೋಜನೆಯನ್ನು ತರಬೇಕೆನ್ನುವ ಮಾತನ್ನು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರು ಕೆಲವು ಪತ್ರಿಕೆಗಳಲ್ಲಿ ಹೇಳಿದ್ದಾರೆ. ಹಿಂದಿನ ಸರ್ಕಾರದಲ್ಲಿ ನನಗೆ ಸ್ವತಂತ್ರವಾಗಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂಬ ಮಾತನ್ನು ಅವರು ಹೇಳಿದ್ದಾರೆ. ಇವತ್ತು ನಾನು ಅವರನ್ನು ಕೇಳುವುದಕ್ಕೆ ಬಯಸುತ್ತೇನೆ. ಅವರು ಮುಖ್ಯಮಂತ್ರಿಯಾಗಿ, ಆರ್ಥಿಕ ಸಚಿವರಾಗಿ ಯಶಸ್ವಿಯಾಗಿ ಕೆಲಸವನ್ನು ನಿರ್ವಹಿಸುವಂಥದ್ದಕ್ಕೆ ನಾನು ಯಾವ ಸಂದರ್ಭದಲ್ಲಿ ಮೂಗು ತೂರಿಸಿದ್ದೇನೆ, ಯಾವ ವಿಷಯದಲ್ಲಿ ಅವರಿಗೆ ಅಡಚಣೆ ಮಾಡಿದ್ದೇನೆ, ದಯವಿಟ್ಟು ರಾಜ್ಯದ ಜನತೆಗೆ ತಿಳಿಸ ಬೇಕಾಗುತ್ತದೆ. ನಾನು ನನ್ನ ಕಾಲದಲ್ಲಿ ಯಾವುದೇ ಸಚಿವರಿಗೆ, ಯಾವುದೇ ರೀತಿಯ ಕಟ್ಟುಪಾಡುಗಳನ್ನು ಮತ್ತು ಅವರು ಮಾಡುವಂಥ ಕೆಲಸಗಳಿಗೆ ಸ್ವಾತಂತ್ರ್ಯವನ್ನು ಕೊಡದೇ ಇರುವಂಥ ರೀತಿಯ ಮನೋಭಾವದಿಂದ ನಾನು ಕೆಲಸ ಮಾಡಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಯವರಿಗೂ ಸಹ ಅದೇ ರೀತಿಯಾಗಿ ಸರ್ವ ಸ್ವತಂತ್ರ್ಯವನ್ನು ಕೊಟ್ಟಿದ್ದೇನೆ. ನಾನು ಅವರಿಗೆ ಅದನ್ನು ನೆನಪಿ ಕೊಡಬಯಸುತ್ತೇನೆ. ಸಚಿವ ಸಂಪುಟದಲ್ಲಿ ನಾವು ಬಜೆಟ್‌ಗೆ ಒಪ್ಪಿಗೆ ಒಡೆದು ಸದನದಲ್ಲಿ ಮಂಡನೆ ಮಾಡಲು ಬಂದಂಥ ಸಂದರ್ಭದಲ್ಲಿ ಅವರು ಅವರ ಜೇಬಿನಿಂದ ತೆಗೆದು ಕೆಲವು ಘೋಷಣೆಗಳನ್ನು ಮಾಡಿದರು. ಆ ಸಂದರ್ಭದಲ್ಲೂ ನಾನು ಚಕಾರ ಎತ್ತಲಿಲ್ಲ, ಅವರಿಗೆ ಎಲ್ಲಾ ರೀತಿಯ ಸಹಕಾರವನ್ನೂ ಕೊಟ್ಟೆ, ಅವರು ಮಠ–ಮಾನ್ಯಗಳಿಗೆ ಕೊಟ್ಟಿದ್ದಾರೆ, ಅದೆಲ್ಲ ನನಗೆ ಅಪ್ರಸ್ತುತ, ಇದರ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಸಂಪೂರ್ಣವಾಗಿ ಏನು ಅಧಿಕಾರವನ್ನು ಕೊಟ್ಟಿದ್ದೆ ಅದಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇವತ್ತು ಕೃಷಿ ಇಲಾಖೆಗೆ ಸಂಬಂಧಪಟ್ಟ ಹಾಗೆ

ಶ್ರೀ ಮಲ್ಲಿಕಾರ್ಜುನ ಖರ್ಗೆ: ಒಂದು ನಿಮಿಷ ತಾವು ಕೂರುತ್ತೀರಾ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಸಾರ್, ಇದೇನಾದರೂ ಹಕ್ಕು ಚ್ಯುತಿಯಾಗುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಅವರು ಮಾತನಾಡುವಾಗ ಹೇಳಿದರು ಬಜೆಟ್ ಮಂಡನೆ ಮಾಎಲುವಾಗ ನಾವೇನೂ ಅಡ್ಡಿ ಬರಲಿಲ್ಲ, ಏನೂ ಮಾಡಲಿಲ್ಲ suo-motu ಅಂದಿನ ಅರ್ಥ ಸಚಿವರು, ಉಪ ಮುಖ್ಯಮಂತ್ರಿಗಳು ಎದ್ದು ಜೇಬಿನಿಂದ ಚೀಟಿಯನ್ನು ತೆಗೆದು announce ಮಾಡಿದರು ಎಂದು ಹೇಳಿದರು. ಅದನ್ನೇ ನಾವು ಆಗಲೂ ಕೂಡ illegal ಎಂದು ಹೇಳಿದೆವು. ಇದು ಸರಿಯಿಲ್ಲ. ನೀವು ಸ್ವಾತಂತ್ರ್ಯ ಹೀಗೆ ಕೊಟ್ಟಿರಿ, ಈ ಬಗ್ಗೆ ರಷ್ಯಾದಲ್ಲಿ ಒಂದು ಹೇಳಿಕೆ ಇದೆ, ರಷ್ಯಾದಲ್ಲಿ ಸ್ವಾತಂತ್ರ ಸಿಕ್ಕಮೇಲೆ ಏನಾಯಿತೆಂದರೆ, ಅಲ್ಲಿ George king ರನ್ನು

ತೆಗೆದಮೇಲೆ ಎಲ್ಲರೂ ಕೂಡ ಬೀದಿಯಲ್ಲಿ ಅಡ್ಡಾಡುವುದಕ್ಕೆ ಶುರು ಮಾಡಿದರು. ಒಬ್ಬರು ಛತ್ರಿ ತೆಗೆದುಕೊಂಡು ರಸ್ತೆಯಲ್ಲೆಲ್ಲ ಅಡ್ಡಾಡಿದರಂತೆ, ಅದು ಒಬ್ಬರ ಮೂಗಿಗೆ ಹತ್ತಿತು. ಆಗ ಅವರು ಏನು ನೀವು ಈ ರೀತಿಯಾಗಿ ಅಡ್ಡಾಡುತ್ತದ್ದೀರಿ ಎಂದು ಕೇಳಿದರು. ಅದಕ್ಕೆ ಅವರು ಸ್ವಾತಂತ್ರ್ಯ ಸಿಕ್ಕಿದೆ ಅದಕ್ಕಾಗಿ ಅಡ್ಡಾಡುತ್ತಿದ್ದೇನೆ ಎಂದು ಹೇಳಿದರು. ಅದಕ್ಕೆ ಅವನು ಹೇಳಿದನಂತೆ: "Your liberty ends where my nose begins" ಎಂದು ಅದಕ್ಕೆ, ನಿಮ್ ಸ್ವಾತಂತ್ರ್ಯ ಅಲ್ಲಿಗೆ ಮುಗಿಯಿತು, ನನ್ನ ಮೂಗು ಎಲ್ಲಿ ಬರುತ್ತದೆ ಅಲ್ಲಿಗೆ ನಿಮ್ಮ ಸ್ವಾತಂತ್ರ್ಯ ಮುಗಿಯಿತು ಎಂದು. ಹಾಗೆಯೇ, ನೀವು too much ಸ್ವಾತಂತ್ರ್ಯ ಕೊಟ್ಟರೆ ಹೀಗೆ ಆಗುವುದು. ರಾಜ್ಯದ ಗತಿಯೂ ಹೀಗೆ ಆಯಿತು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಎಲ್ಲಾ ಒಳ್ಳೆಯದೇ ಆಯಿತು, ಅಂದು ಒಳ್ಳೆಯ ಬಜೆಟ್ ಕೊಟ್ಟಿದ್ದೀರೆಂದು ತಾವೇ ಹೇಳಿದ್ದೀರಿ. ತಾವೇ ಸದನದಲ್ಲಿ ಆರ್ಥಿಕ ಮಂತ್ರಿಗಳು ಒಳ್ಳೆಯ ಬಜೆಟ್ ಅನ್ನು ಕೊಟ್ಟಿದ್ದಾರೆಂದು ಹೇಳಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮಗೆ industries ಅಷ್ಟೇ ಗೊತ್ತಿರುವುದು, ಸ್ವಲ್ಪ ಇರಿ. ತಾವು ಇನ್ನೊಂದು ಮಾತನ್ನು ಹೇಳಿದ್ದೀರಿ, ಅದನ್ನು ನಾನು ಒಪ್ಪುವುದಿಲ್ಲ. ನೀವು ಹೇಳುವಂಥದ್ದು ನಿಮ್ಮ ದೃಷ್ಟಿಯಲ್ಲಿ ಸರಿ ಇರಬಹುದು. ಈಗ allocation ಮಾಡುವಾಗಲೇ ಒಂದೊಂದು ಇಲಾಖೆಗೂ, sectorಗೂ ಇಷ್ಟಿಷ್ಟು ಎಂದು ಮಾಡುತ್ತೇವೆ. Naturally irrigation sector ಗೆ allocation ಮಾಡುವಾಗ ನಿಮ್ಮ ಕಾಲದಲ್ಲಿ 17% ಮಾಡಿದರು. ಈಗ ಎಷ್ಟು ಮಾಡಿದ್ದಾರೆ? 13% ಮಾಡಿದ್ದಾರೆ. ಅಂದರೆ ಇನ್ನೂ down ,ಅದಕ್ಕೆ ಇದು ರೈತರ ಪರ ಇರುವ ಬಜೆಟ್ ಅಂದರೆ, down, down, down…

ಶ್ರೀ ಎನ್. ಯೋಗೀಶ್ ಭಟ್: ಹಲವು ತಿಂಗಳುಗಳ ಕಾಲ Finance Department ಗೆ Finance Secretary ಇರಲಿಲ್ಲ, ಹೀಗೆ ಏಕೆ ಆಯಿತು ಎಂಬುದರ ಬಗ್ಗೆ ಈ ಸಂದರ್ಭದಲ್ಲಿ ಸ್ವಲ್ಪ ವಿವರಣೆ ಕೊಟ್ಟರೆ ಒಳ್ಳೆಯದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಹೇಳೋಣ, ತೊಂದರೆ ಏನೂ ಇಲ್ಲ. Finance Secretary ಏತಕ್ಕೋಸ್ಕರ ಇರಲಿಲ್ಲವೆನ್ನುವುದು ಸಮ್ಮಿಶ್ರ ಸರ್ಕಾರ ನಡೆಸುವಂಥ ಸಂದರ್ಭದಲ್ಲಿ ಒಬ್ಬ ಮುಖ್ಯ ಮಂತ್ರಿಗೆ ಇರುವಂಥ prerogative rights.ಇವತ್ತು ಇಲಾಖಾ ಕಾರ್ಯದರ್ಶಿಗಳನ್ನು, ಪ್ರಧಾನ ಕಾರ್ಯದರ್ಶಿ ಇರಬಹುದು, ಅವರನ್ನು ಆಯ್ಕೆ ಮಾಡುವಂಥದ್ದು ಮುಖ್ಯಮಂತ್ರಿಗಳ prerogative rights ಇತ್ತು. ನಾನು ನನ್ನ ಸಮಾಜದವರನ್ನಾಗಲಿ, ಮತ್ತು ಇನ್ನಾವುದೋ ವ್ಯಾಮೋಹದಿಂದ ಅಧಿಕಾರಿಗಳನ್ನು ಹಾಕಬೇಕೆಂದು ತೀರ್ಮಾನ ಮಾಡಲಿಲ್ಲ. ನಾನು ಆ ಸಂದರ್ಭದಲ್ಲಿ

ತೆಗೆದುಕೊಳ್ಳುವಂಥ ನಿರ್ಣಯಕ್ಕೆ ಅದು ಅಡ್ಡ ಬಂದಿದ್ದರಿಂದ ಅದು ಸ್ವಲ್ಪ ದಿವಸ pending ನಲ್ಲಿತ್ತು. ಅಷ್ಟೇ, ಅದರಲ್ಲಿ ಇನ್ನೇನೂ ಬೇರೆ ಉದ್ದೇಶವಿರಲಿಲ್ಲ. ನಾನು ಇವತ್ತು ರೈತರ ಸಾಲದ ವಿಷಯವನ್ನು ಚರ್ಚೆ ಮಾಡುತ್ತಿದ್ದೇನೆ. ತಮಿಳುನಾಡಿನಲ್ಲೂ ರೈತರ ಸಾಲವನ್ನು ಮನ್ನಾ ಮಾಡಿದರು. ಅಂದು ನಾನು ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳನ್ನು ಗಮನಿಸಿ ರೈತರ ಸಾಲ ಮನ್ನಾ ಯೋಜನೆಯನ್ನು ನಮ್ಮ ರಾಜ್ಯದಲ್ಲೂ ಒಂದು ಬಾರಿ ಜಾರಿಗೆ ತರುವ ಮುಖಾಂತರ ರೈತರ ಆತ್ಮಹತ್ಯೆಯನ್ನು ತಡೆಯಲು ಹಾಗೂ ಮಾನಸಿಕವಾಗಿ ಅವರಿಗೆ ಒಂದು ಆತ್ಮ ಸ್ಥೈರ್ಯವನ್ನು ತುಂಬುವಂಥ ಕೆಲಸವನ್ನು ಮಾಡಬೇಕೆಂಬ ದೃಷ್ಟಿಯಿಂದ, ನಿರ್ಣಯವನ್ನು ತೆಗೆದುಕೊಂಡಿದೆ. ಏಕೆಂದರೆ, ರೈತರ ಸಾಲವನ್ನು ಮನ್ನಾ ಮಾಡಿದ ತಕ್ಷಣವೇ ಇಡೀ ರಾಜ್ಯದ ರೈತರ ಸಮಸ್ಯೆ ಬಗೆಹರಿಯುವುದಿಲ್ಲವೆಂಬುದು ನನಗೆ ಗೊತ್ತಿದೆ.

ಆ ಸಂದರ್ಭದಲ್ಲಿ ಏನು ನಡೆಯಿತು ಎಂದು ನಾನು ಇಲ್ಲಿ ವಿವರವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ರೈತರ ಸಾಲ ಮನ್ನಾ ಕಾರ್ಯಕ್ರಮವನ್ನು ತರತಕ್ಕಂಥ ಸಂದರ್ಭದಲ್ಲಿ, ಇದೊಂದು ವಿಷಯದಲ್ಲಿ ನಾನು ಅವರಿಗೆ ಒಂದು ಸ್ವಲ್ಪ ಇಕ್ಕಟ್ಟು ಕೊಟ್ಟಿರಬಹುದು. ನಾನು ಪಂಜರದ ಗಿಳಿಯಾಗಿದ್ದೆ ಎಂದು ಅವರು ಹೇಳಿದರು. ರೈತರ ಸಾಲ ಮನ್ನಾ ಯೋಜನೆಯನ್ನು ತರತಕ್ಕಂಥ ವಿಷಯದಲ್ಲಿ ನನಗೂ, ಅವರಗೂ ಸ್ವಲ್ಪ ವಿರೋಧ ಆಯಿತು. ಮಾಡಲಿಕ್ಕೆ ಸಾಧ್ಯ ಇಲ್ಲ ಎಂದು ಹೇಳಿ ಅವರು ಹೇಳಿಕೆಯನ್ನು ಕೊಟ್ಟರು. ಆದರೆ ಅಂತಿಮವಾಗಿ ಆ ನಿರ್ಣಯವನ್ನು ಮಾಡಿದರು. ಆವತ್ತು ಉಪಮುಖ್ಯಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದ ಅವರು, ಸದನದಲ್ಲಿ ರೈತರ ಸಾಲ ಮನ್ನಾ ಯೋಜನೆಯನ್ನು ಕೇವಲ 25 ಸಾವಿರ ರೂಪಯಿಗಳಿಗೆ ಸೀಮಿತ ಮಾಡಬೇಕೆನ್ನುವ ನಿರ್ಧಾರವನ್ನು ಮಾಡಿದರು. ಆಗ ಈ ಭಾಗದಲ್ಲಿ ಕುಳಿತಿದ್ದಂಥ ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು, ಕನಿಷ್ಟವೆಂದರೆ ಒಂದು ಲಕ್ಷ ರೂಪಾಯಿಗಳ ಸಾಲವನ್ನಾದರೂ ಮನ್ನಾ ಮಾಡಿ ಎನ್ನತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡಿದರು. ತಮಿಳುನಾಡಿನಲ್ಲಿ ಯಾವ ರೀತಿ ಸಾಲ ಮನ್ನಾ ಯೋಜನೆಯನ್ನು ತಂದಿದ್ದಾರೆ, ಆ ರೀತಿ ನೀವೂ ಅನುಷ್ಠಾನಕ್ಕೆ ತನ್ನಿ ಎನ್ನುವ ಒಂದು ಪತ್ರವನ್ನು ಮಾಜಿ ಪ್ರಧಾನ ಮಂತ್ರಿಗಳು ಆವತ್ತಿನ ಉಪ ಮುಖ್ಯಮಂತ್ರಿಗಳಿಗೆ ಬರೆದಿದ್ದರು, ನನಗೂ ಬರೆದಿದ್ದರು, ಇವತ್ತು ಅವರು All party delegation ಹೋಗಬೇಕು ಎಂದರೆ ನೀವು ಬರಲಿಲ್ಲ, ಸಣ್ಣ ರಾಜಕೀಯ ಮಾಡಿಬಿಟ್ಟರಿ ಎಂದು ಆ ಭಾಗದಿಂದ ಮೊನ್ನೆ ಹೇಳುತ್ತಿದ್ದರು. ನಾನ ಹೇಳುತ್ತೇನೆ, All party delegation ಕರೆದುಕೊಂಡು ಹೋಗಬೇಕೆಂದು ಹೇಳಿ ಏನು ವಿಷಯಗಳನ್ನು ಇಟ್ಟಿದ್ದರು, ಇವತ್ತು ಕೇಂದ್ರ ಸರ್ಕಾರಕ್ಕೆ 60 ವರ್ಷಗಳ

ನಂತರವಾದರೂ ರೈತರ ಬಗ್ಗೆ ಜ್ಞಾನೋದಯವಾಗಿ 60-70 ಸಾವಿರ ಕೋಟಿ ರೂಪಾಯಿಗಳವರೆಗೆ ಸಾಲ ಮನ್ನಾ ಯೋಜನೆಯನ್ನೇನು ಇವತ್ತು ಅನುಷ್ಠಾನಕ್ಕೆ ತಂದಿದ್ದಾರೆ, ಅದು ನಮ್ಮ ರಾಜ್ಯದಲ್ಲಿ ನಡೆದಂಥ ಕಾರ್ಯಕ್ರಮವನ್ನು ನೋಡಿ ಅವರಿಗೆ ಜ್ಞಾನೋದಯವಾಯಿತು. ಅದನ್ನೆಲ್ಲಾ ನಾನು ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಇವತ್ತು ಅವರು ಮುಖ್ಯಮಂತ್ರಿಗಳಾಗಿ ಮೊನ್ನೆ ಕೇಂದ್ರ ಸರ್ಕಾರದ ಮುಂದೆ All party delegation ಕರೆದುಕೊಂಡು ಹೋದಾಗ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. 1,750 ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ನಮ್ಮ ರಾಜ್ಯ ಬಜೆಟ್‌ನಿಂದ ರೈತರ ಸಾಲ ಮನ್ನಾ ಯೋಜನೆಯನ್ನೇನು ಅನುಷ್ಠಾನಕ್ಕೆ ತಂದಿದ್ದೇವೆ, ಆ ಹಣವನ್ನು ನಮಗೆ reimburse ಮಾಡಿಕೊಡಿ ಎನ್ನತಕ್ಕಂಥ ಮನವಿಯನ್ನು ಕೇಂದ್ರದ ಆರ್ಥಿಕ ಸಚಿವರ ಮುಂದೆ ಇಟ್ಟಿದ್ದಾರೆ. ನನಗೆ ತಿಳಿದಂಥ ವಿಷಯವೆಂದರೆ, ಐದೂವರೆಯಿಂದು ಆರು ಸಾವಿರ ಕೋಟಿ ರೂಪಾಯಿಗಳವರೆಗೆ ರೈತರ ಸಾಲ ಮನ್ನಾ ಯೋಜನೆಗೆ ಹಣವನ್ನು ಕ್ರೂಢೀಕರಿಸಬೇಕಾಗಿತ್ತು. ಇವತ್ತು ತಮಿಳುನಾಡಿನಲ್ಲಿ ಸುಮಾರು ಏಳು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಈ ಕಾರ್ಯಕ್ರಮಕ್ಕಾಗಿ ನಮಗೆ ಕೊಡಬೇಕು ಎಂದು ಕೇಂದ್ರದ ಆರ್ಥಿಕ ಸಚಿವರ ಮುಂದೆ ಅಲ್ಲಿಯ ಮುಖ್ಯಮಂತ್ರಿಗಳು ಇಟ್ಟಿದ್ದಾರೆ. ಆದರೆ ಇವತ್ತು ನೀವು ರೈತರಿಗೆ ಸೀಮಿತ ಮೊತ್ತದ ಸಾಲವನ್ನಷ್ಟೇ ಮನ್ನಾ ಮಾಡಿ, ನಮಗೆ 1,750 ಕೋಟಿ ರೂಪಾಯಿಗಳನ್ನು ವಾಪಸ್ಸು ಕೊಡಿ ಎನ್ನುವ ಮನವಿಯನ್ನು ಸಲ್ಲಿಸಿದ್ದೀರಿ. ನೀವು ಆರ್ಥಿಕ ಸಚಿವರಾಗಿ ರೈತರಿಗೆ ಅನುಕೂಲ ಮಾಡಿಕೊಡತಕ್ಕಂಥ ಒಂದು ಒಳ್ಳೆಯ ಅವಕಾಶ ನಿಮಗೇನು ಸಿಕ್ಕಿತ್ತು ಅದನ್ನು ಕಳೆದುಕೊಂಡಿರಿ ಎಂದು ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ತಮಿಳುನಾಡಿನ ಮುಖ್ಯಮಂತ್ರಿಗಳು ಕೇಂದ್ರದಲ್ಲಿರತಕ್ಕಂಥ ರಾಜಕೀಯ ಆಡಳಿತದ ವ್ಯವಸ್ಥೆಯಲ್ಲಿ, ಸರ್ಕಾರವನ್ನು ನಡೆಸತಕ್ಕಂಥ ವ್ಯವಸ್ಥೆಯಲ್ಲಿ ಅವರು ಏಳು ಸಾವಿರ ಕೋಟಿ ರೂಪಾಯಿಗಳನ್ನು ಪಡೆಯತಕ್ಕಂಥ ಅವಕಾಶವಿದ್ದು, ಅವರು ಕೇಂದ್ರದ ಮೇಲೆ ಒತ್ತಡ ತಂದು ಅದನ್ನು ಪಡೆಯುತ್ತಾರೆ. ನೀವು ಕೇಳಿರುವ 1,750 ಕೋಟಿ ರೂಪಾಯಿಗಳನ್ನು ಅವರು ಕೊಡುತ್ತಾರೋ, ಬಿಡುತ್ತರೋ, ಆದರೆ ನಾವು ಕೊನೆಗೆ ಹೋರಾಟ ಮಾಡಿ ಅದನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ತಮಿಳನಾಡಿಗೆ ಕೊಟ್ಟಾಗ ಅವರು ನಮಗೂ ಕೊಡಲೇಬೇಕಾಗುತ್ತದೆ. ಇವತ್ತು ನಾವು ಆ ಕಾರ್ಯಕ್ರಮವನ್ನು ಹೆಚ್ಚಿನ ಮಟ್ಟದಲ್ಲಿ ಅನುಷ್ಠಾನಕ್ಕೆ ತಂದಿದ್ದರೆ ನಮ್ಮ ರೈತರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಆರ್ಥಿಕ ನೆರವನ್ನು ಕೊಡಲಿಕ್ಕೆ ಏನು ಅವಕಾಶವಿತ್ತು, ಆ ಅವಕಾಶವನ್ನು ನೀವು ಕಳೆದುಕೊಂಡಿರಿ ಎನ್ನುವುದನ್ನು ಈ ಸದನದ ಮುಂದೆ ಹೇಳಲಿಕ್ಕೆ ಬಯಸುತಿದ್ದೇನೆ.

ಇನ್ನು, ಅವರು ಹೇಳಿದ್ದಾರೆ, ರಸಗೊಬ್ಬರ ಕೊರತೆಯಿಂದ ಈ ರಾಜ್ಯದಲ್ಲಿ ರೈತರು ಪಡುತ್ತಿರತಕ್ಕಂಥ ತೊಂದರೆಗಳೇನಿವೆ ಅವಯವಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಮುಂದಿನ ದಿನಗಳಲ್ಲಿ chemical manure ಅನ್ನು ಹಾಕುವುದಕ್ಕಿಂತ ಹೆಚ್ಚಾಗಿ ಸಾವಯವ ಗೊಬ್ಬರವನ್ನು ರೈತರು ಉತ್ಪಾದನೆ ಮಾಡುವುದಕ್ಕೆ ಹೆಚ್ಚಿನ ನೆರವನ್ನು ಕೊಡುತ್ತೇವೆ, ಅವರಿಗೆ ಪ್ರೋತ್ಸಾಹ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಒಂದು ಸಾವಿರ ಗ್ರಾಮಗಳನ್ನು ಆಯ್ಕೆ ಮಾಡಿ ತಲಾ ಎರಡು ಸಾವಿರ ರೂಪಾಯಿಗಳನ್ನು ಮೊದಲನೇ ಹಂತದಲ್ಲಿ ಕೊಡತಕ್ಕಂಥ ಕಾರ್ಯಕ್ರಮವನ್ನು ತರುತ್ತೇವೆ ಎಂದು ಹೇಳಿದ್ದಾರೆ. ನಾನು ಮುಖ್ಯಮಂತ್ರಿಗಳನ್ನು ಕೇಳಲಿಕ್ಕೆ ಬಯಸುತ್ತೇನೆ, ಯಾವ ಆಧಾರದ ಮೇಲೆ ಈ ಎರಡು ಸಾವಿರ ರೂಪಾಯಿಗಳನ್ನು ಹಂಚುತ್ತಾರೆ? ಇದಕ್ಕೇನಾದರೂ ಅಳತೆಗೋಲನ್ನು ಇಟ್ಟಿರುವಿರಾ? ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರತಕ್ಕಂಥಾದ್ದಕ್ಕೆ ಕೇವಲ 100 ಕೋಟಿ ಹಣವನ್ನು ಇಟ್ಟಿದ್ದೀರಿ. ರೈತರಿಗೆ ಭಾರಿ ಭೂರಿ ಭೋಜನ ಕೊಟ್ಟಿದ್ದಾರೆ ಎಂದು ಒಂದು ಪತ್ರಿಕಾ ಮಾಧ್ಯಮದಲ್ಲಿ ಬಂದಿದೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇ ಪತ್ರಿಕೆಯಲ್ಲಿ ಹೇಳುತ್ತಾರೆ, ಸಾವಯವ ಕೃಷಿಯನ್ನು ಮಾಡತಕ್ಕಂಥ, ಪರಿಣಿತಿಯನ್ನು ಪಡೆದಿರತಕ್ಕಂಥ ಒಬ್ಬರು ಹೇಳುತ್ತಾರೆ, "ನೂರು ಕೋಟಿ ಯಾವ ಮೂಲೆಗೆ..." ಎಂದೆಲ್ಲಾ ಹೇಳಿದ್ದಾರೆ. ಅದನ್ನೆಲ್ಲಾ ನಾನು ಇಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಅವರು ಒಂದು ಮಾತನ್ನು ಹೇಳುತ್ತಾರೆ,"..... ಒಟ್ಟಾರೆ ಪ್ರಸಕ್ತ ಸಾಲಿನ ರಾಜ್ಯ ಆಯವ್ಯಯದಲ್ಲಿ ಕೃಷಿಗೆ ಸಿಂಹಪಾಲು ಸಿಕ್ಕರೂ ಸಾವಯವ ಕೃಷಿ ಅನುಷ್ಠಾನಕ್ಕೆ ಸರ್ಕಾರ ಅಷ್ಟಾಗಿ ಒತ್ತು ಕೊಡದಿರುವುದು ರಾಜ್ಯ ಸಾವಯವ ಕೃಷಿಕರಲ್ಲಿ ಅಸಮಾಧಾನ ತಂದಿದೆ" ಎನ್ನುವ ಮಾತನ್ನು ಹೇಳಿದ್ದಾರೆ. ಇದರಲ್ಲಿ ಮಧ್ಯವರ್ತಿಗಳ ಪಾಲು ಏನಿದೆ ಎನ್ನುವುದರ ಬಗ್ಗೆ ಬಹಳ ಚರ್ಚೆ ಮಾಡಿದ್ದಾರೆ. ನಾನು ಅದನ್ನೆಲ್ಲಾ ಸುದೀರ್ಘವಾಗಿ ಓದಲಿಕ್ಕೆ ಹೋಗಿ ಸದನದ ಸಮಯವನ್ನು ವ್ಯರ್ಥ ಮಾಡಲಿಕ್ಕೆ ಬಯಸುವುದಿಲ್ಲ. ಸಾವಯವ ಗೊಬ್ಬರಕ್ಕೆ ರೈತರಿಗೆ ಪ್ರೋತ್ಸಾಹವನ್ನು ಕೊಡತಕ್ಕಂಥಾದ್ದಕ್ಕೆ 100 ಕೋಟಿ ರೂಪಾಯಿಗಳನ್ನಿಟ್ಟಿದ್ದು, ರೈತರಿಗೆ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತೀರಿ. ಈ ಹಣವನ್ನು ರೈತ ಯಾವ ರೀತಿ ಪಡೆಯುತ್ತಾನೆ? ಅವನಿಗೆ ಚೆಕ್ ಮುಖಾಂತರ ಕೊಡುವಿರಾ? ಇಲ್ಲವೆಂದರೆ, ಯಾರನ್ನು ಕಳುಹಿಸಿ ಆ ಹಣವನ್ನು distribute ಮಾಡುತ್ತೀರಿ? ಮುಂದಿನ 2–3 ತಿಂಗಳಲ್ಲಿ ಈ ಹಣವನ್ನು ಕೊಡಲು ಏನು ವ್ಯವಸ್ಥೆ ಮಾಡುತ್ತೀರಿ, 2–3 ತಿಂಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಿಕ್ಕೆ ನಿಮ್ಮ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಏನು ಸಿದ್ಧತೆ ನಡೆಸಿದ್ದೀರಿ ಎನ್ನುವುದನ್ನು ಸದನದ ಗಮನಕ್ಕೆ ತರಬೇಕು ಎನ್ನುವುದು ನನ್ನ ಅಭಿಪ್ರಾಯ. ಅದರ ಜೊತೆಗೆ, 500

ಕೋಟಿ ರೂಪಾಯಿಗಳನ್ನು ಇಟ್ಟಿದ್ದು, ಒಂದು ಕುಟುಂಬಕ್ಕೆ ಒಂದು ಸಾವಿರ ರೂಪಾಯಿನಂತೆ 50 ಲಕ್ಷ ಕುಟುಂಬಗಳಿಗೆ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ಒಂದು ಸಾವಿರ ರೂಪಾಯಿಗಳನ್ನು ನೀವು ಚೆಕ್ ಮುಖಾಂತರ ಕೊಡಲಿಕ್ಕೆ ಹೋಗುತ್ತೀರಿ. ಅವನು ಅ ಚೆಕ್ ಅನ್ನು realize ಮಾಡಿಕೊಳ್ಳಲು 500 ರೂಪಾಯಿಗಳನ್ನು ಬ್ಯಾಂಕಿನಲ್ಲಿ deposit ಇಡಬೇಕು. ಆ ಚೆಕ್‌ಅನ್ನು ಪಡೆಯಲಿಕ್ಕೆ ಅವನು ಮಧ್ಯವರ್ತಿಗಳಿಗೆ ಎಷ್ಟು ಖರ್ಚು ಮಾಡಬೇಕೋ ಗೊತ್ತಿಲ್ಲ. ಅಂತಿಮವಾಗಿ ಅವನ ಕಿಸೆಗೆ ಬರತಕ್ಕಂಥ ಹಣ ಎಷ್ಟು? ಅದಕ್ಕೇ ಮೊದಲು ನಾನು ಹೇಳಿದ್ದು, ಜನಪ್ರಿಯ ಕಾರ್ಯಕ್ರಮಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ನೀವು ರೈತರಿಗೆ ಶಾಶ್ವತವಾದ ಕಾರ್ಯಕ್ರಮಗಳನ್ನು ಕೊಡುವುದಕ್ಕಿಂತ ಹೆಚ್ಚಾಗಿ ತಾತ್ಕಾಲಿಕವಾಗಿ ರೈತರನ್ನು ಖುಷಿ ಪಡಿಸಿ, ಮುಂದೆ ಬರತಕ್ಕಂಥ ಚುನಾವಣೆಗೆ ಅಧಿಕೃತವಾಗಿ ನಿಮ್ಮ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲವನ್ನು ಗಳಿಸಲಿಕ್ಕೆ ಸರ್ಕಾರದಿಂದಲೇ ಹಣವನ್ನು ಬಿಡುಗಡೆ ಮಾಡತಕ್ಕಂಥ ಕೆಲಸಕ್ಕೆ ಇವತ್ತು ನೀವು ಕೈ ಹಾಕಿದ್ದೀರೇನೋ ಎಂದು ಅನುಮಾನ ಪಡುತ್ತಾರೆ ಎನ್ನತಕ್ಕಂಥಾದ್ದನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ.

ಅದರ ಜೊತೆಗೆ, ಕೃಷಿ ಮಿಷನ್‌ಅನ್ನು ಹೊಸದಾಗಿ ಪ್ರಾರಂಭ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದಕ್ಕಿಂತ ಮುಂಚೆ ಮತ್ತೊಂದು ವಿಷಯವನ್ನು ಹೇಳಬೇಕಾಗಿದೆ. ಹಾಲನ್ನು ಉತ್ಪಾದನೆ ಮಾಡತಕ್ಕಂಥ ಸಹಕಾರಿ ಕ್ಷೇತ್ರದ ಹಾಲು ಉತ್ಪಾದಕರ ಸಂಘಗಳಿಗೆ ನೇರವಾಗಿ ಪ್ರತಿ ಲೀಟರ್‌ಗೆ ಎರಡು ರೂಪಾಯಿಗಳನ್ನು ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಬಹಳ ಸಂತೋಷ. ಒಳ್ಳೆಯ ನಿರ್ಧಾರವನ್ನು ಮಾಡಿದ್ದಾರೆ, ಅದಕ್ಕಾಗಿ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ರೇವಣ್ಣನವರೂ ಅಭಿನಂದನೆ ಸಲ್ಲಿಸುತ್ತಿದ್ದುದನ್ನು ನೋಡಿದೆ. ಆದರೆ ಅವರು ಮತ್ತೂ ಮುಂದುವರೆಯಲಿಲ್ಲ. ಅವರ K.M.F.ಬಹಳ ಸಧೃಡವಾಗಿರಬಹುದು, ಸಂಪದ್ಭರಿತವಾಗಿರಬಹುದು ಎಂದು ನಾನು ಅಂದುಕೊಂಡೆ. ಪ್ರತಿ ಲೀಟರ್‌ಗೆ ಎರಡು ರೂಪಾಯಿ ಪ್ರೋತ್ಸಾಹಧನವನ್ನು ಕೊಡತಕ್ಕಂಥ ನಿರ್ಧಾರವನ್ನು ಸರ್ಕಾರದವರು ಮಾಡಿದ್ದಾರೆ. ಇವತ್ತು K.M.F. ನ 13 ಜಿಲ್ಲಾ ಘಟಕಗಳಲ್ಲಿ ಈಗಾಗಲೇ 33–35 ಲಕ್ಷ ಲೀಟರ್ ಹಾಲು ಬರುತ್ತಿದ್ದು, ಅದರಲ್ಲಿ ಆರು ಲಕ್ಷ ಲೀಟರ್ ಹಾಲನ್ನು ಮಾರಲಿಕ್ಕಾಗದೇ. ಪೌಡರ್ ಮಾಡುತ್ತಿರಬಹುದು. ಈಗ, ಈ ಒಂದು ರೀತಿಯ ಪ್ರೋತ್ಸಾಹವನ್ನು ಕೊಡುವುದರಿಂದ ಇನ್ನೂ ಕನಿಷ್ಟ 5–6 ಲಕ್ಷ ಲೀಟರ್ ಹಾಲು ಹೆಚ್ಚಿಗೆ ಉತ್ಪತ್ತಿಯಾದಾಗ K.M.F. ಮೇಲೆ ಬರ್ಡನ್ ಬೀಳುತ್ತದೆ. ಹಾಲನ್ನು ಶೇಖರಣೆ ಮಾಡುವುದಕ್ಕೆ ಹೊಸದಾಗಿ ಕ್ಯಾನ್‌ಗಳನ್ನು purchase ಮಾಡತಕ್ಕಂಥಾದ್ದು ಇರಬಹುದು, ಹೆಚ್ಚುವರಿ ಹಾಲನ್ನು ಸಾಗಾಣಿಕೆ ಮಾಡಲು ತಗುಲತಕ್ಕಂಥ ವೆಚ್ಚ

ಇರಬಹುಹದು ಮತ್ತು ಆ ಹಾಲನ್ನು ಪೌಡರ್ ಮಾಡಲು ಬೇಕಾದಂಥ ವ್ಯವಸ್ಥೆಗಳಿರಬಹುದು, ಇವುಗಳಿಗೆ K.M.F. ಹೆಚ್ಚಿನ ವೆಚ್ಚ ಮಾಡಬೇಕಾಗುತ್ತದೆ. ಇವತ್ತು ಸರ್ಕಾರ 2 ರೂಪಾಯಿ ಪ್ರೋತ್ಸಾಹ ಧನವನ್ನು ಕೊಟ್ಟರೂ, ಸಹಕಾರಿ ರಂಗದಲ್ಲಿರುವ K.M.F.ನವರು ಸುಮಾರು ಹತ್ತು-ಹ್ತೂವರೆ ರೂಪಾಯಿಯನ್ನು ಹೆಚ್ಚಿನ ಹಾಲನ್ನು ಉತ್ಪಾದನೆ ಮಾಡತಕ್ಕಂಥವರಿಗೆ ಮತ್ತು ಈಗಿರತಕ್ಕಂಥ ಸದಸ್ಯರಿಗೆ ಭರಿಸಬೇಕಾಗುತ್ತದೆ. ಇದನ್ನೆಲ್ಲಾ ನೋಡಿದಾಗ, ಈ K.M.F.ಮುಂದಿನ ದಿನಗಳಲ್ಲಿ ಯಳಿಯಲು ಅವಕಾಶ ಇದೆಯೋ, ಇಲ್ಲವೂ ಎನ್ನುವುದನ್ನು K.M.F.ಅಧ್ಯಕ್ಷರೇ ಹೇಳಬೇಕು. ನನಗೆ ಅದರ ಬಗ್ಗೆ ಹೆಚ್ಚಿನ ಅನುಭವ ಇಲ್ಲ. ಅವರೇ ಇದಕ್ಕೆ ಸ್ಪಷ್ಟೀಕರಣ ಕೊಡಬೇಕಾಗಿದೆ. ಆದರೆ, ಇರತಕ್ಕಂಥ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ.

ಅದರ ಜೊತೆಗೆ, ಇವತ್ತು 36 ಸಾವಿರ ಕೆರೆಗಳ ಜೀರ್ಣೋದ್ಧಾರ ಮಾಡುವುದನ್ನೆಲ್ಲಾ ಹೇಳಿದ್ದಾರೆ. ಆದರೆ ಅದಕ್ಕೆ ಹಣವನ್ನು ಎಲ್ಲಿಯೂ ತೋರಿಸಿಲ್ಲ. ಶಾಶ್ವತವಾದ ಕಾರ್ಯಕ್ರಮ ತರಲಿಕ್ಕೆ committee ಯನ್ನು ರಚಿಸುತ್ತೇನೆಂದು ಹೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಲಿಕ್ಕೆ ಬಯಸುತ್ತೇನೆ, 1995-96ನೇ ಇಸವಿಯಲ್ಲಿ ದಿವಂಗತ ಬೈರೇಗೌಡರು ಕೃಷಿ ಇಲಾಖಾ ಸಚಿವರಾಗಿದ್ದಾಗ ಮಾನ್ಯ ಸಿದ್ಧರಾಮಯ್ಯನವರು ಹಣಕಾಸು ಸಚಿವರಾಗಿದ್ದಾಗ, ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಕೃಷಿ ನೀತಿಯೊಂದನ್ನು ಜಾರಿಗೆ ತಂದರು. ಮಾನ್ಯ ಮುಖ್ಯಮಂತ್ರಿಯವರೆ, ನಾವು ನೀವೇ ಸೇರಿ ಸಮ್ಮಿಶ್ರ ಸರ್ಕಾರ ನಡೆಸುವಾಗ 2006ರಲ್ಲಿ ಕೃಷಿ ನೀತಿ ಏನು ಜಾರಿಗೆ ತಂದಿದ್ದೇವೆ, ಅದರ ಜೊತೆಗೆ ನಮ್ಮ ಸಮ್ಮಿಶ್ರ ಸರ್ಕಾರವೇ ಇದ್ದಾಗ ಬೆಂಗಳೂರು ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬೆಳಗ್ಗೆಯಿಂದ ಸಾಯಂಕಾಲದವರೆಗೆ ನಡೆದ ರೈತರ ಸಂವಾದ ಕಾರ್ಯಕ್ರಮ ನಡೆಸಿ ನಂತರ ಕೃಷಿಗೆ ಸಂಬಂಧಪಟ್ಟಂತೆ ಪರಿಣಿತರು ಮತು ಸರ್ಕಾರದ ಪ್ರಮುಖ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳ ಒಂದು ಕಮಿಟಿಯನ್ನು ರಚಿಸಿ ವರದಿ ಕೊಡಿ ಎಂದು ಏನು ಹೇಳಿದೆವು, ರಾಜ್ಯಪಾಲರ ಆಡಳಿತದಲ್ಲಿಯೇ ಆ ಕಮಿಟಿ ವರದಿ ಕೊಟ್ಟಿದೆ. ಬಹುಶಃ ಈ ರೈತರಿಗೆ ಏನಾದರೂ ಒಳ್ಳೆಯದು ಮಾಡಬೇಕೆನ್ನುವ ಭಾವನೆ, ಬದ್ಧತೆ ಈ ಸರ್ಕಾರಕ್ಕಿದ್ದರೆ ಈ ಕೃಷಿ ಮಿಷನ್ನಿನ ಅವಶ್ಯಕತೆ ಸದ್ಯಕ್ಕೆ ಇಲ್ಲ ಎಂದು ಹೇಳಲಿಕ್ಕೆ ಬಯಸುತ್ತೇನೆ. ಹಿಂದಿನ ಸಂದರ್ಭದಲ್ಲಿ ಮಾನ್ಯ ಬೈರೇಗೌಡರು ಕೃಷಿ ಇಲಾಖೆಯ ಸಚಿವರಾಗಿ ಕೆಲಸ ಮಾಡುತ್ತಿದ್ದಾಗ ಕೇಂದ್ರದ ಕೃಷಿ ಸಚಿವರಾಗಿದ್ದ ಬಲರಾಂ ಜ್ಞಖಡ್‌ರವರು ಹಾಗೂ ದೇಶದ ಹಲವಾರು ಪ್ರಮುಖ ಪತ್ರಿಕೆಗಳು ಆ ಕೃಷಿ ನೀತಿಯ ಬಗ್ಗೆ ಮೆಚ್ಚುಗೆಯನ್ನು

ವ್ಯಕ್ತಪಡಿಸಿ, ದೇಶದಲ್ಲಿಯೇ ಮೊದಲನೇ ಬಾರಿಗೆ ಈ ರೀತಿಯ ಕೃಷಿ ನೀತಿಯನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ ಎಂಬ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ. Sri. Balram Jakhad who was the Agriculture Minister, Government of India, he himself has complimented the agricultural policy formulated by the Government of Karnataka. ಇದೆಲ್ಲ ನಮ್ಮ ರಾಜ್ಯದಲ್ಲಿ ಹಿಂದಿನ ಸರ್ಕಾರಗಳೆಲ್ಲಾ. ಈ ಕೃಷಿ ಕ್ಷೇತ್ರಕ್ಕೆ ಯಾವ ರೀತಿಯ ಕಾರ್ಯಕ್ರಮಗಳನ್ನು ಕೊಡಬೇಕೆನ್ನುವ ಬಗ್ಗೆ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಪ್ರಯತ್ನ ಪಟ್ಟಿವೆ. ಅದರ ಕಡೆಗೆ ಗಮನಹರಿಸಿದರೆ ಸಾಕು. ಹೊಸದಾಗಿ ಮತ್ತೊಂದು ಕೃಷಿ ಮಿಷನ್ ತರುವುದು ಅನಾವಶ್ಯಕ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಆ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಗಳು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. 1995–96 ರಲ್ಲಿ Floriculture and Sericulture have registered an increased growth of 22% Horticulture and Floriculture by 25% up to January 1996 ಆ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಕೃಷಿ ಇಲಾಖೆಗೆ ಯಾವ ರೀತಿಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕೆನ್ನುವ ಬಗ್ಗೆ positive decisions ಏನು ತೆಗೆದುಕೊಂಡರು, ಸರ್ಕಾರಕ್ಕೆ ನಿಜಕ್ಕೂ ರೈತರ ಬಗ್ಗೆ ಕಾಳಜಿ ಇದ್ದರೆ ಇವತ್ತು ಅದರ ಬಗ್ಗೆ ಗಮನ ಹರಿಸಿದರೆ ಸಾಕೆನ್ನುವುದು ನನ್ನ ಅಭಿಪ್ರಾಯವಾಗಿ. ಅದರ ನಂತರ, Karnataka Agriculture Produce, Processing and Export Corporation ಅನ್ನು ಆವತ್ತೇನು ಪ್ರಾರಂಭ ಮಾಡಿದರು, ಆ ಸರ್ಕಾರದಲ್ಲಿಯೇ ನಮ್ಮ ರಾಜ್ಯದಲ್ಲಿಯೇ ಬೆಳೆದಂಥ ಹೂ.ಹಣ್ಣು, ಅಷ್ಟೇ ಅಲ್ಲ, ಬೇರೆ ಬೇರೆ ಎಲ್ಲಾ ಪದಾರ್ಥಗಳನ್ನು ವಿದೇಶಿ ಮಾರುಕಟ್ಟೆಗೆ ನಾವೇ ಅದರ ಜವಾಬ್ದಾರಿಯನ್ನು ತೆಗೆದುಕೊಂಡು ಕೆಲಸ ಮಾಡಬೇಕೆಂದು ಅಂದರೆ ಅದನ್ನು ಮಾರುವುದಕ್ಕೆ ರಫ್ತು ಮಾಡುವುದಕ್ಕೆ ನಿಗಮ ಸ್ಥಾಪಿಸಿ ಆವತ್ತು ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. 1995–96 ರಲ್ಲಿಯೇ ದೇವನಹಳ್ಳಿ ಹತ್ತಿರ Airport ನಿರ್ಮಿಸಬೇಕೆಂಬ ನಿರ್ಧಾರ, ತೀರ್ಮಾನ ಮಾಡಿದ ಸಂದರ್ಭದಲ್ಲಿಯೇ 100 ಎಕರೆ ಭೂಮಿಯನ್ನು Agriculture Department ಗೆ ತೆಗೆದುಕೊಳ್ಳಲು ನಿರ್ಧಾರ ಮಾಡಿ 100 ಎಕರೆ ಭೂಮಿಯನ್ನು ವಶಪಡಿಸಿಕೊಂಡು ಅಲ್ಲಿ ಸರ್ಕಾರದ ಸ್ವಾಮ್ಯದಿಂದ ಈ ಒಂದು ಸಂಸ್ಥೆಯ ಆಶ್ರಯದಲ್ಲಿ cold storage, grinding, packing, ರೈತ ಏನೆಲ್ಲ ಪದಾರ್ಥಗಳನ್ನು ತರುತ್ತಾನೆ, ಅವುಗಳನ್ನು ಸ್ವತಃ ನಾವು ಆ ಸಂಸ್ಥೆಯ ಮುಖೇನ ಹೊರದೇಶಗಳಿಗೆ ಕಳುಹಿಸುವ ವ್ಯವಸ್ಥೆ ಮಾಡಬೇಕೆನ್ನುವ ದೃಷ್ಟಿಯಿಂದಲೇ International Airport ಬರುವುದೇನಿದೆ ಅಲ್ಲಿ ಮಾಡಬೇಕೆಂದು

ಆಗಲೇ ನಿರ್ಣಯ ಮಾಡಿದ್ದಾರೆ. ಆಮೇಲೆ 1995-96ರಲ್ಲಿ ಮಾನ್ಯ ಸಿದ್ದರಾಮಯ್ಯನವರು ಬಜೆಟ್ ಅನ್ನು ಮಂಡನೆ ಮಾಡಿದರು, ಅದರಲ್ಲಿ agriculture ಗೆ ಸಂಬಂಧಪಟ್ಟ ಹಾಗೆ ಹಲವಾರು ವಿಷಯಗಳಿವೆ. ನಾನು agriculture ಗೆ ಸಂಬಂಧಪಟ್ಟ ಹಾಗೆ ಇಷ್ಟಕ್ಕೇ ಸೀಮಿತ ಮಾಡುತ್ತೇನೆ. ಅವರು ಪಶುಸಂಗೋಪನಾ ಇಲಾಖೆಗೆ ಏನು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕೆಲವು ಕಾರ್ಯಕ್ರಮ ಹಮ್ಮಿಕೊಂಡರು, ಹಣದ ಕೊರತೆಯಿಂದ ಆವತ್ತು ಹಣ ಕೊಡುವ ನಿರ್ಧಾರ ಮಾಡಿದ್ದು, ಅವೆಲ್ಲ ವಿಧಾನಸಭಾ ಕಲಾಪದ ದಾಖಲಾತಿಯಲ್ಲಿದೆ. ಅದನ್ನೆಲ್ಲ ನಾನು ಸುದೀರ್ಘವಾಗಿ ಓದುವುದಕ್ಕೆ ಹೋಗಿ ನಾನು ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಬಯಸುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತು ಹೇಳುತ್ತಿದ್ದರು, ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದರೆ ಹಳ್ಳಿಗಳಿಂದ ನಗರ ಪ್ರದೇಶಗಳಿಗೆ ಬರುವ ಜನರಿಗೆ ಅವಕಾಶಗಳನ್ನು ಕೊಡದೆ, ಹಳ್ಳಿಯವರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಅಂದು ಲಾಲ್ ಬಹದ್ದೂರ್ ಶಾಸ್ತ್ರಿಯವರೇ ಬೆಂಗಳೂರು ಡೈರಿಯನ್ನು ಪ್ರಾರಂಭಿಸಲು ಬಂದ ಸಂದರ್ಭದಲ್ಲಿ ಆ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಾ "ಈ ದೇಶದಲ್ಲಿ ರೈತ ಬದುಕಬೇಕಿದ್ದರೆ ಅವನನ್ನು ನಗರ ಪ್ರದೇಶಕ್ಕೆ ಕರೆದುಕೊಂಡು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ಅವನಿಗೆ ಪರ್ಯಾಯವಾದಂಥ ಒಂದು ವೃತ್ತಿಯನ್ನು ರೂಪಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಹಳ್ಳಿಯಲ್ಲಿಯೇ ಅವನಿಗೆ ಶಕ್ತಿಯನ್ನು ಕೊಡುವ ಉಪ ಕಸುಬು ಮಾಡಬೇಕಾಗಿದ್ದರೆ ಅಕದಕೆ ಎಲ್ಲಾ ರೀತಿಯ ಸೌಕರ್ಯಗಳನ್ನು ಕೊಡಬೇಕು" ಎಂದು ಹೇಳಿದ್ದಾರೆ. ಅಂದಿನ ಸರ್ಕಾರದಲ್ಲಿಯೇ ಹಸುಗಳನ್ನು ಸಾಕುವುದಕ್ಕೆ ಪರಿಶಿಷ್ಟ ಜಾತಿ/ವರ್ಗಗಳಿಗೆ ಇರಬಹುದು, ಹಿಂದುಳಿದ ವರ್ಗಗಳಿಗೆ ಇರಬಹುದು, ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಸದನ 1995-96ರಲ್ಲಿ 40 ಕೋಟಿ ರೂಪಾಯಿ ಇಟ್ಟು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದರು. ಅದಾದ ನಂತರ ಯಾವ್ಯಾವ ರೀತಿಯಾಗಿದೆ, ಅದರ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಈಗಾಗಲೇ ನಮ್ಮ ರಾಜ್ಯದಲ್ಲಿ ಕೃಷಿ ನೀತಿಗೆ ಸಂಬಂಧಪಟ್ಟ ಹಾಗೆ ಹಿಂದಿನ ಹಲವಾರು ಸರ್ಕಾರಗಳು ಯಶಸ್ವಿಯಾಗಿ ಕಾರ್ಯಕ್ರಗಳನ್ನು ಕೈಗೊಳ್ಳಲು ಪ್ರಯತ್ನವನ್ನೇನು ಪಟ್ಟಿವೆ, ಆ ಕೆಲಸಗಳು ಅಲ್ಲಲ್ಲಿಗೇ ನಿಂತಿವೆ. ಆ ದೃಷ್ಟಿಯಿಂದಲೇ ನಾನು ಹೇಳಿದೆ, ಯಾವ್ಯಾವ ಇಲಾಖೆಗೆ ಶೇಕಡವಾರು ಹಣ ಕೊಡಲಾಗಿದೆ, ಇದರ ಬಗ್ಗೆ ಚರ್ಚೆಗಿಂತ ಹೆಚ್ಚಾಗಿ ಎಷ್ಟು ಸಮರ್ಥಕವಾಗಿ ಕೆಲಸ ನಿರ್ವಹಿಸುವುದಕ್ಕೆ ಸರ್ಕಾರಗಳು ಕೆಲಸ ಮಾಡಿವೆ ಎನ್ನುವುದು ಪ್ರಮುಖವಾಗಿರುವ ಅಂಶ ಎನ್ನುವುದನ್ನು ನಾನು ಈ ಸದನ ಗಮನಕ್ಕೆ

ತರಲಿಕ್ಕೆ ಬಯಸುತ್ತೇನೆ. ಇನ್ನು ರಸಗೊಬ್ಬರದ ವಿಷಯದಲ್ಲಿ ಸರ್ಕಾರ ಇನ್ನೂ ರೈತರ ಜೊತೆ ಚೆಲ್ಲಾಟವಾಡುತ್ತಿದೆ ಎನ್ನುವುದು ನನ್ನ ಭಾವನೆ. ಕೇಂದ್ರ ಸರ್ಕಾರದ ಮೇಲೆ ಬೆರಳು ತೋರಿಸಿ, ಕೇಂದ್ರ ಸರ್ಕಾರ ಕೊಡಲಿಲ್ಲ ಏನು ಮಾಡುವುದು ಎನ್ನುವುದಕ್ಕಿಂತ ಹೆಚ್ಚಾಗಿ, ಮೊನ್ನೆ ಸದನದಲ್ಲಿ ಮಾನ್ಯ ಖರ್ಗೆಯವರು ಮತ್ತು ಹಲವಾರು ಸದಸ್ಯರು ಪ್ರಸ್ತಾಪಿಸಿದರು. ನಿನ್ನೆ ಮೈಸೂರು ರಸ್ತೆಯಲ್ಲಿ ಸುಮಾರು ಆರೇಳು ಗಂಟೆಗಳ ಕಾಲ ರಸ್ತೆ ತಡೆ ಮಾಡಿದ ಘಟನೆ ಏನಿದೆ, ನಾನು ಮುಖ್ಯಮಂತ್ರಿಯವರಿಗೆ ಈಗಲೂ ಮನವಿ ಮಾಡುತ್ತೇನೆ, ಇವತ್ತು ನಿಮಗೆ ರೈತರ ಬಗ್ಗೆ ಕಾಳಜಿ ಇದ್ದರೆ, ನೀವು ಕೇವಲ ವಿರೋಧ ಪಕ್ಷಗಳ ಕಡೆ ಬೆರಳು ತೋರಿಸಿ, ನಾನು 500 ಕೋಟಿ ರೂ.ಗಳ draft ಅನ್ನು ಈಗಲೇ ಕೊಡಲು ತಯಾರಿದ್ದೇನೆ, 250 ಕೋಟಿ ರೂ.ಗಳ draft ಅನ್ನು ಈಗಲೇ ಕೊಡಲು ತಯಾರಿದ್ದೇನೆ, ಈ ಮಾತನ್ನು ಹೇಳುವುದಕ್ಕಿಂತ ಹೆಚ್ಚಾಗಿ ಈಗಾಗಗಲೇ official ಆಗಿಯೇ ಮುಖ್ಯಮಂತ್ರಿಯವರಿಗೆ ಜೂನ್ 21ನೇ ತಾರೀಖಿನಂದು Marketing Federationನಿಂದ ಪತ್ರ ಬರೆದಿದ್ದಾರೆ. ಪತ್ರ ಬರೆದು ನಮಗೆ ತಾತ್ಕಾಲಿಕವಾಗಿ 17 ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಿ, ನಾವು ತಕ್ಷಣ ಗೊಬ್ಬರಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿ ಒಂದು ತಿಂಗಳಾದರೂ ಈ ಸರ್ಕಾರ ಅದರ ಬಗ್ಗೆ ಗಮನ ಹರಿಸಲಿಲ್ಲ. 250 ಕೋಟಿ, 500 ಕೋಟಿ ರೂ.ಗಳನ್ನು ಕೊಡುವುದಿರಲಿ, ಅವರೇನು 17 ಕೋಟಿ ರೂಪಾಯಿಗಳನ್ನು ಕೇಳಿದರು, ಅದನ್ನು ಕೊಡದಿರುವ ಬಗ್ಗೆ ಏನಿದೆ, ಮೊನ್ನೆ ಏನು ಚರ್ಚೆಯಾಗಿದೆ, ಈಗಲಾದರೂ ಗೊಬ್ಬರವನ್ನು ಕೊಡುವುದಕ್ಕೆ ಯೋಚನೆ ಮಾಡಿ. ಏಕೆಂದರೆ, ಈಗಾಗಲೇ ಬರಗಾಲವೆಂದೇನು ನಾವು ಹೇಳುತ್ತಿದ್ದೆವು, ಕೆಲವು ಭಾಗಗಳಲ್ಲಿ ದೈವ ಕೃಪೆಯಿಂದಲೋ, ಮತ್ತೊಂದು ಕೃಪೆಯಿಂದಲೋ, ಹವಾಗುಣದಲ್ಲಿ ಪ್ರಕೃತಿಯ ಸಹಕಾರದಿಂದ ಮಳೆ ಪ್ರಾರಂಭವಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಗೆ ಹಣ ಕೊಡುತ್ತೇವೆ, ಕರೆದು ಮಾತನಾಡುತ್ತೇವೆಂದು ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟಿದ್ದರು. ಅದೇನಾಗಿದೆ? ಏಕೆಂದರೆ, ನಮ್ಮ ರಾಮನಗರ ಜಿಲ್ಲೆಯಲ್ಲಿ ಪ್ರತಿನಿತ್ಯ, ಇವತ್ತೂ ಕೂಡ ರೈತರು ಗಲಾಟೆ ಮಾಡುತ್ತಿದ್ದಾರೆ. ಆದ್ದರಿಂದ, ದಯಮಾಡಿ, ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟನೆ ಕೊಟ್ಟರೆ ಒಳ್ಳೆಯದು. ಅವರನ್ನೇನು ಕರೆದು ಮಾತನಾಡಿದ್ದೀರಾ? ಹಣ ಕೊಟ್ಟಿದ್ದಾರೆಯೇ? ಗೊಬ್ಬರ ಬರುತ್ತದೆಯೇ? ಅಥವಾ ಇಲ್ಲವೇ ಎನ್ನುವ ಬಗ್ಗೆ ಸ್ಪಷ್ಟನೆ ಕೊಟ್ಟರೆ, ರೈತರಿಗೆ ಒಂದು message ಹೋಗುತ್ತದೆ. ಇಲ್ಲದೇ ಹೋದರೆ, ಅಲ್ಲಿ ಅನಾಹುತವಾಗುವ

ಸಂದರ್ಭವಿರುವುದರಿಂದ ದಯಮಾಡಿ, ಮುಖ್ಯಮಂತ್ರಿಯವರು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಅವರಿಗೆ ಮನವಿ ಮಾಡುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಏಕೆಂದರೆ, ನಿನ್ನೆ ಏನು ಗಲಾಟೆ ನಡೆಯಿತು, ಮುಖ್ಯಮಂತ್ರಿಗಳು ಯಾವಾಗಲೂ ಇದು ವಿರೋಧ ಪಕ್ಷದ ಪಿತೂರಿ, ಯಾವುದೋ ಕಾಣದ ಕೈಗಳ ಪಿತೂರಿ, ನನ್ನ ಸರ್ಕಾರಕ್ಕೆ ಕೆಟ್ಟ ಹೆಸರು ತರಲಿಕ್ಕೆ ಈ ಪ್ರತಿಭಟನೆ ನಡೆಸುತ್ತಾರೆಂದು ಹೇಳುತ್ತಾರೆ. ನಾನು ನಿನ್ನೆ ವಿಧಾನಸಭೆಯಲ್ಲಿ ಇದ್ದೆ. ದೂರವಾಣಿ ಮುಖಾಂತರ ಅಲ್ಲಿಯ ಪೊಲೀಸ್ ಅಧಿಕಾರಿಗೆ ಮೈಕ್ ತೆಗೆದುಕೊಂಡು ಹೋಗಿ ಮುಂದೆ ಇಡು, ನಾನು ಮನವಿ ಮಾಡುತ್ತೇನೆ ಎಂದು ಹೇಳಿದೆ. ಬೆಳಗ್ಗೆ 9 ಗಂಟೆಯಿಂದ ಪ್ರಾರಂಭವಾಗಿ ಮಧ್ಯಾಹ್ನ 12-00 ಗಂಟೆ ಆದರೂ ರಸ್ತೆ ತಡೆ ಚಳುವಳಿ ನಡೆಯುತ್ತಿತ್ತು. ನಾನೇ ಖುದ್ದಾಗಿ ರೈತರಿಗೆ ಮನವಿ ಮಾಡಿ, ದಯವಿಟ್ಟು ಸಾರ್ವಜನಿಕರಿಗೆ ಅನಾನುಕೂಲ ಮಾಡಬೇಡಿ, ಗೊಬ್ಬರದ ವ್ಯವಸ್ಥೆಯನ್ನು ಏನಾದರೂ ಮಾಡಿ ಸಾಯಂಕಾಲದ ಒಳಗಡೆ ಸಂಬಂಧಪಟ್ಟ ಕೃಷಿ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆಂದು ಹೇಳಿ, ರಸ್ತೆ ಚಳುವಳಿ ಮಾಡುತ್ತಿದ್ದ ರೈತರಿಗೆ ನಿಲ್ಲಿಸುವುದಕ್ಕೆ ಮನವಿ ಮಾಡಿದೆ.

ಇಂಥ ವಿಷಯಗಳಲ್ಲಿ ಯಾವುದೇ ಕಾರಣಕ್ಕೂ ನಾವು ಸಣ್ಣತನಕ್ಕೊಳಗಾಗದೆ ಸಂಪೂರ್ಣವಾಗಿ ಸರ್ಕಾರಕ್ಕೆ ಸಹಕಾರ ಕೊಟ್ಟು ಕೆಲಸ ಮಾಡಲಿಕ್ಕೆ ಸಿದ್ಧರಿದ್ದೇವೆ. ಇದರ ಬಗ್ಗೆ ನೀವು ಪದೇ ಪದೇ ಪಿತೂರಿ ಎಂಬ ಪದವನ್ನು ಏನು ಬಳಸಿದ್ದೀರಿ ಅದನ್ನು ಬಳಸುವುದು ಬೇಡ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ silk ಬಗ್ಗೆ ಬಹಳ ಚರ್ಚೆ ಮಾಡಿದ್ದೀರಿ. Sericulture Department ಗೆ ಸಂಭಂಧಪಟ್ಟ ಹಾಗೆ 52 ಕೋಟಿ ರೂಪಾಯಿಗಳನ್ನು salary ಗಾಗಿ ಇಟ್ಟಿದ್ದೀರೋ, ಏನೋ ಗೊತ್ತಿಲ್ಲ. ಇವತ್ತು ರೈತರು ರೇಷ್ಮೆ ಬೆಳೆಯುವುದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತೇನೆಂದು ಹೇಳಿದ್ದೀರಿ. ಬಹುಶಃ ಆ ಹಣ ಇವತ್ತು ಯಾವುದಕ್ಕೂ ಸಾಲುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಂತರ, ವಿದ್ಯುತ್ ಇಲಾಖೆಗೆ ಸಂಬಂಧಪಟ್ಟ ಹಾಗೆ, 2,050 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದೀರಿ. ನಾವು ಕಳೆದ ವರ್ಷವೂ 2,050 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. 1800 + energy distribution ಗೆಂದು extra 350 ಕೋಟಿ ರೂಪಾಯಿಗಳು ಹೀಗೆ ಒಟ್ಟು 2,050 ಕೋಟಿ ರೂಪಾಯಿಗಳನ್ನು ಕಳೆದ ವರ್ಷದ ಬಜೆಟ್‌ನಲ್ಲಿ ಇಟ್ಟಿದ್ದೆವು. ಅದರಲ್ಲಿ ಈ ವರ್ಷ ನೀವು power sector ಗೆ 2,050 ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೆವು. ಇಲ್ಲಿ ಮಾತನಾಡುವಾಗ ಸದಸ್ಯರೆಲ್ಲ ಹೇಳಿದರು. ಉಚಿತವಾಗಿ ವಿದ್ಯುತ್

ಕೊಡುವ ಬಗ್ಗೆ ಕಳೆದ 20 ದಿವಸಗಳಲ್ಲಿ ನಮ್ಮ ಸರ್ಕಾರದಲ್ಲಿ ಯಾವ್ಯಾವ ಹೇಳಿಕೆ ಕೊಟ್ಟಿದ್ದೀರಿ ಎನ್ನುವುದನ್ನು ನೋಡಿ. ದಿವಸಕ್ಕೆ ಒಂದೊಂದು ಹೇಳಿಕೆ ಕೊಟ್ಟಿದ್ದೀರಿ. ಏಕೆಂದರೆ, ಯಾವುದೇ ಇಲಾಖೆಗೆ ಸಂಭಂಧಪಟ್ಟ ಹಾಗೆ ಸರ್ಕಾರದಲ್ಲಿ ನೀವು ಹೇಳಿಕೆಗಳನ್ನು ಕೊಟ್ಟಾಗ ಸಾರ್ವಜನಿಕರು ಯಾವ ರೀತಿ ದಿಕ್ಕು ತಪ್ಪುತ್ತಾರೆ, ಯಾವ ರೀತಿ ಅಭಿಪ್ರಾಯಗಳು ಬರುತ್ತವೆ ಎನ್ನುವುದನ್ನು ಇಲ್ಲಿಯವರೆಗೆ ನೀವು ಗಂಭೀರವಾಗಿಯೇ ತೆಗೆದುಕೊಳ್ಳಲಿಲ್ಲವೆಂಬುದು ನನ್ನ ಭಾವನೆ. ಮುಖ್ಯಮಂತ್ರಿಗಳು ಉಚಿತ ವಿದ್ಯುತ್ ಇಲ್ಲ ಎಂದು ಹೇಳುತ್ತಾರೆ. ಅದರ ಪಕ್ಕದಲ್ಲಿಯೇ ವಿದ್ಯುತ್ ಸಚಿವರು ಮಾತನಾಡುತ್ತಾ ಇಲ್ಲ, ಅದು ಏನೇ ಆಗಲಿ, ಆ ಕಾರ್ಯಕ್ರಮವಿದೆ, ಕೊಡುತ್ತೇವೆಂದು ಇನ್ನೊಂದು ಮಾತು ಹೇಳುತ್ತಾರೆ. ಹೀಗೆ ಪ್ರತಿನಿತ್ಯ ಒಂದೊಂದು ಹೇಳಿಕೆಗಳು ಬರುತ್ತವೆ. ಈ ರೀತಿ ಹೇಳಿಕೆಗಳನ್ನು ಕೊಡುವ ಮೂಲಕ ಎಲ್ಲರನ್ನೂ ದಿಕ್ಕು ತಪ್ಪಿಸುವ ಕೆಲಸವನ್ನು ಮಾಡಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ(ಇಂಧನ ಸಚಿವರು): ವಿಶೇಷವಾಗಿ ಕನ್ನಡಪ್ರಭ ದಿನಪತ್ರಿಕೆಯಲ್ಲಿ ಅದು ಬಂತು. ಮಾನ್ಯ ಮುಖ್ಯಮಂತ್ರಿಗಳು ಗ್ರಾಮೀಣ ಪ್ರದೇಶಗಳಿಗೆ ಎಲ್ಲದಕ್ಕೂ ಕೂಡ ಉಚಿತ ವಿದ್ಯುತ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ನಾನೂ ಕೂಡ ಅದನ್ನೇ ಹೇಳಿದ್ದೇನೆ. ಜೊತೆಗೆ ಅವರು 1 HP ಇಂದ 10 HP ವರೆಗೆ ಉಚಿತವಾಗಿ ವಿದ್ಯುತ್ ಕೊಡುವ ದಿಕ್ಕಿನಲ್ಲಿ ಚಿಂತನೆ ಮಾಡುತ್ತಿದ್ದೇವೆ ಎಂದು ಹೇಳಿದರು. ಇದರಲ್ಲಿ ಏನೂ confusion ಇಲ್ಲ. ಒಂದೇ ಹೇಳಿಕೆ. ಮುಖ್ಯಮಂತ್ರಿಗಳು ಹೇಳಿದ್ದು ಅದನ್ನೇ, ನಾನು ಹೇಳುತ್ತಿರುವುದೂ ಅದನ್ನೇ. ಗ್ರಾಮೀಣ ಪ್ರದೇಶಕ್ಕೆ domestic purpose ಗಾಗಲಿ, industrial purpose ಗಾಗಲಿ, commercial purpose ಗಾಗಲಿ ಉಚಿತವಾಗಿ ವಿದ್ಯುತ್ ಕೊಡುವುದಕ್ಕೆ ಸಾಧ್ಯವಿಲ್ಲ 1 HP – 10 HP ವರೆಗೆ ಉಚಿತವಾಗಿ ವಿದ್ಯುತ್ ಕೊಡುತ್ತೇವೆಂದು ಚುನಾವಣಾ ಪ್ರಣಾಳಿಕೆಯಲ್ಲೂ ಹೇಳಿದ್ದೇವೆ, ಬಜೆಟ್‌ನಲ್ಲೂ ತೀರ್ಮಾನ ಮಾಡಿ ಘೋಷಣೆ ಮಾಡಿದ್ದೇವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ವಿದ್ಯುತ್ ಅನ್ನು ದಿವಸಕ್ಕೆ ಎಷ್ಟು ಗಂಟೆ ಕೊಡುತ್ತಿದ್ದಾರೆ? ನನಗಿರುವ ಮಾಹಿತಿ ಪ್ರಕಾರ, 2 ಗಂಟೆಗಿಂತ ಹೆಚ್ಚು ಕೊಡುತ್ತಿಲ್ಲ. ನನಗೆ ರೈತರು ಕೊಟ್ಟಿರುವ ಮಾಹಿತಿ ಪ್ರಕಾರ ಮೊನ್ನೆ ನಾನು ಪಾಂಡವಪುರದ ಕೆಲವು ಹಳ್ಳಿಗಳಿಗೆ ಭೇಟಿ ಕೊಟ್ಟಿದ್ದಾಗ ಅಲ್ಲಿನ ರೈತರು 2 ಗಂಟೆಗಿಂತ ಹೆಚ್ಚು ಕಾಲ ವಿದ್ಯುತ್ ಬರುತ್ತಿಲ್ಲವೆಂದು ಹೇಳಿದರು. ಉಚಿತ ವಿದ್ಯುತ್ ಕೊಡುತ್ತೇವೆಂದೇನೋ ಘೋಷಣೆ ಮಾಡಿಬಿಟ್ಟಿರಿ. ಆದರೆ, ಪರಿಸ್ಥಿತಿ ಏನಿದೆ? ಕಾರ್ಗತ್ತಲು ಕಾದಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ದೇವರೇ ಕಾಪಾಡಬೇಕೆಂದು ನೀವೇ ಹೇಳುತ್ತೀರಿ. ನೀರು ಬರುತ್ತದೋ, ಇಲ್ಲವೋ ಎಂದು ಯೋಚನೆ ಮಾಡಿ ನೀವು ಹೇಳಬೇಕಾಗಿತ್ತು.

ನಾವೇನು ಮಾಡುವುದಕ್ಕಾಗುತ್ತದೆ? ಇವತ್ತು ಪರಿಸ್ಥಿತಿ ಏನಿದೆ ಎನ್ನುವ ಬಗ್ಗೆ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ವರದಿಯಾಗಿದೆ. ರಾಯಚೂರು ಥರ್ಮಲ್ ಪ್ಲಾಂಟ್ ಇರಬಹುದು, ಬಳ್ಳಾರಿಯಲ್ಲಿ ಸದ್ಯದಲ್ಲಿಯೇ ಹೊಸದಾಗಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಇವತ್ತು ಎಷ್ಟೆಷ್ಟು ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ, ಎಷ್ಟೆಷ್ಟು coal storage ಮಾಡಿ ಇಟ್ಟುಕೊಂಡಿದ್ದೀರಿ? ಎಂಬುದನ್ನು ಸದನದ ಗಮನಕ್ಕೆ ತರಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ವಿದ್ಯುತ್ ಸಚಿವರಿಗೆ ಮನವಿ ಮಾಡುತ್ತೇನೆ. ನನಗಿರುವ ಮಾಹಿತಿ ಪ್ರಕಾರ ಮೊದಲೇನು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿತ್ತು, ಆ ಸಿದ್ಧತೆಗಳನ್ನು ಮಾಡಿಕೊಳ್ಳುವುದರಲ್ಲಿ ತಡವಾಗಿದ್ದಕ್ಕೆ ರಾಜ್ಯಪಾಲರ ಆಡಳಿತ ಇತ್ತು. ರಾಜ್ಯಪಾಲರ ಆಡಳಿತದಲ್ಲಿ ಅದನ್ನು ಮಾಡಿಕೊಳ್ಳದಿದ್ದುದರಿಂದ ನಾವು ಈ 2 ತಿಂಗಳಲ್ಲಿ ಏನು ಮಾಡಲಿಕ್ಕೆ ಸಾಧ್ಯ. ಎಂಬ ಪ್ರಶ್ನೆಯನ್ನು ನೀವು ಇಡಬಹುದು. ಈ ಕಾರಣ ಕೊಟ್ಟು ನೀವು ಸರ್ಕಾರವನ್ನು ನಡೆಸಬೇಕಾದರೆ ನಿಮ್ಮ ಜವಾಬ್ದಾರಿ ಇಷ್ಟೇ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ನನಗಿರುವ ಮಾಹಿತಿ ಪ್ರಕಾರ 2007ರ ಜುಲೈನಲ್ಲಿ 5 ಲಕ್ಷ ಮೆಟ್ರಿಕ್ ಟನ್ ಕೋಲ್ ಅನ್ನು reserve ಮಾಡಿ ಇಟ್ಟಿದ್ದರು ಅಂದರೆ stock ಇತ್ತು. 2008ರ ಜುಲೈನಲ್ಲಿ .65 lakh metric tonne ಇದೆ. ಏತಕ್ಕೋಸ್ಕರ ಇಲ್ಲಿ storage ಮಾಡುವುದಕ್ಕೆ ನೀವು ನಿರ್ಧಾರ ಮಾಡಿದ್ದೀರಿ? ಕುಮಾರಸ್ವಾಮಿ ಕಾಲದಲ್ಲೋ, ರೇವಣ್ಣ ವಿದ್ಯುತ್ ಸಚಿವರಾಗಿದ್ದಾಗಲೋ ಈ coal ವ್ಯವಹಾರದಲ್ಲೇನಾದರೂ ದೊಡ್ಡ ಮಟ್ಟದ ಅವ್ಯವಹಾರ ನಡೆದಿರಬಹುದು ಎನ್ನುವುದನ್ನೇನಾನದರೂ ಪತ್ತೆ ಹಚ್ಚಲಿಕ್ಕೋಸ್ಕರವಾಗಿ ನಿಮ್ಮ ಅಧಿಕಾರಿಗಳೂ ಇದನ್ನು purchase ಮಾಡುವುದು ಬೇಡ ಎಂಬ ನಿರ್ಧಾರ ಮಾಡಿದ್ದಾರೋ ಎಂಬುದನ್ನು ಸದನದ ಗಮನಕ್ಕೆ ತರಬೇಕಾಗುತ್ತದೆ. ಏಕೆಂದರೆ, ಒಂದು ಕಡೆ ಮಳೆಯ ಅಭಾವದಿಂದ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ dam ಗಳಲ್ಲಿ ನೀರಿಲ್ಲದೆ ತೊಂದರೆಯಾಗಿದೆ. ಮತ್ತೊಂದು ಕಡೆ ಇಲ್ಲಿ ನೀವು Thermal plant ಮುಖಾಂತರ ಉತ್ಪಾದನೆ ಮಾಡುವುದಕ್ಕೆ coal ಅನ್ನು ಇವತ್ತೇನು stock ಮಾಡಿ ಬಿಡಬೇಕಾಗಿತ್ತು, ಅದಕ್ಕೆ ನೀವು ಸರಿಯಾದ ರೀತಿಯಲ್ಲಿ ಗಮನ ಹರಿಸದೆ ವಿಫಲರಾಗಿದ್ದೀರಿ. ನೀವು ಅಧಿಕಾರಕ್ಕೆ ಬಂದು ಈಗಾಗಲೇ 60 ದಿವಸಗಳಾಗಿವೆ. ಇನ್ನೂ ಏನು ಮಾಡುತ್ತಿದ್ದೀರಿ ಎಂಬುದು ನಮ್ಮ ಪ್ರಶ್ನೆ. ಇದರ ಜೊತೆಗೆ, ಇದರಲ್ಲಿ ಇನ್ನೂ ಹಲವಾರು ವಿಷಯಗಳಿವೆ. ಆದರೆ, ನಾನು ಇದನ್ನೆಲ್ಲ ಪ್ರಸ್ತಾಪ ಮಾಡುವುದಿಲ್ಲ. ಬಳ್ಳಾರಿಯಲ್ಲಿ ಪ್ಲಾಂಟ್ ಕೆಲಸ ಪ್ರಾರಂಭವಾಗಬೇಕೆಂದು ರಾಯಚೂರಿನಿಂದ divert ಮಾಡಿದ್ದೀರಿ. ರಾಯಚೂರಿಗೆ ಬಂದ coal ಅನ್ನು ಅಲ್ಲಿಗೇನು shift ಮಾಡುವುದಕ್ಕೆ ಹೊರಟಿರಿ, ಮತ್ತೆ ಇನ್ನೊಂದು burden ಅನ್ನು

company ಗಳ ಮೇಲೇ ಹಾಕಿದ್ದೀರಿ. ಅಲ್ಲಿರುವ coal ಅನ್ನು ಬಳ್ಳಾರಿಯಲ್ಲಿ plant ಪ್ರಾರಂಭ ಮಾಡಬೇಕೆಂದು ಕೆಲವು material, coal ಅನ್ನು ಏನು shift ಮಾಡಿದ್ದೀರಿ, ಇದರ ಮೂಲಕ ಮತ್ತೆ ಸರ್ಕಾರಕ್ಕೆ ಹೆಚ್ಚಿನ ನಷ್ಟವನ್ನು ಮಾಡಿಕೊಂಡಿದ್ದೀರಿ. ಅದರ ಜೊತೆಗೆ, ನಿನ್ನೆ ಛತ್ತೀಸ್‌ಘಡದಲ್ಲಿ ನಾವು ಈ ವರ್ಷವೇ ಪ್ರಾರಂಭ ಮಾಡುತ್ತೇವೆ, MoU ಗೆ ಸಹಿ ಹಾಕುತ್ತೇವೆಂದು ಹೇಳಿದ್ದೀರಿ. 2000 ಮೆ.ವ್ಯಾ.ವಿದ್ಯುತ್ ಉತ್ಪಾದನೆ ಪ್ರಾರಂಭ ಮಾಡುವ ತೀರ್ಮಾನ ಮಾಡಿದ್ದೇವೆಂದು ಹೇಳುತ್ತಿದ್ದೀರಿ, ಅದು ಅಷ್ಟು ಸುಲಭವಲ್ಲ. ಇವತ್ತು ನೀವು ಇಲ್ಲಿ ಹೇಳಿಕೆ ಕೊಡಬಹುದು. ನಾನೂ ಮುಖ್ಯಮಂತ್ರಿಯಾಗಿ ನನಗೆ ಸ್ವಲ್ಪ ಅನುಭವವನ್ನು ನೀವೇನು ಕೊಟ್ಟಿದ್ದೀರಿ, ಸರ್ಕಾರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ನೀವು ಊಹೆ ಮಾಡಿದಂತೆ, ನೀವು ಗುರಿ ಇಟ್ಟ ಸಮಯಕ್ಕೆ ಆ ಕೆಲಸಗಳನ್ನು ಮುಗಿಸುವಿದರಲಿ, ಪ್ರಾರಂಭ ಮಾಡಲಿಕ್ಕೇ ಆಗುವುದಿಲ್ಲವೆಂಬುದನ್ನು ನಾನು ಅರಿತಿದ್ದೇನೆ. ಇವತ್ತು ಛತ್ತೀಸ್‌ಘಡದಲ್ಲಿ ನೀವು ಹೋಗಿ ಭೂಮಿ ಹುಡುಕಿ ಅಲ್ಲಿ ಏನು ಮಾಡಬೇಕೆಂದು ಹೊರಟಿದ್ದೀರಿ ಇದಕ್ಕೆ ಕೇಂದ್ರ ಸರ್ಕಾರದ Enviornment Department, Forest Departmentನ permission ಬೇಕು. ಅದರ ಜೊತೆಗೆ, ಆ ರಾಜ್ಯದ ಆ ಭಾಗದಲ್ಲಿ ಭೂಮಿ ಕಳೆದುಕೊಳ್ಳುವ ರೈತರು ಏನು ಮಾಡುತ್ತಾರೋ ಗೊತ್ತಿಲ್ಲ. ಕಳೆದ ವರ್ಷ ನಾಲ್ಕೂವರೆ ಸಾವಿರ ಮೆ.ವ್ಯಾ.ವಿದ್ಯುತ್ ಉತ್ಪಾದನೆ ಮಾಡಲು, ತದಡಿ ಯೋಜನೆಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಕೇಂದ್ರ ಸರ್ಕಾರವೇ ಹಣ ಕೊಡುವುದಕ್ಕೆ ತಯಾರಾದಾಗ, ಪರಿಸರ ನಾಶವಾಗುತ್ತದೆ, ತಮ್ಮ ಭೂಮಿ ಹೋಗುತ್ತದೆಂದು ಏನು ಪ್ರತಿಭಟನೆ ನಡೆಸಿದರು, ಅದನ್ನು ನಡೆಸಿದರು ಯಾರು? ಯಾರಿಂದ ಆ ಪ್ರತಿಭಟನೆ ನಡೆಯುತ್ತಿದೆ? ವೀರಪ್ಪ ಮೊಯಿಲಿಯವರ ಕಾಲದಲ್ಲಿ ಪ್ರಾರಂಭವಾದಂಥ ನಾಗಾರ್ಜುನ ಪವರ್ ಪ್ರಾಜೆಕ್ಟ್‌ಗೆ ನಾನು ಹಾಗೂ ಹೀಗೂ ಹೋರಾಟ ಮಾಡಿ ಚಾಲನೆ ಕೊಡಲಿಕ್ಕೆ ಪ್ರಯತ್ನ ಪಟ್ಟೆ. ನಿಮ್ಮ ಸರ್ಕಾರ ಬಂದ ಮೇಲೆ ಆ ಕೆಲಸವನ್ನು ಮತ್ತೆ ನಿಲ್ಲಿಸಿದ್ದಾರೆ. ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಒಂದು ಕಡೆ ರಾಜ್ಯವನ್ನು ಕಾರ್ಗತ್ತಲಿನಲ್ಲಿ ಮುಳುಗಿಸುತ್ತಿದ್ದೀರಿ. ಎರಡು ದಿವಸ ಅಲ್ಲೆಲ್ಲೋ ಮಳೆ ಆಯಿತು ಎಂದ ಕೂಡಲೇ ನಿನ್ನೆ load shedding ಅನ್ನು ಇನ್ನು ಎರಡು ದಿವಸಗಳಲ್ಲಿ ತೆಗೆಯಬೇಕೋ, ಬೇಡವೋ ಎಂಬ ಬಗ್ಗೆ ಯೋಚನೆ ಮಾಡುತ್ತೇವೆಂದು ಮತ್ತೆ ಹೇಳಿಕೆ ಕೊಡುತ್ತೀರಿ. ಹೀಗಾದರೆ, ಕೈಗಾರಿಕಾ ಅಭಿವೃದ್ಧಿ ಆಗುತ್ತದೆಯೇ? ನೀವು ಹೊಸ ಸಾಧನೆ ಮಾಡುತ್ತೇವೆ, ಕೈಗಾರಿಕಗಳಿಗೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಟ್ಟು ಈ ರಾಜ್ಯದ ಯುವಕರಿಗೆ 10 ಲಕ್ಷ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತೇವೆಂದು ಹೇಳಿದಿರಿ.

ನಾವು ನಮ್ಮ ಸರ್ಕಾರದಲ್ಲಿ ಹಲವಾರು ಕೈಗಾರಿಕೆಗಳಿಗೆ ಹೈ ಪವರ್ ಕಮಿಟಿಯಲ್ಲಿ ಅನುಮೋದನೆ ಕೊಟ್ಟಿದ್ದೇವೆ. ಹಲವಾರು ಯೋಜನೆಗಳಿಗೆ ಪರ್ಮಿಷನ್ ಕೊಟ್ಟಿದ್ದೇವೆ. ಏನು ಸಾವಿರಾರು ಕೋಟಿ ರೂಪಾಯಿಗಳು ಕರ್ನಾಟಕಕ್ಕೆ ಹರಿದು ಬಂದು ಹೋಯಿತು. ಲಕ್ಷಾಂತರ ನಿರುದ್ಯೋಗ ಯುವಕರಿಗೆ ಉದ್ಯೋಗ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಹೈ ಪವರ್ ಕಮಿಟಿಯ ಚೇರ್ಮನ್ ತಾವು, ಸದಸ್ಯ ನಾನು. ತಾವು ಅನುಮೋದನೆ ಕೊಟ್ಟಿರುವುದಕ್ಕೆ ನಾನು ಒಪ್ಪಿದ್ದೇನೆ. ನಾವು ನೀವು ಸೇರಿ ಕೆಲಸ ಮಾಡಿದ್ದೇವೆ. ಒಳ್ಳೆಯ ಕೆಲಸ ಮಾಡಿದ್ದೇವೆ ಅದರ ಬಗ್ಗೆ ಏಕೆ ಹೇಳುತ್ತೀರಿ?

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ: ಒಂದು ನಿಮಿಷ ಆತುರ ಏಕೆ? ನಾವೇನು ನೀವು ತಪ್ಪು ಮಾಡಿದ್ದೀರಿ ಎಂದು ಹೇಳುತ್ತಿದ್ದೇನೆಯೇ?

ಶ್ರೀ ಬಿ.ಸಿ.ಪಾಟೀಲ್: ಎಲ್ಲಾ ಒಳ್ಳೆಯದು ಮಾಡಿದಿರಿ ಆದರೆ, ಕ್ಲೈಮ್ಯಾಕ್ಸ್‌ನಲ್ಲಿ ಕೆಟ್ಟು ಹೋಗಿ ಬಿಟ್ಟಿದೆ.

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ: ನಾನು ಏನು ಹೇಳಿದೆ ಎಂದರೆ, ನಮ್ಮ ಇಪ್ಪತ್ತು ತಿಂಗಳ ಅವಧಿ ಬಿಡಿ. ಅವರ ಕಾಲದಲ್ಲೂ ಹಲವಾರು ಕೈಗಾರಿಕಗಳಿಗೆ ಕೊಟ್ಟಿರಲ್ಲ. ನಾನು ಕೊನೆ ಕೊನೆಗೆ ಆ ಮೀಟಿಂಗ್‌ದ್ದು ಪತ್ರಿಕಾಗೋಷ್ಠಿ ನೀವು ಮಾಡಿಕೊಳ್ಳಿ ಎಂದು ಹೇಳಿದೆ. ಇದೆಲ್ಲ ಬೋಗಸ್ ಎನ್ನುವುದು ನನ್ನ ತಲೆಗೆ ಬಂತು, ಇವೆಲ್ಲಾ ಸುಮ್ಮನೆ ಅಷ್ಟು ಕೋಟಿ, ಇಷ್ಟು ಕೋಟಿ ತರುತ್ತೇವೆಂದು ಸೂಟು ಬೂಟು ಹಾಕಿಕೊಂಡು ಆ ಮಣ್ಯಾತ್ಮರು ಬರುತ್ತಾರಲ್ಲ ಅವರ ಅನುಭವ ನಿಮ್ಮಿಂದಲೇ ನಾನು ಪಡೆದುಕೊಂಡೆ. ಇಲ್ಲಿ ಎಷ್ಟು ಕೋಟಿ ಇನ್‌ವೆಸ್ಟ್‌ಮೆಂಟ್ ಮಾಡಬಹುದೆಂದು ನೋಡಿದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಇದು ಒಂಚೂರು ದಾರಿ ಎಲ್ಲೋ ತಪ್ಪುತ್ತಿದೆ. ಅವರು ಮುಖ್ಯಮಂತ್ರಿಗಳಾಗಿದ್ದಾಗ ಹೈ ಪವರ್ ಕಮಿಟಿಗೆ ಚೇರ್ಮನ್ ಆಗಿದ್ದರು. ಹಿಂದೆ ಹತ್ತು ವರ್ಷಗಳ ಕಾಲ ದೇಶಪಾಂಡೆಯವರು ಇಂಡಸ್ಟ್ರಿ ಮಿನಿಸ್ಟರ್ ಇದ್ದರು. ಆಮೇಲೆ ಸಿಂಧ್ಯಾರವರು ಆದರು. ಆಮೇಲೆ ಮಾನ್ಯ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಹೈ ಪವರ್ ಕಮಿಟಿಯ ಚೇರ್ಮನ್ ಆಗಿದ್ದರು. ಅನೇಕ ಕೈಗಾರಿಕೆಗಳಿಗೆ ನನ್ನ ಪವರ್ ಅವರ ಪವರ್ ಎಲ್ಲಾ ಪವರ್‌ಅನ್ನು ಉಪಯೋಗಿಸಿಕೊಂಡು ಅವರೇ ಅನುಮತಿ ಕೊಟ್ಟರು. ನಾನು ಚಕಾರ ಎತ್ತಲಿಲ್ಲ. ನಮಗೆ ಬೋಗಸ್, ವ್ಯಾಪಾರಕ್ಕೆ ಸೂಟು ಬೂಟು ಹಾಕಿಕೊಂಡು ನೀವು ಹೋಗಿದ್ದರೆಂದು ಹೇಳಿದರೆ, ಮುಖ್ಯಮಂತ್ರಿ ಏನು ಹೇಳಿದರು ಅದನ್ನು ನಾನು ಮಾಡಿದ್ದೇನೆ. ಪ್ರೆಸ್‌ಮೀಟ್ ಮಾಡಿ ಎಂದರು ನಾನು ಮಾಡಿದೆ.

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ: ತಾವು ಒಳ್ಳೆಯ ವಿಷಯ ರೈಸ್ ಮಾಡಿದಿರಿ, ನಾನು ಹೇಳುತ್ತೇನೆ ದಯಮಾಡಿ ಕುಳಿತುಕೊಳ್ಳಿ. ಅವರು ಹೇಳಿದರು, ಅವರ ಪವರ್ ಇನ್ನೊಬ್ಬ ಪವರ್ ಎಲ್ಲರ ಪವರ್ ನನಗೆ ಕೊಟ್ಟು ನೀವೇ ಎಲ್ಲಾ ತೀರ್ಮಾನಿಸಿ ಎಂದು ಹೇಳಿದ್ದೇ ಎಂದು ಹೇಳಿದರು. ಇವತ್ತು ಈ ಸದನದ ಮುಂದೆ ಹೇಳುತ್ತಿದ್ದೇನೆ, ಇದು ಹುಡುಗಾಟದ ಪ್ರಶ್ನೆಯಲ್ಲ. ನಿಮ್ಮ ಉದ್ಯೋಗ ಮಿತ್ರ ಇರಬಹುದು, ಸಿಂಗಲ್ ವಿಂಡೋ ಇರಬಹುದು, ಇದರಲ್ಲಿ ಯಾರು ಅರ್ಜಿಗಳನ್ನು ಹಾಕಿಕೊಂಡು ಬಂದರು, ಯಾರು ನಾನು ಕೈಗಾರಿಕೆಯನ್ನು ಪ್ರಾರಂಭಿಸುತ್ತೇನೆಂದು ಬಂದರಲ್ಲ ನಾನು ಅವರನ್ನು ನನ್ನ ಮನೆಯ ಹತ್ತಿರ ಕರೆಸಿಕೊಳ್ಳಲಿಲ್ಲ. ಅದನ್ನೆಲ್ಲಾ ಕಮಿಟಿಯ ಮುಂದೆ ತಂದಿರಲ್ಲ ಯಾವ ರೀತಿ ತಂದಿರಿ ಎಂಬುದನ್ನು ತಾವು ಹೇಳುತ್ತೀರಾ? ಎಲ್ಲಾವನ್ನು ನಾನೆ ತಂದೆನೆ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಚರ್ಚೆ ಮಾಡೋಣ ಎಂದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ಈಗ ಪ್ರತಿಯೊಂದು ವಿಚಾರದ ಬಗ್ಗೆ ಅನುಮತಿ ಕೊಟ್ಟಿರುವ ಬಗ್ಗೆ ಯಾವ ಸಮಯದಲ್ಲಿ ಯಾವ ರೀತಿಯಲ್ಲಿ ಚರ್ಚೆ ಮಾಡಬೇಕೆಂದೂ ತಾವೇ ಸಹಿ ಹಾಕಿರುವ ಎಲ್ಲಾ ಕಡತಗಳನ್ನು ತಾವೇ ಪರಿಶೀಲಿಸಬೇಕೆಂದರೆ ನನ್ನ ಅಭ್ಯಂತರವಿಲ್ಲ. ಯಾವತ್ತು ಯಾವ ಕೈಗಾರಿಕೋದ್ಯಮಿಗಳನ್ನು ಯಾರ ಮನೆಯ ಹತ್ತಿರ ಕರೆಸಿಕೊಂಡಿಲ್ಲ. ಆ 20 ತಿಂಗಳ ಅವದಿಯಲ್ಲಿ ರೆಕಾರ್ಡ್ ಬ್ರೇಕ್ ಆಗಿದೆ. ಅಂದರೆ, 3 ಲಕ್ಷದ 25 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡುವುದಕ್ಕೆ ಕೈಗಾರಿಕೆಗಳು ಅನುಮತಿ ಕೊಟ್ಟಿರುವುದು ತಾವು.

ಅಧ್ಯಕ್ಷರು: ಹಿಂದಿನ ಸರ್ಕಾರದಲ್ಲಿ ಆಗಿರುವ ಬಗ್ಗೆ ವಿವರವಾಗಿ ಚರ್ಚಿಸುವುದು ಬೇಸ. ಚರ್ಚೆ ಮಾಡುವುದಾದರೆ ಬೇರೆ ರೂಪದಲ್ಲಿ ಅವಕಾಶ ಕೊಟ್ಟಾಗ ಚರ್ಚೆ ಮಾಡಿ. ಇಲ್ಲಿಗೆ ಮುಗಿಸಿಬಿಡಿ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: ನಾವೇನು ಅವರ ಮೇಲೆ ಆಪಾದನೆ ಮಾಡಲಿಲ್ಲ. ಅವರ ಬಗ್ಗೆ ಏನೂ ಆಪಾದನೆ ಮಾಡುತ್ತಿಲ್ಲ. ತಮ್ಮ ಜೊತೆಗೆ ಕೆಲಸ ಮಾಡಿದ್ದೇವೆ.

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ: ಏಕೆ ಈ ರೀತಿ ದುಡುಕಿ ಮಾತನಾಡುತ್ತೀರಿ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಸೂಟು ಬೂಟು ಹಾಕಿಕೊಂಡವರನ್ನು ಕರೆಯದಿದ್ದರೆ ಕೈಗಾರಿಕೆಗಳಲ್ಲಿ ಉದ್ಯೋಗ ಕೊಡಲಿಕ್ಕೆ ಆಗುತ್ತಿರಲಿಲ್ಲವಲ್ಲ.

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ: ಡಿಸ್ಟರ್ಬ್ ಆಗುತ್ತದೆ. ನನ್ನ ಪ್ಲೋ ಕಟ್ ಆಗುತ್ತದೆ, ಬೇರೆ ಕಡೆ ಡೈವರ್ಟ್ ಆಗುತ್ತದೆ. ದಯಮಾಡಿ.

ಶ್ರೀ ಆರ್.ರೋಷನ್ ಬೇಗ್: ರೆಕಾರ್ಡ್ ಬ್ರೇಕ್ ಎಂದರೆ ಅರ್ಥವೇನು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಹಿಂದಿನ ಸರ್ಕಾರಗಳು ಕೋಟಿ ರೂಪಾಯಿಗಳ ಬಂಡವಾಳ ಹೂಡುವುದಕ್ಕೆ ಅನುಮೋದನೆ ಕೊಟ್ಟರೆ, 20 ತಿಂಗಳ ಅವಧಿಯಲ್ಲಿ 3 ಲಕ್ಷ 25 ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿಕೆದಾರರಿಗೆ ಅನುಮೋದನೆ ಕೊಟ್ಟಿರುವುದೇ ರೆಕಾರ್ಡ್.

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ: ನಾನು ಅದನ್ನೇ ಸ್ಪಷ್ಟೀಕರಣ ಕೊಡುತ್ತಿದ್ದೇನೆ. ನಾನು ಏಕೆ ಈ ವಿಷಯ ಪ್ರಸ್ತಾಪಿಸಿದೆ ಎಂದರೆ, ನಾನು ಅವರ ಮೇಲೆ ಅಪಾದನೆ ಮಾಡಲಿಕ್ಕೆ ಮಾಡಲಿಲ್ಲ. ಈ ರಾಜ್ಯದಲ್ಲಿ ಮತ್ತು ದೇಶದಲ್ಲಿ ಭ್ರಷ್ಟಾಚಾರ ವಿಚಾರದಲ್ಲಿ ಚರ್ಚೆ ಮಾಡುವುದು ಅಪ್ರಸ್ತುತ. ಈ ದೇಶದಲ್ಲಿ ಕಳೆದ 60 ವರ್ಷಗಳ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯಾವ ಭ್ರಷ್ಟಚಾರ ಸಾಬೀತು ಮಾಡಿ ಯಾರ್ಯಾರಿಗೆ ಎಷ್ಟು ಶಿಕ್ಷೆ ಕೊಟ್ಟಿದ್ದೇವೆ. ಮೊನ್ನೆ ನ್ಯೂಕ್ಲಿಯರ್ ಡೀಲ್ ಬಗ್ಗೆ ಚರ್ಚೆ ನಡೆಯುವಂಥ ಸಂದರ್ಭದಲ್ಲಿ ಯಾರೋ ಮಾತನಾಡಿದ್ದನ್ನು ನಾನು ನೋಡಿದೆ. ನ್ಯೂಕ್ಲಿಯರ್ ಡೀಲ್ ಬೋಫೋರ್ಸ್‌ಗಿಂತಲೂ ದೊಡ್ಡದು ಎಂದು ಭಾಷಣ ಮಾಡುತ್ತಿದ್ದರು. 58 ಕೋಟಿನೋ 60 ಕೋಟಿನೋ ಅದರದ್ದು ಡೀಲ್. ಶ್ರೀನಿವಾಸ ಪ್ರಸಾದ್‌ರವರು ಕೇಂದ್ರ ಸಚಿವರಾಗಿದ್ದರು ಅವರಿಗೆ ಅದರ ಬಗ್ಗೆ ಡಿಟೇಲ್ ಇರಬಹುದು. ಅದನ್ನು ಇನ್‌ವೆಸ್ಟಿಗೇಷನ್ ಮಾಡಿ ಎಷ್ಟು ಕೋಟಿ ಖರ್ಚು ಮಾಡಿದರು? ಇದು ಈ ದೇಶದಲ್ಲಿರು ವ್ಯವಸ್ಥೆ. ನನ್ನ ಮೇಲೆ 150 ಕೋಟಿಯ ಹಗರಣ ಬಂರು. ಈ ದೇಶದಲ್ಲಿ ಯಾವೊಬ್ಬ ರಾಜಕಾರಣಿಗೆ ಇವತ್ತು ಭ್ರಷ್ಟಚಾರದ ಹೆಸರನಲ್ಲಿ ಭ್ರಷ್ಟಾಚಾರ ಮಾಡಿದ್ದು ಸರಕಾರದ ಹಣ ಹೊಡೆದಿದ್ದಾನೆಂದು ಶಿಕ್ಷೆಯಾಗಿಲ್ಲ. ಆಗುವುದಿಲ್ಲ, ಆದ್ದರಿಂದ ನಾನು ಭ್ರಷ್ಟಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಚುನಾವಣೆ ನಡೆಸಿದೆವು, ಏನು ನನ್ನ ಮನೆಯ ದುಡ್ಡು ಹಾಕಿ ಚುನಾವಣೆ ನಡೆಸಿದ್ದೆವಾ? ಈ ದೇಶದಲ್ಲಿ ಇವತ್ತಿನ ರಾಜಕಾರಣದ ವ್ಯವಸ್ಥೆಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ, ಮಹಾತ್ಮ ಗಾಂಧಿ ಇದ್ದರೂ ಅವರು ರಾಜಕೀಯ ಬಿಟ್ಟು ಹೋಗಬೇಕಾಗಿತ್ತು ಅಥವಾ ಇಂಥ ವ್ಯವಸ್ಥೆಯ ಜೊತೆಗೆ ಕೈ ಜೋಡಿಸಬೇಕಾಗಿತ್ತು. ಇವರ ವಾಸ್ತವಾಂಶ ಹೇಳುವುದಕ್ಕೆ ಮುಚ್ಚು ಮರೆ ಏಕೆ? ಅದರಿಂದಾಗಿ ನಾನು ಈ ಸಂದರ್ಭದಲ್ಲಿ ಹೇಳಿದ್ದು, ಈ ಇಂಡಸ್ಟ್ರೀಗಳಿಗೆ ನಾವೇನು ಪರ್ಮಿಷನ್ ಕೊಡುತ್ತೇವೆ ಇದರ ಆಧಾರದ ಮೇಲೆ ಲಕ್ಷಾಂತರ ಜನ ಯುವಕರಿಗೆ ಉದ್ಯೋಗ ಕೊಡುತ್ತೇವೆಂದು ಏನು ಹೇಳುತ್ತೇವೆ, ಇದು ಎಲ್ಲಾ ನೀರಿನ ಮೇಲಿನ ಗುಳ್ಳೆ ಎಂದು ಹೇಳಬಯಸುತ್ತೇನೆ.

ಡಾ:ಹೆಚ್.ಸಿ.ಮಹಾದೇವಪ್ಪ: ಕುಮಾರ ಸ್ವಾಮಿಯವರು ಚಿಕ್ಕ ವಯಸ್ಸಿನಲ್ಲಿ ಮುಖ್ಯಮಂತ್ರಿಯಾಗಿದ್ದು ರಾಜ್ಯದ ಆಡಳಿತ ಸೂತ್ರ ಹಿಡಿದಿದ್ದರು. ಇಡೀ

ದೇಶದಲ್ಲಿರುವ ಭ್ರಷ್ಟಚಾರದ ವ್ಯವಸ್ಥೆ, ಭಾರತ ಅಭಿವೃದ್ಧಿಯಾಗದೇ ಇರುವುದಕ್ಕೆ ಭ್ರಷ್ಟಚಾರ ಮತ್ತು ಜಾತಿ ಇವೆರಡು ಪ್ರಮುಖವಾದ ಕಾರಣಗಳು. ಆದರೆ, ರಾಜಕಾರಣಿಗಳಾಗಿ ರಾಜಕೀಯ ಪಕ್ಷದ ನೇತಾರರಾಗಿ ಅದನ್ನು ತಡೆಗಟ್ಟಿ ದೇಶದ ಅಭಿವೃದ್ಧಿ ಮಾಡುವುದಕ್ಕೆ ಮತ್ತು ಏಳ್ಗೆಯಾಗುವುದಕ್ಕೆ ಏನು ಮಾಡಬೇಕು ಎನ್ನುವ ನಿರ್ದಿಷ್ಟವಾದ ಕಲ್ಪನೆ ನಮ್ಮೆಲ್ಲರಿಗೂ ಇರಬೇಕಾಗುತ್ತದೆ. ಏಕೆಂದರೆ, ಚಿಕ್ಕ ವಯಸ್ಸಿನಲ್ಲಿ ಅವರು ಮುಖ್ಯಮಂತ್ರಿಯಾಗಿ ಇಪ್ಪತ್ತು ತಿಂಗಳು ಅಧಿಕಾರ ನಡೆಸಿದ್ದಾರೆ. ಸ್ಪಷ್ಟವಾದ ರಾಜಕೀಯ ಅಭಿಪ್ರಾಯಗಳ ಮುಖಾಂತರ ಜನರ ಮನಸ್ಸಿನಲ್ಲಿ, ರಾಜ್ಯಾಂಗದ ಆಧಾರ ಸ್ತಂಭಗಳು ಸರಿಯಾಗಿ ಕೆಲಸ ಮಾಡದಿದ್ದಾಗ ಯಾವ್ಯಾವ ರೀತಿಯಲ್ಲಿ ಏನೇನು ಅನಾಹುತಗಳಾಗಿವೆ ಎಂದು ದೇಶದ ಅಭಿವೃದ್ಧಿಯ ಪ್ರಗತಿಯ ಚಿತ್ರಣವನ್ನು ವಿಶ್ಲೇಷಣೆ ಮಾಡಿದಾಗ ಗೊತ್ತಾಗುತ್ತದೆ. ಅದಕ್ಕೆ ಚಿಕ್ಕ ವಯಸ್ಸಿನಲ್ಲಿ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದಂಥ ಕುಮಾರ ಸ್ವಾಮಿಯವರು ಇಡೀ ದೇಶದಲ್ಲಿ ಭ್ರಷ್ಟಚಾರಕ್ಕೆ ಯಾರು ಏನು ಮಾಡುವುದಿಲ್ಲ ಎನ್ನುವ ಭಾವನೆಯನ್ನು ವ್ಯಕ್ತ ಮಾಡುವುದರ ಬದಲು ಏನು ಮಾಡಬೇಕು? ತಾವು ಯುವಕರಾಗಿ ಯುವಕರಿಗೆ ರಾಜಕೀಯ ಸಂದೇಶ ಏನು ಕೊಡುತ್ತೀರಿ ಎನ್ನುವುದು ಸೂಕ್ತ.

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ: ಭ್ರಷ್ಟಚಾರದ ಬಗ್ಗೆ ಚರ್ಚಿಸಿ ಇದರ ಮೂಲ ಕಂಡು ಹಿಡಿದು ಇದನ್ನು ಹೇಗೆ ಬಗೆಹರಿಸಬೇಕು ಎನ್ನುವುದಾದರೆ, ನಮ್ಮ ರಾಜ್ಯದ ಮಟ್ಟಿಗಾದರೂ, ಕೇಂದ್ರದ್ದು ಬಿಟ್ಟು ಬಿಡಿ ಎಲ್ಲಾ ಸದಸ್ಯರುಗಳು ತಮಗೆ ಅನುಮತಿ ಕೊಟ್ಟರೆ ನಾಲ್ಕು ದಿವಸ ಇದರ ಬಗ್ಗೆ ಚರ್ಚಿಸಿ, ಸಂಶೋಧನೆ ಮಾಡಿದ ಹಾಗೆ ಮಾಡಿ, ಇದನ್ನು ಈ ರಾಜ್ಯದಿಂದಲಾದರೂ ಹೊಸದಾಗಿ ಪರಿವರ್ತನೆ ಮಾಡುವುದಕ್ಕೆ ಸಾಧ್ಯವೇನೋ ನೋಡೋಣ. ಏಕೆಂದರೆ, ಆಕಸ್ಮಿಕವಾಗಿ ಚಿಕ್ಕ ವಯಸ್ಸಿನಲ್ಲಿ ಮುಖ್ಯಮಂತ್ರಿಯಾದರು ಎನ್ನುವ ಮಾತನ್ನು ಹೇಳಿದಿರಿ. ನನ್ನ ಮಾತನ್ನು ತಾವು ಪಲಾಯಾನ ವಾದ ಎಂದು ಅನ್ನಬಹುದು. ನಾನು ಈಗ ಹೇಳಿದ್ದಕ್ಕೆ ಅಸಹಾಯಕತೆ, ಪಲಾಯನ ವಾದ, ಎಂದು ನೀವು ಕರೆಯಬಹುದು. ವಾಸ್ತವಾಂಶವನ್ನು ಹೇಳತಕ್ಕಂಥದ್ದರಲ್ಲಿ ಇದರಲ್ಲಿ ಮುಚ್ಚಿಡುವ ಪ್ರಶ್ನೆಯಿಲ್ಲ. ಇದರ ಬಗ್ಗೆ ಚರ್ಚೆ ಮಾಡಬೇಕೆಂದರೆ, ನನ್ನ ಮೇಲೆ ಏಕೆ 150 ಕೋಟಿಯ ಹಗರಣ ಬಂತು? ನನ್ನ ಮೇಲೆ ಏಕೆ ಬಂತು? ನೈಸ್ ಕಂಪನಿ ವಿಷಯ ಸುಪ್ರೀಂ ಕೋರ್ಟಿನಲ್ಲಿದೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಹೋರಾಟ ಮಾಡಲಿಕ್ಕೆ ಹೊರಟಿದ್ದಕ್ಕೆ ಖಳ ನಾಯಕರು ಯಾರು ಆಗಿದ್ದಾರೆ? ಅದರಿಂದ, ಭ್ರಷ್ಟಚಾರದ ಬಗ್ಗೆ ನಾವು ವೇದಿಕೆಯ ಮೇಲೆ ಪುರಾಣ ಹೇಳಬಹುದು. ಜನಗಳನ್ನು ಮೆಚ್ಚಿಸಲಿಕ್ಕೆ ಎಷ್ಟು ಬೇಕಾದರೂ ಮಾತನಾಡಬಹುದು. ನಾವೇಕೆ ಹೇಳಿದೆ ಎಂದರೆ, ಇವತ್ತಿನ ವ್ಯವಸ್ಥೆ

ಯಾವ ಮಟ್ಟಕ್ಕೆ ಹೋಗುತ್ತಿದೆ? ಹೊರಗಡೆ ಮಾಧ್ಯಮದ ಸ್ನೇಹಿತರು ನನ್ನನ್ನು ಈಗ ಒಂದು ಗಂಟೆ ಮುಂಚೆ ಕೇಳುತ್ತಿದ್ದರು ಮೈಸೂರು ಮಹಾನಗರ ಪಾಲಿಕೆಯಿಂದ ಯಾರೋ 8-10 ಜನ ಜೆಡಿಎಸ್‌ನಿಂದ ಬಿಜೆಪಿಗೆ ಹೋಗುತ್ತಿದ್ದಾರೆ, ಅದಕ್ಕೆ ಒಬ್ಬೊಬ್ಬ ಸದಸ್ಯನಿಗೆ ಎಷ್ಟೆಷ್ಟು ಕೊಟ್ಟಿದ್ದಾರೆ ಎಂಬ ಮಾಹಿತಿ ತಮಗೆ ಗೊತ್ತಿದಿಯೆ ಎಂದು ಈಗ ಹೊರಗಡೆ ಕೇಳಿದರು. ಇವತ್ತಿನ ರಾಜಕಾರಣ ಬಗ್ಗೆ ಹೇಳುವುದಾದರೆ, ಮೊನ್ನೆ ದೆಹಲಿಯಲ್ಲಿ ಸ್ಪೀಕರ್ ಕೋಣೆಯ ಮುಂದೆ ತಂದು ಸುರಿದರು.

ದೇಶದ ವ್ಯವಸ್ಥೆ ದಿನೇ ದಿನೇ ಅಧೋಗತಿಗೆ ಹೋಗುತ್ತಿದೆಯೇ ಹೊರತು ಇದನ್ನು ಸರಿಪಡಿಸತಕ್ಕಂಥದ್ದರ ಬಗ್ಗೆ ಯಾರೂ ಚಿಂತನೆ ಮಾಡಿಲ್ಲ. ಇದನ್ನು ಸರಿಪಡಿಸುವುದಕ್ಕೆ ಇನ್ನೊಬ್ಬ ಮಹಾತ್ಮಗಾಂಧಿ ಹುಟ್ಟಿ ಬರಬೇಕೇನೋ ನೋಡೋಣ. ನಾವಂತೂ ಮಹಾತ್ಮ ಗಾಂಧಿಯಾಗುವುದಕ್ಕೆ ಆಗುವುದಿಲ್ಲ. ಅವರ ಪಾದಕ್ಕ ಕೂಡ ನಾವು ಸಮಾನರಲ್ಲ. ದೊಡ್ಡ ಆಂದೋಲನ ನಡೆಸತಕ್ಕಂಥವರು ಇನ್ನೊಬ್ಬ ಯಾರಾದರೂ ಹುಟ್ಟಿ ಬರಬೇಕಷ್ಟೆ.

ಅಧ್ಯಕ್ಷರು:- ಮಾನ್ಯ ಕುಮಾರಸ್ವಾಮಿಯವರೆ, ಈಗ ಊಟಕ್ಕೆ ಸಮಯವಾಗಿದೆ. ಈಗ ಸದನವನ್ನು ಮುಂದೂಡಿ ಮಧ್ಯಾಹ್ನ ಮೂರು ಗಂಟೆಗೆ ಮತ್ತೆ ಸೇರೋಣ. ಆಗ ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಆಯಿತು.

ಅಧ್ಯಕ್ಷರು:- ಈಗ ಒಂದು ಪ್ರಕಟನೆ.

<u>ಪ್ರಕಟಣೆ</u>

ಮಾನ್ಯ ಸಚಿವರಾದಂಥ ಶ್ರೀ ಜನಾರ್ಧನ ರೆಡ್ಡಿಯವರು ಈ ದಿನ ಮಧ್ಯಾಹ್ನ ಮಾನ್ಯ ಸದಸ್ಯರುಗಳ ಗೌರವಾರ್ಥ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿರುತ್ತಾರೆ. ತಾವುಗಳು ಭಾಗವಹಿಸಬೇಕೆಂದು ಕೋರಲಾಗಿದೆ.

ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2.01 ಗಂಟೆಗೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 3 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು, ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ ತಾವು ಚರ್ಚೆಯನ್ನು ಕಂಟಿನ್ಯೂ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ., ಮಧ್ಯಾಹ್ನದ ಮೇಲೆ ತಾವು ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದಿರಿ.

ಅಧ್ಯಕ್ಷರು: ಅವರ ಚರ್ಚೆ incomplete ಆಗಿದೆ. ಅವರು ಚರ್ಚೆಯನ್ನು complete ಮಾಡಲಿ. ನಂತರ ಅವಕಾಶವನ್ನು ಮೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಇವತ್ತು ರೂಲಿಂಗ್ ಕೊಡಿ.

ಅಧ್ಯಕ್ಷರು: ಕೊಡುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟ ಹಾಗೆ ಚರ್ಚೆಯಲ್ಲಿ ಬಾಗವಹಿಸಬೇಕಾದರೆ, ಮಾನ್ಯ ಮುಖ್ಯಮಂತ್ರಿಗಳು ಬೇರೆ ಕಡೆಗೆ ವಿಷಯವನ್ನು divert ಮಾಡಿರುವುದರಿಂದ ಸ್ವಲ್ಪ ತಡೆಯಾಯಿತು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು:(ಮಾನ್ಯ ಅಬಕಾರಿ ಸಚಿವರು): ನಾನು ತಮ್ಮನ್ನು divert ಮಾಡಿಲ್ಲ. ಅವರು ಆ ಕಮಿಟಿಯ ಛೇರ್ಮನ್ ಆಗಿದ್ದಾಗ ಅವರೇ ಎಲ್ಲವನ್ನು ನೋಡಿಕೊಂಡು, ಎಲ್ಲವನ್ನು ಮಾಡಿದ್ದಾರೆಂದು ನಾನು ಹೇಳಿದೆ. ಅಷ್ಟನ್ನು ಬಿಟ್ಟರೆ, ತಮ್ಮ ಮೇಲೆ ನಾನು ಆಪಾದನೆಯನ್ನು ಮಾಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇವರಿಬ್ಬರು ಹೇಳುವುದನ್ನು ನೋಡಿದರೆ ನನಗೆ ಸಂಶಯ ಬರುತ್ತದೆ. ಇದಕ್ಕೆ ತಾವು House Committeeಯನ್ನು ಮಾಡಿ. ಇದನ್ನು ನಾವು serious ಆಗಿ ನೋಡೋಣ. ಏಕೆಂದರೆ, ಅವರು ಮಾನ್ಯ ಮುಖ್ಯಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದಾರೆ. ಇವರು Industry Minister ಆಗಿ ಕೆಲಸವನ್ನು ಮಾಡಿದ್ದಾರೆ. ಅದರೊಳಗೆ ಏನು ಹುಳುಕು ಇಲ್ಲವೆಂದು ನನಗೆಲ್ಲಾ ಗೊತ್ತಿದೆ ಎಂದು ಇವರು ಹೇಳತ್ತಾರೆ. ಆಮೇಲೇ ಅವರು ಇಲ್ಲ ಅದು ನೀವು ಹೇಳಿರುವುದನ್ನು ನಾನು ಮಾಡಿದ್ದೇನೆಂದು ಹೇಳುತ್ತಾರೆ. ಅವರು ಹೇಳಿರುವುದನ್ನು ಇವರು ಏನು ಮಾಡಿದ್ದಾರೆ, ಇವರು ಹೇಳಿರುವುದನ್ನು ಅವರು ಏನು ಮಾಡಿದ್ದಾರೆಂದು ನಮಗೇನೂ ಗೊತ್ತಿಲ್ಲ So at least ಇಲ್ಲ ಸದನ ಸಮಿತಿಗೆ ಹಾಕಿ, ಏನು ಇದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಸನ್ಮಾನ್ಯ ವಿರೋಧಪಕ್ಷದ ನಾಯಕರು ಏನು ಒಂದು ಸಲಹೆಯನ್ನು ಕೊಡುತ್ತಿದ್ದಾರೆ. ಅವರು ಕೊಟ್ಟಂತಹ ಸಲಹೆಯ ಬಗ್ಗೆ ನಿಣಾಯ ಮಾಡಿ, ಸದನ ಸಮಿತಿಗೆ ಇದನ್ನು ಹಾಕಿ, ಈ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ನನ್ನ ಸಲಹೆ ಏನೆಂದರೆ......

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸಾವಿರಾರು ಎಕರೆ ಜಮೀನು ಅದಕ್ಕೆ agitation ನಡೆಯಿತು. S.E.Z.ನದು ಸಹ ನಡೆಯಿತು. ಈ ಬಗ್ಗೆ ಎಲ್ಲೆಲ್ಲಿ lapses ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೂ ಸಹ ಗೊತ್ತಿದೆ.
ಇದರಲ್ಲಿ ಏನಾಗಿದೆ, ಏನು ಹೋಗಿದೆ ಎಂದು Industry Ministerಗೂ ಗೊತ್ತಿದೆ. ಅದರ ಬಗ್ಗೆ atleast ಜನರಿಗೂ ಗೊತ್ತಾಗಬೇಕಲ್ಲ. ಯಾವ್ಯದರಿಂದ ತೊಂದರೆಯಾಗಿದೆ? ಎಲ್ಲಿ ಲ್ಯಾಪ್ಸ್ ಆಗಿದೆ? ರೈತರಿಗೆ ಅನುಕೂಲವೋ? ಅನಾನುಕೂಲವೋ? ಬಂಡವಾಳದಾರರಿಗೆ ಅನಾನುಕೂಲವೋ? ಅನಾನುಕೂಲವೋ? ಇಲ್ಲವೇ ನೇರವಾಗಿ Public Accounts Committeeಗಾದರೂ ಕಳುಹಿಸಿಬಿಡಿ. ಇಲ್ಲವೆ, ಜಂಟಿ ಸದನ ಸಮಿತಿಯನ್ನಾದರೂ ರಚಿಸಿ. ಅದು ನಿಮ್ಮ ಕೈಯಲ್ಲೇ ಇದೆಯಲ್ಲ.
ಅಧ್ಯಕ್ಷರು: ಅವರು ಮಾತನಾಡಲಿ.
ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಒಪ್ಪುತ್ತಾರೆ. ಇದಕ್ಕೆ ನಿಮ್ಮಿಂದ ಒಪ್ಪಿಗೆ ಬರಬೇಕಷ್ಟೆ. ಮಾಜಿ ಮುಖ್ಯಮಂತ್ರಿಗಳೇ ಒಪ್ಪುವಾಗ ತಾವು ಒಪ್ಪಬಹುದು. ಇದಕ್ಕೇನೂ ತೊಂದರೆಯಿಲ್ಲ. ಅವರೂ ಕೂಡ ಸಿದ್ಧರಿದ್ದಾರೆ. ಏನೇ ಎನ್‌ಕ್ವೇರಿಯಾದರೂ ನೋಡೋಣವೆಂದು ಅವರೂ ಹೇಳುತ್ತಾರೆ. ಆದ್ದರಿಂದ, ಇಬ್ಬರದನ್ನು ನೋಡುವುದಕ್ಕೆ ಯಾರಿರಬೇಕು? ನಾವೆಲ್ಲರೂ ಇರಬೇಕಲ್ಲವೇ?
ಅಧ್ಯಕ್ಷರು: ನಿಮ್ಮ ಅಭಿಪ್ರಾಯ ಹೇಳಿದಿರಲ್ಲ, ನಿರ್ಣಯ ತೆಗೆದುಕೊಳ್ಳೋಣ.
ಶ್ರೀ ಮಲ್ಲಿಕಾರ್ಜುನ ಖರ್ಗೆ: ಎಲ್ಲವನ್ನೂ ತಡೆದು ತಡೆದೂ ನಿರ್ಣಯ ಮಾಡುತ್ತೇವೆಂದರೆ ಹೇಗೆ? ಇದರ ಬಗ್ಗೆ ನಿರ್ಣಯ ಕೈಗೊಳ್ಳಬೇಕಾಗಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರಂತೂ ಒಪ್ಪುತ್ತಾರೆ. Honourable Chief Minister is ready to agree. ಅವರಿಬ್ಬರ ಬಂಡವಾಳ ಏನು ಹೊರಗೆ ಬರುತ್ತದೋ ಬರಲಿ, ನೋಡೋಣವೆಂದು ಅವರೂ ಒಪ್ಪುತ್ತಾರೆ.
ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನನ್ನ ಮನವಿ ಏನೆಂದರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹಲವಾರು ಬಾರಿ ಹೇಳಿದ್ದಾರೆ. ದೆಹಲಿಯಲ್ಲೂ ಒಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುವಂತಹ ಸಂದರ್ಭದಲ್ಲಿ, ಅದು ಗಣಿ ಇಲಾಖೆಗೆ ಸಂಬಂಧಪಟ್ಟಂತೆ ಇರಬಹುದು, ನನ್ನ ಕಾಲದಲ್ಲಿ ನಡೆದಿರತಕ್ಕಂಥ, ತಾವು ಹೇಳಿದಂತೆ ಕೈಗಾರಿಕಾ ನೀತಿಗಳು, ಕೈಗಾರಿಕೆಗಳಿಗೆ ಸಂಬಂಧಿಸಿದಂತೆ High Power Committeeಗೆ ಮುಖ್ಯಮಂತ್ರಿಯಾಗಿ ನಾನು ಹಲವಾರು ಸಭೆಗಳ ಅಧ್ಯಕ್ಷತೆ ವಹಿಸಿದ್ದೇನೆ. ನನ್ನ ಕಾಲದಲ್ಲಿ ಏನೇನು ತೀರ್ಮಾನಗಳಾಗಿವೆ, ಹಿಂದಿನದೆಲ್ಲವನ್ನೂ ತೆಗೆಯಿರಿ ಎಂದು ಹೇಳುವುದಕ್ಕೂ

ಹೋಗುವುದಿಲ್ಲ. ನನ್ನ ಕಾಲದಲ್ಲಿ ನಡೆದಿರುವ ಘಟನೆಗಳ ಬಗ್ಗೆ ಸದನ ಸಮಿತಿ ರಚಿಸುವುದಕ್ಕೆ ನನ್ನ ಯಾವ ಆಕ್ಷೇಪಣೆಯೂ ಇಲ್ಲ. ವಿರೋಧ ಪಕ್ಷದ ನಾಯಕರ ಸಲಹೆ ಏನಿದೆ, ಆ ಸಲಹೆಗೆ ಸಂಪೂರ್ಣವಾಗಿ ಬೆಂಬಲವನ್ನು ವ್ಯಕ್ತಪಡಿಸಿ ಸದನ ಸಮಿತಿಯನ್ನು ರಚಿಸಬಹುದು ಎಂಬುದಕ್ಕೆ ನಾನು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡುವುದಕ್ಕೆ ಬಯಸುತಿದ್ದೇನೆ. ಏಕೆಂದರೆ, ನಾನು ಹೇಳಿರುವಂಥಾದ್ದು ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ....

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು serious allegation ಮಾಡುತ್ತಿದ್ದಾರೆ.

ಅಧ್ಯಕ್ಷರು: ಈಗ ಕುಮಾರಸ್ವಾಮಿಯವರು ಏನು ಹೇಳಿದರೋ, ಅದರ ಮೇಲೆ ಸದನ ಸಮಿತಿ ರಚಿಸಿ ಎಂದು ವಿರೋಧ ಪಕ್ಷದ ನಾಯಕರಾದ ತಾವು ಹೇಳುತ್ತೀರಿ. ಇದರ ಬಗ್ಗೆ detail ಆಗಿ ಚರ್ಚೆ ಏನಾದರೂ ಆಗಿದೆಯೇ? Detail ಆಗಿ ಚರ್ಚೆಯಾಗಲಿಲ್ಲ. Details ಕೊಡಿ, ಕೊಟ್ಟ ನಂತರ ವಿಚಾರ ಮಾಡುತ್ತೇನೆ. ಅವರು ಡಿಟೇಲ್ಸ್ ಕೊಡಲಿ. ಈ ಕಡೆಯಿಂದಲೂ ಕೊಡಲಿ, ಅವರೂ details ಕೊಡಲಿ. ಈ ಕಡೆಯಿಂದ Industry Minister ಸಹ details ಕೊಡಲಿ. ಅದಾದ ನಂತರ ನಾನು ಆ ಕುರಿತಂತೆ ನಿರ್ಣಯ ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸರ್, ಇದು 3 ಲಕ್ಷ ಕೋಟಿ....

ಅಧ್ಯಕ್ಷರು: ಅದರ ಬಗ್ಗೆ ನನಗೆ details ಕೊಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರೇ ಕೊಟ್ಟಿದ್ದು. ನನಗೆ ಗೊತ್ತಿಲ್ಲ. ಅವರೇ ಹೇಳಿದ್ದು. ನನ್ನ ಕಾಲದಲ್ಲಿ 3 ಲಕ್ಷ ಕೋಟಿ Investment ಮಾಡಿಸಿದ್ದೇನೆ. ಹಿಂದಿನ ಮುಖ್ಯಮಂತ್ರಿಗಳು ಏನು ಹೇಳಿದರು: ನಮ್ಮ ಎಲ್ಲಾ ಅಧಿಕಾರವನ್ನು ತೆಗೆದುಕೊಂಡು ಅವರು ಮಾಡಿದರು, ಅದಕ್ಕೆಲ್ಲಾ ಒಪ್ಪಿಗೆ ಕೊಟ್ಟಿದ್ದೇನೆಂದು ಅವರು ಹೇಳುತ್ತಾರೆ. ಇವರು ಹೇಳುತ್ತಾರೆ: ನೀವು ತಂದಿದ್ದಕ್ಕೆಲ್ಲಾ ನಾನು ಸಹಿ ಹಾಕಿದ್ದೇನೆ ಎರದು.

ಅಧ್ಯಕ್ಷರು: ಅದಕ್ಕೋಸ್ಕರ, ಎರಡೂ ಕಡೆಗಳಿಂದ details ಬರಲಿ. ಆ details ಬಂದ ಮೇಲೆ ನೀವು ಹೇಳಿದಂತೆ ಅವಶ್ಯವಿದ್ದರೆ....

ಶ್ರೀ ಹೆಚ್.ಸಿ.ಬಾಲಕೃಷ್ಣ: ಸದನ ಸಮಿತಿ ರಚಿಸಿದರೆ details ತಾನಾಗಿಯೇ ಹೊರಗಡೆ ಬರುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ: ನಮ್ಮ Industry Minister ಅವರು ಏಕೆ ಹೆದರಿಕೊಳ್ಳಬೇಕು?

Announce ಮಾಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನೇನು ಹೆದರಿಕೊಂಡಿದ್ದೇನೆಯೇ? ಯಾವುದಕ್ಕೆ ಹೆದರಿಕೊಂಡಿದ್ದೇನೆ? ನಿಮ್ಮ ಹತ್ತಿರ ಏನಾದರೂ ಬಂದು

ಬೇಡಿಕೊಂಡಿದ್ದೇನೆಯೇ? ಇದನ್ನು ಮಾಡಬೇಡಿ, ಅದನ್ನು ಮಾಡಬೇಡಿ, ಸದನ ಸಮಿತಿ ಮಾಡಬೇಡಿ, ಡಿಟೇಲ್ಸ್ ಇಲ್ಲ, ನಾನು ಮಾಡಿದ್ದನ್ನೆಲ್ಲಾ ಮನ್ನಾ ಮಾಡಿ ಎಂದು ಯಾವತ್ತಾದರೂ ಬಂದು ಕೇಳಿದ್ದೇನೆಯೇ? ಇಲ್ಲವಲ್ಲ. ನಾನು ಮುಕ್ತವಾಗಿ ಮಾತನಾಡುತ್ತಿದ್ದೇನೆ. ಎಲ್ಲವನ್ನೂ ತಾವು ಮಾಡಿದ್ದೀರಿ, ತಮ್ಮ ಅಧ್ಯಕ್ಷತೆಯಲ್ಲಿ ಮಾಡಿದ್ದೀರಿ, ತಮ್ಮ ಮಂತ್ರಿಮಂಡಲದಲ್ಲಿ ನಾನು ಮಂತ್ರಿಯಾಗಿದ್ದೆ. ಯಾವ್ಯಾವ ಕಡತಗಳು ಏನೇನೆಂದು ತಮಗೂ ಗೊತ್ತಿದೆ, ನನಗೂ ಗೊತ್ತಿದೆ. ಎಲ್ಲವೂ, ಏನು ಬೇಕಾದರೂ, ಯಾವ ಸಮಿತಿ ಬೇಕಾದರೂ ರಚಿಸಲಿ, ಅದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ. ಅದರ ಬಗ್ಗೆ ನಿರ್ಣಯ ಕೈಗೊಳ್ಳಬೇಕಾಗಿರುವವರು ಸಭಾಧ್ಯಕ್ಷರು. ತಾವು ಏನೇನು ಕಾಗದ ಪತ್ರಗಳನ್ನು ಕೇಳುತ್ತೀರೋ, ಅವೆಲ್ಲವನ್ನೂ ಒದಗಿಸಿಕೊಡುವುದಕ್ಕೆ ನಾನು ತಯಾರಿದ್ದೇನೆ. ಅವರು ಏನು ಕೊಡುತ್ತಾರೋ, ಕೊಡಲಿ.ಅದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಇನ್ನು ನಾನು ಹೆದರಿಕೊಳ್ಳುವುದೇನಿದೆ? ರೇವಣ್ಣನವರು ಆಗಿಂದಾಗ್ಗೆ ರಾಜಕೀಯ ಮಾಡುತ್ತಾರೆ. ರಾಜಕೀಯ ಏಕೆ ಮಾಡುತ್ತೀರಿ? ಎಲ್ಲಾ ಕಡೆ ಬೆಳಿಗ್ಗೆ ಎದ್ದರೆ ಸಂಜೆ ತನಕವೂ ರಾಜಕೀಯವನ್ನೇ ಮಾಡುತ್ತೀರಲ್ಲ. ಯಾವುದಾದರೂ subject, budget ಬಗ್ಗೆ discussion ಮಾಡಿ. ಅದರಲ್ಲೂ ರಾಜಕೀಯ ಮಾಡುತ್ತೀರಿ, ಕುಳಿತರೆ, ನಿಂತರೆ, ಎದ್ದರೆ, ಮಲಗಿದರೆ, ಯಾವಾಗಲೂ ರಾಜಕಾರಣ ಮಾಡುತ್ತೀರಿ. ಏಕೆ ರೇವಣ್ಣ?

ಶ್ರೀ ಹೆಚ್.ಸಿ.ಬಾಲಕೃಷ್ಣ: ರೇವಣ್ಣನವರು ಮಲಗಿಕೊಂಡು ಹೇಗೆ ರಾಜಕೀಯ ಮಾಡುತ್ತಾರೆಂದು ಈಗ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ರೇವಣ್ಣನವರ ಪರವಾಗಿ ಮಾತನಾಡಿದರೆ ಅವರೂ ಎದ್ದು ನಿಲ್ಲುತ್ತಾರೆ. ನಮಗೆ ಬಂದಿದ್ದು ಇದೇ ತಾಪತ್ರಯ. ಅಧ್ಯಕ್ಷರೆ, ನಾನು ಏಕೆ ಹೇಳುತ್ತೇನೆಂದರೆ, ನೀವಿಬ್ಬರೂ ಕೂಡ ಹೇಳುತ್ತಿದ್ದೀರಿ. ನಿಮ್ಮ ಹೇಳಿಕೆಯಿಂದ ಹೊರಗಡೆ ಒಂದು ಗೊಂದಲ ಸೃಷ್ಟಿಯಾದಂತಾಯಿತು. ನೀವು ಹೇಳುವುದು ಮತ್ತು ಅವರು defend ಮಾಡುವುದು, ಅದು ಬೇರೆ ವಿಚಾರ. ಆದರೆ, ನಿಮಗೆ ಗೊತ್ತು, ಅವರಿಗೆ ಗೊತ್ತು. ಅದನ್ನು ನೀವಿಬ್ಬರೂ ಸೇರಿ ಈಗ ಸದನದಲ್ಲಿ ಹೇಳಿದಿರಿ. ಸದನದಲ್ಲಿ ಹೇಲಿದ ಮೇಲೆ ಸದನದ ಸದಸ್ಯರಿಗೆ ಗೊತ್ತಾಗಬೇಕಲ್ಲ. ನಿಮ್ಮಿಬ್ಬರಿಗೆ ಗೊತ್ತಾದರೆ ನಮಗೆ ಗೊತ್ತಾಗುವುದು ಹೇಗೆ? ನಾವೇನು ಮಾಡಬೇಕು? ನಾವು ಸುಮ್ಮನೆ ಕೇಳಿಸಿಕೊಂಡು ಕುಳಿತುಕೊಳ್ಳಬೇಕೆ?

ಅಧ್ಯಕ್ಷರು: ಇನ್ನು ಸ್ವಲ್ಪ ಅವರಿಗೆ ಮಾತನಾಡಲು ಬಿಡಿ, ಆಗ ಎಲ್ಲವೂ ಹೊರಗಡೆ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆಮೇಲೆ ಮಾಡುತ್ತೀರಾ?

ಅಧ್ಯಕ್ಷರು: ಅವರು ಇನ್ನೂ ಸ್ವಲ್ಪ ಮಾತನಡಲಿ, ತಡೀರಿ, ಮೊದಲು ವಿಷಯ ಹೊರಗಡೆ ಬರಲಿ, ಆಮೇಲೆ ನೋಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಮಾಡುತ್ತೇವೆಂದು ಹೇಳಿದರೆ ನಾವು ಕುಳಿತುಕೊಳ್ಳುತ್ತೇವೆ. ಇಲ್ಲವೆಂದರೆ, ನೀವು ಹೇಳಿದಂತೆ ಹೇಳಿ, ಅವರು ಹೇಳಿಕೊಂಡು, ಹೋಗಲಿ,....ಆಯಿತು, ಇವತ್ತು ಒಂದು ದಿವಸ ನೋಡುತ್ತಾರೆ. ನಾಳೆ ಯಡಿಯೂರಪ್ಪನವರು ಬಜೆಟ್ ಕಾಪಿಯನ್ನು ಬಗಲಿನಲ್ಲಿ ಇಟ್ಟುಕೊಂಡು ಓಡಿ ಹೋಗುತ್ತಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಅವರು ಓಡಿ ಹೋಗುತ್ತಾರೆಂದು ವಿರೋಧ ಪಕ್ಷದ ನಾಯಕರು ಹೇಳಿದರೆ ಹೇಗೆ? ತಾವು ಒಳ್ಳೆಯ Parliamentarian. ತಾವೇ ಹೀಗೆ ಮಾತನಾಡಿಬಿಟ್ಟರೆ ಹೇಗೆ? ಸಿ.ಎಂ. ಅವರೇ ಓಡಿ ಹೋಗುತ್ತಾರೆಂದು ಹೇಳಿದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: Third Floorಗೆ ತೆಗೆದುಕೊಂಡು ಹೋಗುತ್ತಾರೆಂದು ಹೇಳಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಓಡಿ ಹೋಗುತ್ತಾರೆಂದು ಹೇಳಿದಿರಲ್ಲ, ಅದಕ್ಕೋಸ್ಕರ ಹೇಳಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅಧ್ಯಕ್ಷರೆ, ನಾನು ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟಂತೆ ಚರ್ಚೆ ಪ್ರಾರಂಭಿಸಿದ್ದು, ಬಿಜೆಪಿಯ ಪ್ರಣಾಳಿಕೆಯಲ್ಲಿ ವಿದ್ಯಾವಂತ ಯುವಕರಿಗೆ 1,500 ರೂಪಾಯಿಗಳವರೆಗೆ ನಿರುದ್ಯೋಗ ಭತ್ಯೆ ಕೊಡುತ್ತೇವೆಂಬ ಒಂದು ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದಾರೆ. ಆದರೆ, ಬಜೆಟಿನಲ್ಲಿ ಅದರ ಬಗ್ಗೆ ಯಾವುದೇ ರೀತಿಯ ಚಕಾರ ಇಲ್ಲ. ಒಂದು ಕೌಶಲ್ಯ. ತರಬೇತಿ ಕಾರ್ಯಕ್ರಮವೆಂದು ಏನೋ ಹೇಳಿಕೊಂಡಿದ್ದಾರೆ. ನಾವು ಮುಖ್ಯಮಂತ್ರಿಗಳಾಗಿದ್ದಾಗಲೇ ನಮ್ಮಲ್ಲಿ ಹಳೆಯ ಕೈಗಾರಿಕಾ ಸಚಿವರು ಅರ್ಜಿಗಳನ್ನು ತೆಗೆದುಕೊಂಡರು. ಆದರೆ, ಎಷ್ಟು ಜನರಿಗೆ ಉದ್ಯೋಗ ಸಿಕ್ಕಿದೆ ಎಂಬುದು ನನಗೂ ಗೊತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: Coffee plantationನಲ್ಲಿ workers ಕೊರತೆ ಇದೆ. ಅದಕ್ಕೋಸ್ಕರ, ಅಲ್ಲಿಗೆ trainingಗೆ ಕಳುಹಿಸಿ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಯಾವ ದೃಷ್ಟಿಯಿಂದ ಹೇಳಿದೆನೆಂದರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ವರ್ಷಗಳಿಂದ ಕೈಗಾರಿಕೆಗೆ ಸಂಬಂಧಪಟ್ಟಂತೆ ದೊಡ್ಡ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡತಕ್ಕಂಥವರು, ಸಾವಿರಾರು ಕೋಟಿ ರೂಪಾಯಿಗಳಷ್ಟು ಬಂಡವಾಳ

ಹೂಡುತ್ತೇವೆಂಬ ಹೆಸರಿನಲ್ಲಿ ಏನು ಬರುತ್ತಾರೆ, ಅವರು ಹಾಗೆ ಬಂದಂತಹ ಸಂದರ್ಭದಲ್ಲಿ ಅವರು ನಮ್ಮ ಮುಂದೆ ಏನು ಅರ್ಜಿ ಕೊಟ್ಟಿರುತ್ತಾರೆಂದರೆ, ಅರ್ಜಿಯಲ್ಲಿ ಅವರು 15–20 ವರ್ಷಗಳ ಅವಧಿಯಲ್ಲಿ ನಮ್ಮ ಪ್ರಾಜೆಕ್ಟ್‌ಗಳನ್ನು ಸಂಪೂರ್ಣಗೊಳಿಸುತ್ತೇವೆಂಬ ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ. ಆದರೆ, 50 ಎಕರೆ, 100 ಎಕರೆ, 200 ಎಕರೆ, 300 ಎಕರೆ, 400 ಎಕರೆಗಳಷ್ಟು ಜಮೀನನ್ನು industry set-upಗಾಗಿ ಬೇಕೆಂದು ಏನು ಕೇಳುತ್ತಾರೆ, ಹಿಂದೆ ಆಗಿರುವ ಹಲವಾರು ಘಟನೆಗಳಲ್ಲಿ 50 ಎಕರೆ, 100 ಎಕರೆಗಳಷ್ಟು ಜಾಗ ಪಡೆದಂತಹವರು 10–15 ಎಕರೆಗಳಲ್ಲಿ ಸಣ್ಣ ಒಂದು industry ತೋರಿಸುತ್ತಾರೆ, ಉಳಿದ ಜಮೀನಿಗೆ compound ಹಾಕಿ vacant ಜಾಗಗಳನ್ನಾಗಿ ಇಟ್ಟುಕೊಂಡಿದ್ದಾರೆ. ಆ ರೀತಿಯ ಹಲವಾರು ಪ್ರಸಂಗಗಳನ್ನು ನಮ್ಮ ರಾಜ್ಯದಲ್ಲಿರುವುದನ್ನು ನೋಡಿರುವುದರಿಂದ ನಾನು ಈ ವಿಷಯವನ್ನು ಪ್ರಸ್ತಾಪಿಸಿದ್ದು.

10 ಲಕ್ಷ ಯುವಕರಿಗೆ ಉದ್ಯೋಗ ಕೊಡುತ್ತೇವೆಂಬ ಮಾತುಗಳನ್ನು ನಾವು ಒಂದು ಕಡೆ ಹೇಳುತ್ತೇವೆ. ಕೋಟ್ಯಾಂತರ ರೂಪಾಯಿ ಬಂಡವಾಳ ಹರಿದು ಬರುತ್ತಿದೆ ಎನ್ನತಕ್ಕಂಥಾದ್ದನ್ನೂ ಹೇಳುತ್ತಿದ್ದೇವೆ. ಅದರ ಜೊತೆಗೆ, ಈಗ ಹೊಸ ಸರ್ಕಾರದಲ್ಲಿ ಅದ್ಯಾವುದೋ ಅನಿವಾಸಿ ಭಾರತೀಯರ co-ordinationಗೆಂದು ಹೊಸದಾಗಿ ಸೆಲ್‌ವೊಂದನ್ನು set-up ಮಾಡುವುದಕ್ಕೆ ಹೊರಟಿದ್ದಾರೆ. ನಾವು 20 ತಿಂಗಳ ಆಡಳಿತದಲ್ಲಿ, ಇವೆಲ್ಲಾ ಅನುಭವವನ್ನು ಪಡೆದುಕೊಂಡಿರುವುದರಿಂದ ಅದರಲ್ಲಿ ಎಷ್ಟರಮಟ್ಟಿಗೆ ನಾವು ಯಶಸ್ವಿಯಾಗಬೇಕೆಂಬ ದೃಷ್ಟಿಯಿಂದ ಈ ವಿಷಯವನ್ನು ನಾನು ಪ್ರಸ್ತಾಪಿಸಿದ್ದೇನೆ. ಅವರ ಜೊತೆಯಲ್ಲಿ ಸೇರಿ ತೀರ್ಮಾನ ತೆಗೆದುಕೊಂಡಿದ್ದೇವೆ. ಇಬ್ಬರೂ ಸೇರಿಯೇ ತೆಗೆದುಕೊಂಡಿದ್ದೇವೆ. ಆದುದರಿಂದ, ನಾನು High Power Committeeಯ chairman ಆಗಿ ಕೆಲಸ ಮಾಡಿದ್ದರೂ, High Power Committeeಯಲ್ಲಿ ತೆಗೆದುಕೊಂಡಿರುವ ನಿರ್ಧಾರಗಳಿಗೆ ಅವರೊಬ್ಬರೇ ಪಾಲುದಾರರಾಗುವುದಿಲ್ಲ, ನಾನೂ ಆಗಬೇಕಾಗುತ್ತದೆ.

ಮೊನ್ನೆ ರೇವಣ್ಣನವರು ಮಾತನಾಡಬೇಕಾದರೆ, ಪಾಪ, ಶಿವಕುಮಾರ್‌ರವರು ಏನೋ ಖುಷಿಯಿಂದ ಎದ್ದು ನಿಂತು, ಇಲ್ಲ, ಮಾತನಾಡಿ ಎಂದು ಅವರಿಗೆ encourage ಮಾಡುತ್ತಿದ್ದರು. ಪಾಪ! ಅವರಿಗೆ ಎಲ್ಲಿಯಾದರೂ ಕುಮಾರಸ್ವಾಮಿಯವರಿಗೆ ಸಂಬಂಧಪಟ್ಟಿದ್ದು ಏನಾದರೂ ಇದ್ದರೆ ತೆಗೆಯುವುದಕ್ಕೆ ಸಾಧ್ಯವೇ ನೋಡೋಣ ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದ್ದಾರೋ, ಅಥವಾ ಇನ್ಯಾವುದಕ್ಕೆ ಹೇಳಿದ್ದಾರೋ ನನಗೆ ಗೊತ್ತಿಲ್ಲ.

ಶ್ರೀ ಹೆಚ್.ಸಿ. ಮಹದೇವಪ್ಪ: ನೀವು ಈ ಕಡೆ ಬೇಂಚ್‌ಗೆ ಬಂದಿರುವುದರಿಂದ ಪ್ರೀತಿ ಜಾಸ್ತಿಯಾಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಹೌದು ಪ್ರೀತಿ ಜಾಸ್ತಿಯಾಗಿದೆ. ನನ್ನಲ್ಲಿ ಯಾವುದೇ ರೀತಿಯ ಆತಂಕವಿಲ್ಲ. ಯಾವುದೇ ರೀತಿಯ ತೀರ್ಮಾನ ಸದನ ಮಾಡುವುದಕ್ಕೆ ತಯಾರಾಗಿದ್ದರೆ ಅದಕ್ಕೆ ನನ್ನ ಸಂಪೂರ್ಣವಾದ ಒಪ್ಪಿಗೆ ಇದೆ ಎಂಬುದನ್ನು ತಮ್ಮ ಮುಂದೆ ಹೇಳಲು ಬಯಸುತ್ತಿದ್ದೇನೆ. ಸುವರ್ಣ ಗ್ರಾಮೋದಯ ಕಾರ್ಯಕ್ರಮದ ವಿಚಾರವಾಗಿ ಏನು 300 ಕೋಟಿ ಇಟ್ಟಿದ್ದೀರಿ, ಮಾನ್ಯ ಚಿಕ್ಕನಗೌಡರ್‌ರವರು ಬರಲಿಲ್ಲವೆಂದು ಕಂಡುಬರುತ್ತದೆ. ನಾನು ಸದನದ ಒಳಕ್ಕೆ ಬರಬೇಕಾಗಿದ್ದರೆ ಅವರು ಮೊನ್ನೆ ಪ್ರಸ್ತಾಪ ಮಾಡುತ್ತಿದ್ದರು. ಕುಮಾರಸ್ವಾಮಿಯವರು ಗ್ರಾಮ ವಾಸ್ತವ್ಯ ಕಾರ್ಯಕ್ರಮ ಮಾಡಿದರು ಅದರಲ್ಲಿ ಏನಿತ್ತು? ಏನೂ ಕೆಲಸ ಆಗಲಿಲ್ಲವೆಂದು ಹೇಳಿದರು. ಕಳೆದ ಬಜೆಟ್‌ನಲ್ಲಿ ನಮ್ಮ ಈಗಿನ ಮುಖ್ಯಮಂತ್ರಿಯವರೇ ಒಂದು ಮಾತನ್ನು ಹೇಳಿದ್ದಾರೆ. ಸುವರ್ಣ ಗ್ರಾಮೋದಯ ಕಾರ್ಯಕ್ರಮವನ್ನು ಮಾಡುವುದಕ್ಕೆ ನಿರ್ಧಾರ ಮಾಡಿದ್ದು ಮುಖ್ಯಮಂತ್ರಿಯವರೇನು ಗ್ರಾಮವಾಸ್ತವ್ಯ ಕಾರ್ಯಕ್ರಮವನ್ನು ಮಾಡುವ ಮೂಲಕ ಸರ್ಕಾರ ಬಡವರ ಪರವಾಗಿ, ಗ್ರಾಮಾಂತರ ಪ್ರದೇಶದ ಜನರ ಪರವಾಗಿ ಹತ್ತಿರದಲ್ಲಿ ಇದ್ದೇವೆ ಎನ್ನತಕ್ಕ ಭಾವನೆ ಮೂಡಿಸಲು ಹೊರಟಿದ್ದಾರೆ, ಇದು ಒಳ್ಳೆಯ ಕಾರ್ಯಕ್ರಮ. ದೇಶದಲ್ಲೇ ಒಂದು ವಿನೂತನವಾದ ಕಾರ್ಯಕ್ರಮ. ಈ ಕಾರ್ಯಕ್ರಮ 1200 ಹಳ್ಳಿಗಳ ಮೊದಲನೆಯ ಹಂತದಲ್ಲಿ ಅಭಿವೃದ್ಧಿಗೆ ಕೆಲಸ ಪ್ರಾರಂಭ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಕಳೆದ ಬಜೆಟ್‌ನಲ್ಲಿ ಅವರೇ ಹೇಳಿದ್ದಾರೆ. ಕಳೆದ ಬಾರಿ ಹಾವೇರಿ ಗಲಾಟೆ ವಿಚಾರ ಬಂದಾಗ ಅವರು ಪ್ರಸ್ತಾಪ ಮಾಡಿದರು. ಇವತ್ತು ಗ್ರಾಮಾಂತರ ಪ್ರದೇಶಕ್ಕೆ, ಹಳ್ಳಿಗಳಿಗೆ ಭೇಟಿ ಕೊಡುವ ತೀರ್ಮಾನವೇನು ಮಾಡಿದೆ ಆ ಸಂದರ್ಭದಲ್ಲಿ ಆದ ಒಂದು ಘಟನೆಯನ್ನು ನೆನಪಿಸಿಕೊಳ್ಳಬಯಸುತ್ತೇನೆ. ಇವತ್ತು ಹೃದ್ರೋಗಿ ಬಾಲಕಿಗೆ ಕುಮಾರಸ್ವಾಮಿ ಅನುಗ್ರಹ ಎಂದು ಆರ್ಟಿಕಲ್ ಇದೆ. ದಲಿತ ಸಮಾಜಕ್ಕೆ ಸೇರಿದ ಒಂದು ಮಗು ಬಗ್ಗೆ ನಾನು ಹಳ್ಳಿಗೆ ಹೋದಾಗ ನನ್ನ ಗಮನಕ್ಕೆ ತಂದಂಥ ಘಟನೆ ಏನಿದೆ, ಆ ಮಗುವಿಗೆ ಚಿಕಿತ್ಸೆ ಮಾಡಲು ಯಾರೂ ಇಲ್ಲ. ಆ ಮಗುವಿಗೆ ತಂದೆ ಇಲ್ಲ. ತಾಯಿ ಮಾತ್ರ ಇದ್ದಾರೆ. ಅವರು ಮಗುವನ್ನು ಕರೆದುಕೊಂಡು ಅನುಗ್ರಹದಲ್ಲಿ, ಸರ್ಕಾರಿ ಬಂಗಲೆಯಲ್ಲಿ ಒಂದು ರಾತ್ರಿ ತಂಗಲು ಅವಕಾಶ ಮಾಡಿಕೊಟ್ಟು ಆ ಹೆಣ್ಣುಮಗುವಿಗೆ ಎಲ್ಲಾ ರೀತಿಯ ಸೌಕರ್ಯವನ್ನು ಕಲ್ಪಿಸಿಕೊಟ್ಟೆ. ಇವತ್ತು ಗೋವಿಂದಕಾರಜೋಳ್‌ರವರು ಇದ್ದಾರೆ. ಅವರ ಕ್ಷೇತ್ರದಲ್ಲಿ ಎರಡು ಬಾರಿ ಗ್ರಾಮ ವಾಸ್ತವ್ಯ ಮಾಡಿದ್ದೆ. ಒಂದು ಬಾರಿ

ಗ್ರಾಮವಾಸ್ತವ್ಯಕ್ಕೆ ಹೋದಂಥ ಸಂದರ್ಭದಲ್ಲಿ ದೇವದಾಸಿ ಕುಟುಂಬದಲ್ಲಿ ಹುಟ್ಟಿದಂಥ ಒಬ್ಬ ಹೆಣ್ಣುಮಗಳು, ಎಂ.ಎ. ಪದವೀಧರಳಾಗಿ ಅಂತರ್ಜಾತಿ ಮದುವೆಯಾದಾಗ ಸರ್ಕಾರದಿಂದ ಏನು ಹಣವನ್ನು ಕೊಡಬೇಕು ಆ 25 ಸಾವಿರ ರೂಪಾಯಿ ಹಣವನ್ನು ಕೊಟ್ಟಿರಲಿಲ್ಲ. ಆ ವಿಷಯವನ್ನು ನನ್ನ ಗಮನಕ್ಕೆ ಆ ಹೆಣ್ಣುಮಗಳು ತಂದಾಗ ತಕ್ಷಣವೇ ಅಧಿಕಾರಿಗಳಿಗೆ ಆ 25 ಸಾವಿರ ರೂಪಾಯಿ ಹಣವನ್ನು ಕೊಡುವ ಬಗ್ಗೆ ಸೂಚನೆ ಕೊಟ್ಟು ಜೊತೆಗೆ ಆ ಹೆಣ್ಣು ಮಗಳಿಗೆ ತಾತ್ಕಾಲಿಕವಾಗಿ ಮುಖ್ಯಮಂತ್ರಿಯವರ ಕಛೇರಿಯಲ್ಲೇ ಹುದ್ದೆಯನ್ನು ಕೊಟ್ಟಿದ್ದೆ. ಎಂ.ಎ. ಪದವಿಯನ್ನು ಮಾಡಿದ್ದಾಳೆ, ಒಬ್ಬಳು ದೇವದಾಸಿ ಹೊಟ್ಟೆಯಲ್ಲಿ ಹುಟ್ಟಿರತಕ್ಕವಳು. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಹೆಣ್ಣುಮಕ್ಕಳ ಬಗ್ಗೆ ಬಹಳ ವಿಶೇಷವಾದ ಕಾಳಜಿಯನ್ನು ಕೊಟ್ಟಿದ್ದೇವೆ, ಭಾಗ್ಯಲಕ್ಷ್ಮಿ ಯೋಜನೆಯನ್ನು ತಂದಿದ್ದೇವೆ ಎಂದೆಲ್ಲಾ ಹೇಳುತ್ತಾರೆ. ಆದರೆ, ಇವತ್ತು ಆ ಹೆಣ್ಣುಮಗಳ ಬದುಕು ಏನಾಗಿದೆ? ನಾನು ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸಿದ ನಂತರ ರಾಜ್ಯಪಾಲರ ಆಡಳಿತದಲ್ಲೂ ಆ ಹೆಣ್ಣುಮಗಳು ಕಣ್ಣೀರು ಹಾಕಿ ಹೋದಾಗ ಅವರೂ ಅಲ್ಲಿ ಉದ್ಯೋಗವನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಅನುಮತಿ ಕೊಟ್ಟಿದ್ದರು. ಆದರೆ, ಈ ಸರ್ಕಾರದಲ್ಲಿ ಅಲ್ಲಿ ಆ ಹೆಣ್ಣುಮಗಳೇನು ಕೆಲಸ ಮಾಡುತ್ತಿದ್ದಳು ಅವಳನ್ನು ಅಲ್ಲಿಂದ ಇವತ್ತು ಆಚೆಗೆ ಹಾಕಿದ್ದಾರೆ. ಅದರ ಜೊತೆಗೆ ಅವರ ಪ್ರಧಾನ ಕಾರ್ಯದರ್ಶಿಯವರು ಹೇಳುತ್ತಾರೆ, ಇಲ್ಲಿಯವರೆಗೆ ನೀವು ತಿಂದಿರುವುದೇ ಸಾಕು ಖಾಲಿಮಾಡಿಕೊಂಡು ಹೋಗಿ ಎಂಬ ಉದ್ಧಟತನದ ಮಾತನ್ನು ಆಡಿದ್ದಾರೆ. ಇದು ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡುತ್ತಿರುವ ಸರ್ಕಾರ! ಹೆಣ್ಣುಮಕ್ಕಳಿಗೆ ಮುಖ್ಯಮಂತ್ರಿಯವರು ಕೊಡುತ್ತಿರತಕ್ಕ ಭಾರಿ ಬಳುವಳಿಗಳು. ಇವತ್ತೇನು ಸುವರ್ಣ ಗ್ರಾಮೋದಯ ಕಾರ್ಯಕ್ರಮವನ್ನು ತಂದಿದ್ದೇವೆ ಇದಕ್ಕೆ ಕೇವಲ 300 ಕೋಟಿಯನ್ನು ತೋರಿಸುತ್ತಿದ್ದೀರಿ, ಇವತ್ತು ಶಾಸಕರುಗಳೆಲ್ಲರಿಗೂ ಆ ಸುವರ್ಣ ಗ್ರಾಮೋದಯದ ಮೂಲಕ ಆ ಹಳ್ಳಿಯಲ್ಲಿ ಹೆಚ್ಚಿನ ಪರಿಣಾಮಕಾರಿಯಾಗಿ ಶಾಶ್ವತವಾದ ಕಾರ್ಯಕ್ರಮವನ್ನು ಮಾಡಲು ಸಾಧ್ಯವಿದೆ. ಆ ಹಣವನ್ನು ಸ್ವಲ್ಪ ದ್ವಿಗುಣಗೊಳಿಸತಕ್ಕದ್ದು, ಆ ಕಾರ್ಯಕ್ರಮವನ್ನು ವಿಸ್ತರಣೆ ಮಾಡಿ ಹಂತ ಹಂತವಾಗಿ 28 ಸಾವಿರ ಹಳ್ಳಿಗಳಿಗೂ ಈ ರಾಜ್ಯದಲ್ಲಿ ಆ ಕಾರ್ಯಕ್ರಮ ಯಶಸ್ವಿಯಾಗುವುದಕ್ಕೆ ಗಮನವನ್ನು ಕೊಡಬೇಕು ಎಂಬ ಮಾತನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರಬಯಸುತ್ತಿದ್ದೇನೆ.

ಇವತ್ತು ನಂಜುಂಡಪ್ಪ ವರದಿಯ ವಿಷಯದಲ್ಲಿ ಕಳೆದ ಎರಡು ವರ್ಷದಿಂದ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದಕ್ಕೆ ಈಗ ನೀವೇನು ಹಣವನ್ನು ಇಟ್ಟಿದ್ದೀರಿ, ಎಷ್ಟು ಹಣವನ್ನು ಇಟ್ಟಿದ್ದೀರಿ ಎಂದು ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

ಆದರೆ, ಯಾವ ರೀತಿ ನಂಜುಂಡಪ್ಪನವರ ವರದಿಯಲ್ಲಿ ಹಿಂದುಳಿದಿರತಕ್ಕ ತಾಲ್ಲೂಕುಗಳನ್ನು ಗುರುತಿಸಿದ್ದಾರೆ, ಅವುಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಸಮರ್ಪಕವಾಗಿ ಗುಣಾತ್ಮಕವಾದ ಕಾಮಗಾರಿಗಳು ಆಗುವುದಕ್ಕೆ ಸರ್ಕಾರ ಗಮನ ಕೊಡಬೇಕಾಗುತ್ತದೆ, ಕೊಟ್ಟಂತ ಹಣ ಸರಿಯಾಗಿ ವಿನಿಯೋಗ ಆಗುವುದಕ್ಕೆ ಅವಕಾಶವನ್ನು ಕಲ್ಪಿಸಬೇಕು ಎಂಬ ಮಾತನ್ನು ಹೇಳುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಅಂದು ಹಣಕಾಸು ಸಚಿವರಾಗಿ ಏನು ಬಜೆಟ್ ಅನ್ನು ಮಂಡನೆ ಮಾಡಿದರು, ಆ ಸಂದರ್ಭದಲ್ಲಿ ನಾನು ಗಮನಿಸಿದ್ದೇನೆ, ಇವತ್ತು ನಾವು ಕೊಡತಕ್ಕ ಹಣ ನೂರಕ್ಕೆ 25 ಪೈಸೆ ಖರ್ಚು ಆಗುವುದಿಲ್ಲವೆಂದು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಯವರು ಆವತ್ತು ಏನು ಈ ಜಾಗದಲ್ಲಿ ಕುಳಿತು ಭಾಷಣ ಮಾಡಿದ್ದೀರಿ ಅದನ್ನು ಸಧ್ಯಕ್ಕೆ ಓದಲು ಹೋಗುವುದಿಲ್ಲ. ಬಹಳ ದೊಡ್ಡ ಮಟ್ಟದಲ್ಲಿ ಚರ್ಚೆ ಮಾಡಿದ್ದೀರಿ. 10–12 ವರ್ಷಗಳ ನಂತರವೂ ಸರ್ಕಾರದ ಕಾರ್ಯಕ್ರಮಗಳಿಗೆ ಪ್ರಾಮಾಣಿಕವಾಗಿ ಇವತ್ತು ಸದ್ವಿನಿಯೋಗ ಆಗತಕ್ಕ ಹಣ ಎಷ್ಟು ಪರ್ಸೆಂಟೇಜ್ ಎಂಬುದನ್ನು ಮುಖ್ಯಮಂತ್ರಿಯಾಗಿ ಅಲ್ಲೇನು ಕೆಲಸ ಮಾಡುತ್ತಿದ್ದೀರಿ.., ಇಲ್ಲಿ ಕುಳಿತಿದ್ದಾಗ ನಿಮ್ಮ ಗಮನಕ್ಕೇನು ಆವತ್ತು ಇತ್ತು, ಸರಿಯಾದ ರೀತಿಯಲ್ಲಿ ಸರ್ಕಾರ ಕೆಲಸ ಮಾಡುವುದರಲ್ಲಿ ಯಶಸ್ವಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ ಎಂದು ಬಹಳ ಭಾಷಣವನ್ನೇನು ಮಾಡಿದ್ದೀರಿ, ಬಹಳ ದೊಡ್ಡ ಮಟ್ಟದ ನಿಮ್ಮ ಪದಗಳೇನಿದೆ ಅದರ ಕಡೆ ಗಮನ ಕೊಡಬೇಕೆಂದು ಹೇಳಬಯಸುತ್ತೇನೆ. ನಾನು ಉತ್ತರ ಕರ್ನಾಟಕದ ಹಲವಾರು ಭಾಗಗಳಲ್ಲಿ ಪ್ರವಾಸ ಮಾಡಿದ್ದೇನೆ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಹೋದಂಥ ಎಲ್ಲಾ ಕಡೆ ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಸಂಚಾರಿ ಪೀಠದ ಉದ್ಘಾಟನೆಗೆ ಹೋದಾಗ ಅಲ್ಲಿ ನಾನು ಹುಬ್ಬಳ್ಳಿ ಧಾರವಾಡ ಜಿಲ್ಲೆಗೆ ಎರಡೂವರೆ ಸಾವಿರ ಕೋಟಿ ಹಣವನ್ನು ವಿನಿಯೋಗ ಮಾಡುತ್ತೇನೆ ಎಂಬ ಮಾತನ್ನು ಹೇಳುತ್ತಾರೆ. ಗುಲ್ಬರ್ಗಾಕ್ಕೆ ಹೋಗುತ್ತಾರೆ ಅಲ್ಲಿ ಎರಡೂವರೆ ಸಾವಿರ ಕೋಟಿಯನ್ನು ಇಲ್ಲಿ ವಿನಿಯೋಗ ಮಾಡುತ್ತೇನೆ ಎಂಬ ಮಾತನ್ನು ಹೇಳಿದ್ದಾರೆ. ಅಲ್ಲಿಂದ ಬೆಳಗಾವಿಗೆ ಹೋಗುತ್ತಾರೆ ಅಲ್ಲಿ ಸಹ ಎರಡೂವರೆ ಸಾವಿರ ಕೋಟಿ ರೂಪಾಯಿಯ ಕಾಮಗಾರಿಗೆ ಚಾಲನೆ ಕೊಡುತ್ತೇನೆಂದು ಹೇಳುತ್ತಾರೆ. ಇದನ್ನು ಹೊಸದಾಗಿ ಮುಖ್ಯಮಂತ್ರಿಗಳಾಗಿ ಹೇಳಿದ್ದಾರೆ. ಅದಕ್ಕೆ ನಾನು ಸಂತೋಷಪಟ್ಟೆ. ಈಗಲಾದರೂ ಉತ್ತರ ಕರ್ನಾಟಕ ಭಾಗದ ಜನರ ಭಾಗ್ಯದ ಬಾಗಿಲು ತೆರೆಯಿತಲ್ಲಾ ಎಂದು ಸಂತೋಷ ಪಟ್ಟೆ. ಮುಖ್ಯಮಂತ್ರಿಯವರು ಪ್ರತಿ ಜಿಲ್ಲೆಗೆ ಎರಡೂವರೆ ಸಾವಿರ ಕೋಟಿ ಎರಡೂವರೆ ಸಾವಿರ ಕೋಟಿ ಕಾರ್ಯಕ್ರಮವನ್ನು ಕೊಡಲು ತೀರ್ಮಾನ ಮಾಡಿದ್ದು ನಿಜಕ್ಕೂ ಇಲ್ಲಿಯ 60

ವರ್ಷಗಳ ಆ ಭಾಗದ ಜನರ ಏನು ಕೂಗಿತ್ತು ಅದಕ್ಕೆ ಇವತ್ತು ಅಂತಿಮವಾದ ನಿರ್ಣಯವನ್ನು ಕೊಟ್ಟು ಆ ಕೂಗಿಗೆ ಸ್ಪಂದಿಸಿದ್ದಾರೆ ಎಂಬ ಭಾವನೆ ಮೂಡಿಸುವಲ್ಲಿ ಯಶಸ್ವಿಯಾಗಿದ್ದೀರಿ, ಯಾವ ರೀತಿ ಹಣವನ್ನು ವಿನಿಯೋಗ ಮಾಡುತ್ತೀರಿ ಎಂದು ಈ ಸಂದರ್ಭದಲ್ಲಿ ತಾವು ಹೇಳಬೇಕೆಂದು ಕೇಳಬಯಸುತ್ತೇನೆ. ನೀರಾವರಿ ವಿಚಾರದ ಬಗ್ಗೆ ಚರ್ಚೆ ಮಾಡಬೇಕೆಂದರೆ, ಒಂದು ಕಡೆ ಮಾನ್ಯ ಖರ್ಗೆಯವರು, ಸಿದ್ದರಾಮಯ್ಯನವರು ಹೇಳಿದಂತೆ 13 ಪರ್ಸೆಂಟ್‌ನಷ್ಟು ಹಣವನ್ನು ಕೊಡುವುದರಲ್ಲಿ ಈ ಸಲ ಕಡಿಮೆ ಮಾಡಿದ್ದೀರಿ. ನೀರಾವರಿ ನಿಗಮಗಳೇನಿದೆ ಈ ಮೂರು ನಿಗಮಗಳಿಂದ ಕಳೆದ ವರ್ಷದ್ದು ಎಷ್ಟು ಪೆಂಡಿಂಗ್ ಬಿಲ್ಲುಗಳು ಇದೆ? ನನಗೆ ತಿಳಿದಿರುವ ಮಾಹಿತಿ ಪ್ರಕಾರ 650 ಕೋಟಿ ರೂಪಾಯಿಯ ಪೆಂಡಿಂಗ್ ಬಿಲ್ಲುಗಳು ಇದೆ. ಈಗ ಕಳೆದ ವರ್ಷ ಪೆಂಡಿಂಗ್ ಬಿಲ್ಲನ್ನೇ ಕ್ಲಿಯರ್ ಮಾಡುತ್ತೀರೊ, ಇಲ್ಲ ಹೊಸದಾಗಿ ನೀರಾವರಿ ಯೋಜನೆಗಳನ್ನು ಪ್ರಾರಂಭ ಮಾಡುತ್ತೀರೊ ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ನಾನು ಎರಡು ತಿಂಗಳಿನಿಂದ ಮಾತ್ರ ಅಧಿಕಾರದಲ್ಲಿ ಇದ್ದೇನೆಂದು ಈಗ ಹೇಳಲು ಆಗುವುದಿಲ್ಲ. ಕಳೆದ 20 ತಿಂಗಳು ಈಗಾಗಲೇ ಎರಡು ಬಜೆಟ್‌ಗಳನ್ನು ಈ ಸದನದಲ್ಲಿ ಮಂಡನೆ ಮಾಡಿದ್ದಾರೆ, ಮೂರನೇ ಬಜೆಟ್ ಅನ್ನು ಈಗ ಏನು ಮಂಡನೆ ಮಾಡಿದ್ದೀರಿ, ಇವತ್ತು ನಾನು ಮುಖ್ಯಮಂತ್ರಿಯವರಿಗೆ ಕೇಳಬಯಸುತ್ತೇನೆ. ಇವತ್ತು ನೀವು ಏನು ಅನುದಾನ ಇಟ್ಟಿದ್ದೀರಿ ನಿಜಕ್ಕೂ ನೀರಾವರಿ ಯೋಜನೆಗಳನ್ನು ಸರಿಯಾದ ಸಮಯಕ್ಕೆ ಸದ್ಬಳಕೆ ಮಾಡಿಕೊಳ್ಳುವುದಕ್ಕೆ, ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ನಿಮ್ಮ ಕೈಯಲ್ಲಿ ಸಾಧ್ಯವಾಗುತ್ತದೆಯೆ? ಈ ರೀತಿಯ ತೀರ್ಮಾನಗಳನ್ನು ಈ ರೀತಿಯ ಅನುದಾನಗಳನ್ನು ಕೊಟ್ಟಾಗ ಎನ್ನತಕ್ಕ ಮಾತನ್ನು ಕೇಳಲು ಬಯಸುತ್ತೇನೆ. ಆವತ್ತು ಈ ಭಾಗದಲ್ಲಿ ಕುಳಿತು ಚರ್ಚೆಮಾಡಬೇಕಾಗಿದ್ದರೆ ಯಾರೂ ಅನ್ಯಥಾ ಭಾವಿಸುವುದು ಬೇಕಾಗಿಲ್ಲ. ಕೆಲವು ವಿಷಯಗಳನ್ನು ಸದನದ ಗಮನಕ್ಕೆ ನಾನು ತರಬೇಕಾಗುತ್ತದೆ. ಆವತ್ತು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ಕೆಲಸ ಮಾಡುತ್ತಿದ್ದರು. ಅವರು ಹೇಳಿದ್ದಾರೆ. ಸನ್ಮಾನ್ಯ ಅವತ್ತಿನ ಮುಖ್ಯಮಂತ್ರಿಯವರು ಗುಲ್ಬರ್ಗಾದಲ್ಲಿ ಒಂದು ಭಾಷಣ ಮಾಡಿದ್ದಾರೆ. ಇನ್ನು ಮುಂದೆ ಕೃಷ್ಣ ಬೇಸಿನ್‌ನ ನೀರನ್ನು ಉಪಯೋಗ ಮಾಡುವುದಕ್ಕೆ ವರ್ಷಕ್ಕೆ ಸಾವಿರ ಕೋಟಿ ರೂಪಾಯಿಯ ಹಣವನ್ನು ನಮ್ಮ ಸರ್ಕಾರ ಇವತ್ತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ವಿನಿಯೋಗ ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಡಿಸೆಂಬರ್ 11ನೇ ತಾರೀಕು ಅವರು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕಾರ ಮಾಡಿದ ನಂತರ ಅವರೇನು ಗುಲ್ಬರ್ಗಾದ ಪ್ರವಾಸದಲ್ಲಿದ್ದಾಗ ಆ ವಿಷಯವನ್ನು ಹೇಳಿದಾಗ ಆವತ್ತಿನ

ಆಯವ್ಯಯದಲ್ಲಿ 500 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಡಿರತಕ್ಕ, ಅನುದಾನವನ್ನು ಇಟ್ಟಿರತಕ್ಕ ವಿಷಯವನ್ನು ಆಯವ್ಯಯದಲ್ಲಿ ಸಿದ್ದರಾಮಯ್ಯನವರು ಹೇಳಿದಾಗ, ನೀವು ಇಲ್ಲಿ ಕುಳಿತುಕೊಂಡು ಭಾಷಣ ಮಾಡಿದ್ದೀರಿ. ಆದರೆ, ಇಲ್ಲಿ ಅದನ್ನು 500 ಕೋಟಿಗೆ ಇಳಿಸಿದ್ದೀರಿ.

ಇವತ್ತು ನಿಮ್ಮ ಸರ್ಕಾರ ನೀರಾವರಿಗೆ ನಿಜವಾದ ಬದ್ಧತೆ ತೋರಿಸಿಲ್ಲ, ಈ ವಿಷಯಗಳನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ. ನಾನು ಕೆಲವು ವಿಷಯಗಳನ್ನು ಈ ಸದನದಲ್ಲಿ ಹೇಳಬೇಕಾಗುತ್ತದೆ. ಇವತ್ತು ಯಾವ್ಯಾವ ಕಾಲದಲ್ಲಿ ಯಾವ ರೀತಿಯಾಗಿ ಹಣದ ವಿನಿಯೋಗವಾಗಿದೆ ಎಂಬುದನ್ನು ಸ್ಮರಿಸಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಇವತ್ತು ನಾನು ಕೆಲವು ವಿಷಯಗಳನ್ನು ಈ ಸದನದ ಮುಖಾಂತರ ನೀರಾವರಿ ವಿಷಯದಲ್ಲಿ ಯಾವ್ಯಾವ ರೀತಿಯ ಕಾಮಗಾರಿಗಳಿಗೆ ಯಾವ್ಯಾವ ಸರ್ಕಾರಗಳು ಇವತ್ತು ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿದ್ದಾರೆ ಎಂಬ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರಲ್ಲಿ ನಾನು ಮನವಿ ಮಾಡುತ್ತೇನೆ. ಯಾರೂ ಕೂಡ ಅನ್ಯಥಾ ಭಾವಿಸಬಾರದು ಎಂಬ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಅವತ್ತು 1962ರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಬಂದು ಈ ಕಾಮಗಾರಿಗೆ ಶಂಕು ಸ್ಥಾಪನೆಯನ್ನು ನೆರವೇರಿಸಿದರು. 1995ರಲ್ಲಿ ಇಂದಿನ ಸನ್ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಏನಿದೆ ಎಂಬುದನ್ನು ಓದಿ ಹೇಳುತ್ತೇನೆ.

"ಮಾನ್ಯ ಅಧ್ಯಕ್ಷರೆ, ಕೆಲವು ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳಿಂದ ಸ್ಪಷ್ಟೀಕರಣ ಪಡೆಯಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದ ಸಂದರ್ಭದಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳನ್ನು ನೋಡಿದರೆ, ಬಹುಶಃ ಲಕ್ಷ ಕೋಟಿ ರೂಪಾಯಿಗಳಿಗೂ ಮೀರಿದ ಕಾರ್ಯಕ್ರಮಗಳನ್ನು ತಾವು ಘೋಷಿಸಿದ್ದೀರಿ. ನಿಮ್ಮ ಭಾಷಣದ ವರದಿಯನ್ನು ನಾಳೆ ರಾಜ್ಯದ ಜನರು ಓದಿದರೆ ಕರ್ನಾಟಕ ರಾಜ್ಯ ನಂದನವನ ಆಗಿ ಬಿಡುತ್ತದೆ ಎಂಬ ಭ್ರಮೆಯಲ್ಲಿರುವ ಪರಿಸ್ಥಿತಿ ಖಂಡಿತವಾಗಿಯೂ ಕಾಣುತ್ತಿದೆ. ಗುಲ್ಬರ್ಗಾದಲ್ಲಿ ಪತ್ರಿಕೋದ್ಯಮಿಗಳನ್ನು ಉದ್ದೇಶಿಸಿ ಮಾತನಾಡುತ್ತಾ 1 ಸಾವಿರ ಕೋಟಿ ರೂಪಾಯಿಗಳನ್ನು ಕೃಷ್ಣಾ ಜಲಾನಯನ ಯೋಜನೆಗೆ ಖರ್ಚು ಮಾಡಿಯೇ ತೀರುತ್ತೇವೆ. ಕದ್ದಾದರೂ ಹಣವನ್ನು ತರುತ್ತೇವೆ, ಎಷ್ಟೇ ಕಷ್ಟ ಬಂದರೂ ಅಷ್ಟು ಹಣವನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಒಂದು ಬಾರಿ ಮುಖ್ಯಮಂತ್ರಿಗಳು ಈ ರೀತಿ ಮಾತನ್ನು ಹೇಳಿದಾಗ, ಅದನ್ನು ಮಾಡಿಯೇ ಮಾಡುತ್ತಾರೆಂದು ಜನ ನಂಬಿದಾಗ, ತಾವು ಇವತ್ತು ಆ ಕೆಲಸವನ್ನು ಮಾಡಲಿಲ್ಲ ಎಂದು ...."

ತಾವು ಹೇಳಿಕೊಂಡು ಹೋಗುತ್ತೀರಿ. ಮೊದಲನೇ ಬಾರಿಗೆ ರಾಜ್ಯದಲ್ಲಿ ಅವತ್ತು ಕೃಷ್ಣಾ ಭಾಗ್ಯ ಜಲ ನಿಗಮದ ಯೋಜನೆ ಅಡಿ ಬಾಂಡ್ ವ್ಯವಸ್ಥೆಯಲ್ಲಿ ಹಣ ಸಂಗ್ರಹ ಮಾಡಲಾಗಿತ್ತು. ಎ ಸ್ಕೀಮ್ ಏನಿದೆ, ಅದರಲ್ಲಿ ನಮ್ಮ ಪಾಲಿಗೆ ಕೊಟ್ಟಿರತಕ್ಕ 729 ಟಿಎಂಸಿ ನೀರನ್ನು 2001ರೊಳಗೆ ಉಪಯೋಗ ಮಾಡಿಕೊಳ್ಳಬೇಕೆಂದು ಏನೊಂದು ಗಡುವು ಇತ್ತು, ಆ ಗಡುವಿನೊಳಗೆ ಕಾರ್ಯಕ್ರಮವನ್ನು ತರಬೇಕು ಎಂಬ ದೃಷ್ಟಿಯಿಂದ ಅಂದಿನ ಸರ್ಕಾರದಲ್ಲಿ ಹಲವಾರು ನಿರ್ಣಯಗಳನ್ನು ತೆಗೆದುಕೊಂಡಿದ್ದರು. ಆ ಸಂದರ್ಭದಲ್ಲಿ ತೆಗೆದುಕೊಂಡಿರತಕ್ಕ ನಿರ್ಣಯಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. 1962ನೇ ಇಸವಿಯಿಂದ 1994ನೇ ಇಸವಿಯವರೆಗೆ ಕೇವಲ 30 ಟಿಎಂಸಿ ನೀರನ್ನು ಮಾತ್ರ ಹಿಡಿದಿಟ್ಟುಕೊಳ್ಳುವುದಕ್ಕೆ ಕಾಮಗಾರಿ ಕೆಲಸಗಳು ಮುಂದುವರೆದಿದ್ದವು. ಬಚಾವತ್ ಅವಾರ್ಡ್‌ನಲ್ಲಿ ನಮ್ಮ ರಾಜ್ಯಕ್ಕೆ ಏನು 734 ಟಿಎಂಸಿ allocation ಕೊಟ್ಟಿದ್ದರು, ಅದರಲ್ಲಿ 5 ಟಿಎಂಸಿ ನೀರನ್ನು ನಾವು ತಮಿಳುನಾಡಿನ ಚೆನ್ನೈಗೆ ಕುಡಿಯುವ ನೀರಿನ ವ್ಯವಸ್ಥೆ ಸಲುವಾಗಿ ಬಿಟ್ಟುಕೊಟ್ಟೆವು. ಇವತ್ತು ಆ ಔದಾರ್ಯವನ್ನು ಆ ಪಕ್ಕದ ಎರಡೂ ರಾಜ್ಯಗಳು ಮರೆತು, ನಮ್ಮ ರಾಜ್ಯಕ್ಕೆ ಯಾವುದೇ ರೀತಿ ಸಹಕಾರಗಳನ್ನು ಕೊಡುತ್ತಿಲ್ಲ. ನೀರಿನ ವಿಷಯದಲ್ಲಿ ಯಾವ ರೀತಿ ಹೋರಾಟಗಳು ನಡೆಯುತ್ತಿವೆ ಎಂದು ಇವತ್ತು ನಾವು ನೋಡುತ್ತಿದ್ದೇವೆ. ನಮಗೆ ಉಳಿದ 729 ಟಿಎಂಸಿ ನೀರನ್ನು ಸದ್ಬಳಕೆ ಮಾಡಿಕೊಳ್ಳುವುದಕ್ಕೆ ಯುಕೆಪಿ ಫಸ್ಟ್ ಸ್ಟೇಜ್‌ನಲ್ಲಿ 173 ಟಿಎಂಸಿ utilization allocation ಏನು ನಮಗೆ ಆಯಿತು, ಅದನ್ನು 2001ರ ಜೂನ್ 30ರೊಳಗೆ ಬಳಕೆ ಮಾಡಿಕೊಳ್ಳಬೇಕಾಗಿತ್ತು. ಆ ಸಂದರ್ಭದಲ್ಲಿ ಮೊದಲನೇ ಸ್ಟೇಜ್‌ನಲ್ಲಿ ಎರಡು phaseಽನಲ್ಲಿ ಕೆಲಸವನ್ನು ಮಾಡಬೇಕೆಂದು ನಿರ್ಧಾರವನ್ನು ಮಾಡಲಾಯಿತು. ಅದರಂತೆ ಮೊದಲನೇ ಫೇಸ್‌ನಲ್ಲಿ ಸುಮಾರು 129 ಟಿಎಂಸಿ ಬಳಕೆ ಮಾಡುವುದಕ್ಕೆ ತೀರ್ಮಾನವನ್ನು ಮಾಡಿ, ಎರಡನೇ ಫೇಸ್‌ನಲ್ಲಿ 54 ಟಿಎಂಸಿ ಬಳಕೆ ಮಾಡಿಕೊಳ್ಳತಕ್ಕ ನಿರ್ಧಾರ ಮಾಡಿ ಕೆಲಸ ಪ್ರಾರಂಭವಾಯಿತು. ಬಚಾವತ್ ಆಯೋಗದಲ್ಲಿ ನಮಗೆ ನಿಗದಿಪಡಿಸಿದ 729 ಟಿಎಂಸಿ ನೀರಿನಲ್ಲಿ ನಾವು ಇಲ್ಲಿಯವರೆಗೆ ಬಳಕೆ ಮಾಡಿರತಕ್ಕದ್ದು 576 ಟಿಎಂಸಿ ನೀರು ಮಾತ್ರ. Total allocationನಲ್ಲಿ 576 ಟಿಎಂಸಿ ನೀರನ್ನು ನಾವೇನು ಬಳಕೆ ಮಾಡಿಕೊಂಡಿರತಕ್ಕ ಸಂದರ್ಭದಲ್ಲಿ, 153 ಟಿಎಂಸಿ ಉಳಿಕೆ ನೀರು ಏನಿದೆ, ಅದನ್ನು ಇವತ್ತು ಡ್ಯಾಂ ಮಾಡಿ ನೀರನ್ನು ಶೇಖರಣೆ ಮಾಡುವುದರಲ್ಲಿ ನಾವು ಯಶಸ್ಸನ್ನು ಕಂಡಿದ್ದೇವೆ. ನಂತರ ಆ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕಾಗಿ ರೈತರ ಹೊಲಕ್ಕೆ ನೀರನ್ನು ಹರಿಸುವುದಕ್ಕೆ ಕೇನಾಲ್ ಕೆಲಸ ಮಾಡಲಿಕ್ಕೆ ಸಾಧ್ಯವಾಗಿರಲಿಲ್ಲ. ಆ ಸಂದರ್ಭದಲ್ಲಿ ನಾವು ಚರ್ಚೆ ಮಾಡಿದೆವು. 24

ಗಂಟೆ ಎಲ್ಲದಕ್ಕೂ ರಾಜಕೀಯ ಬೆರೆಸುತ್ತಾರೆ ಎಂದು ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ನಮ್ಮ ಬಗ್ಗೆ ಹೇಳುತ್ತಾರೆ. ಇದರಲ್ಲಿ ರಾಜಕೀಯ ಏನೂ ಇಲ್ಲ. ರಾಜ್ಯದ...

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಮಾನ್ಯ ರೇವಣ್ಣನವರ ಬಗ್ಗೆ ಆ ಮಾತನ್ನು ಹೇಳುತ್ತೇವೆ.

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ:- ಅವರು ಒಳ್ಳೆಯದಕ್ಕೋಸ್ಕರ ಅದನ್ನು ಮಾಡುತ್ತಾರೆ. ಅದರಲ್ಲೇನೂ ಸ್ವಾರ್ಥವಿರುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಅವರೂ ಇದನ್ನು ಒಪ್ಪಬೇಕು. ಅವರು 24 ಗಂಟೆ ರಾಜಕಾರಣ ಮಾಡುತ್ತಾರೋ ಇಲ್ಲವೋ? ಇದನ್ನು ತಾವೇ ಹೇಳಿ.

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ:- ಕೆಲವರಿಗೆ ಬೇರೆ ಹವ್ಯಾಸ ಇಲ್ಲದಿರುವುದರಿಂದ ಅವರು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಅವರು 24 ಗಂಟೆ ರಾಜಕಾರಣ ಮಾಡುತ್ತಾರೋ ಇಲ್ಲವೋ ಎಂಬುದನ್ನು ಹೇಳಿ ಬಿಡಲಿ. ಅವರು ಲಿಫ್ಟ್‌ನಲ್ಲೇ ಸರ್ಕಾರವನ್ನು ಬದಲಾಯಿಸಿದವರು. ನಾನು ಬೇರೆ ಯಾವುದೇ ದುರುದ್ದೇಶದಿಂದ ಆ ಮಾತನ್ನು ಹೇಳಿಲ್ಲ. ಅವರು ಒಳ್ಳೆಯ ರಾಜಕಾರಣಿ, 24 ಗಂಟೆ ರಾಜಕಾರಣ ಮಾಡುತ್ತಾರೆ. ಅದನ್ನು ಹೇಳಿದ್ದೇನೆ.

ಡಾ: ಹೆಚ್.ಸಿ.ಮಹದೇವಪ್ಪ:- ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಅವರನ್ನು ನಿಯಂತ್ರಣ ಮಾಡುವುದಕ್ಕೆ ತಲೆ ಕೆಡಿಸಿಕೊಂಡು ರಾಜಕೀಯ ಮಾಡುತ್ತಿದ್ದಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಹಾಗಲ್ಲ. ನಾನು ಮಾನ್ಯ ಕುಮಾರಸ್ವಾಮಿಯವರ ಬಗ್ಗೆ ಆ ಮಾತನ್ನು ಹೇಳುವುದಿಲ್ಲ. ನಾನು ಮಾನ್ಯ ರೇವಣ್ಣನವರು ರಾಜಕೀಯ ಮಾಡುತ್ತಾರೆಂದು ಹೇಳಿದೆ.

ಶ್ರೀ ಹೆಚ.ಡಿ.ರೇವಣ್ಣ:- ನಾನು ರಾಜಕಾರಣ ಮಾಡುವುದು ನಿಜ. ಮಾನ್ಯ ನಾಯ್ಡುರವರು ಬೇರೆ ಪಕ್ಷದಿಂದ ಪಕ್ಷಾಂತರ ಮಾಡಿಸುವುದಕ್ಕೆ ಹಗಲೂ ರಾತ್ರಿ ರಾಜಕಾರಣ ಮಾಡುತ್ತಾರೆ.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾವು ನೀರನ್ನು ಶೇಖರಣೆ ಮಾಡುವುದರಲ್ಲಿ ಯಶಸ್ವಿಯಾಗಿದ್ದೇವೆ. ಕೇಂದ್ರದಲ್ಲಿ NDA ಸರ್ಕಾರ ಆಡಳಿತ ನಡೆಸಬೇಕಾದರೆ, ಎರಡನೇ tribunal ರಚನೆ ಮಾಡತಕ್ಕ ಸಂದರ್ಭ ಬಂದಾಗ ಆಂಧ್ರಪ್ರದೇಶದವರು ಒಂದು ಡಿಮ್ಯಾಂಡ್ ಇಟ್ಟರು. ಯಾವ 153 ಟಿಎಂಸಿ ನೀರನ್ನು ನಾವು ಸದ್ಬಳಕೆ ಮಾಡಿಕೊಂಡಿರಲಿಲ್ಲವೋ, ಯಾವ ನೀರನ್ನು ರೈತರ ಹೊಲಕ್ಕೆ

ಹರಿಸುವುದಕ್ಕೆ ನಮಗೆ ಸಾಧ್ಯವಾಗಿರಲಿಲ್ಲವೋ, ಈ 153 ಟಿಎಂಸಿ ನೀರನ್ನು ಇವತ್ತೇನು ಕರ್ನಾಟಕ ರಾಜ್ಯ ಸದ್ಬಳಕೆ ಮಾಡಿಕೊಂಡಿಲ್ಲ, ಅದನ್ನು ಹಂಚಿಕೆ ಮಾಡಿ ಎಂದು ಅವರು ಕೇಳಿದರು. ಬಚಾವತ್ ಆಯೋಗ ಬಿ ಸ್ಕೀಮ್‌ನಲ್ಲಿ 330 ಟಿಎಂಸಿ available ಇದೆ ಎನ್ನತಕ್ಕ ವಿಷಯವನ್ನು ಹೇಳಿತ್ತು. ಅದರ ಆಧಾರದ ಮೇಲೆ ಆ ನೀರನ್ನು ಹಂಚಿಕೊಳ್ಳಲು ಇವತ್ತು ಎರಡನೇ tribunal ರಚನೆ ಮಾಡಲಾಯಿತು. ನಾವು ಏನು 153 ಟಿಎಂಸಿ ನೀರನ್ನು ಹಿಡಿದಿಟ್ಟು ಸದ್ಬಳಕೆ ಮಾಡಿಕೊಂಡಿರಲಿಲ್ಲವೋ, ಆ ನೀರನ್ನು ಯಾವ ರೀತಿ ಹಂಚಿಕೊಳ್ಳಬೇಕು ಎಂಬ ವಿಚಾರವನ್ನು tribunal ಮುಂದೆ ತರಬೇಕು ಎಂಬ ತೀರ್ಮಾನವನ್ನು ಮಾಡಬೇಕೆಂದು ಕೇಂದ್ರದಲ್ಲಿದ್ದ ಅಂದಿನ NDA ಸರ್ಕಾರದ ಮೇಲೆ ಆಂಧ್ರ ಪ್ರದೇಶದ ಸರ್ಕಾರದವರು ಒತ್ತಡ ತಂದರು. ಅವತ್ತಿನ NDA ಸರ್ಕಾರ ಈ 153 ಟಿಎಂಸಿ ನೀರನ್ನು ಯಾವ ರೀತಿ ಸದ್ಬಳಕೆ ಮಾಡಿಕೊಳ್ಳಬೇಕೆಂಬ ನಿರ್ಧಾರವನ್ನು ಕೈಗೊಳ್ಳುವುದಕ್ಕೆ, ಈ tribunal ಸ್ಕೀಮ್ ಹಂಚಿಕೆ ಮಾಡತಕ್ಕ ಸಂದರ್ಭದಲ್ಲಿ ಇದನ್ನೂ ಸೇರಿಸಿದ್ದಾರೆ. ಇವತ್ತು ಕೇಂದ್ರ ಸರ್ಕಾರ ಇಲ್ಲೂ ನಮ್ಮ ರಾಜ್ಯಕ್ಕೆ ಮಲತಾಯಿ ಧೋರಣೆ ತೋರಿಸಿದೆ. ಇವತ್ತು ಕನಿಷ್ಟ 136 ಕೋಟಿ ರೂ.ಗಳ ಹಣವನ್ನು ಹುಬ್ಬಳ್ಳಿ-ಧಾರವಾಡದ ಕುಡಿಯುವ ನೀರಿನ ಯೋಜನೆಗೆ ಹಣವನ್ನು ಬಜೆಟ್‌ನಲ್ಲಿ ತೋರಿಸಿದ್ದೀರಿ. ಹುಬ್ಬಳ್ಳಿ-ಧಾರವಾಡಕ್ಕೆ ಎಲ್ಲಿಂದ ನೀರನ್ನು ತರುತ್ತೀರಿ? ಅಲ್ಲಿಗೆ ನೀರನ್ನು ಕಳಸಾ-ಬಂಡೂರಿ ನಾಲೆಯಿಂದ ನೀರನ್ನು ತರಬೇಕಾಗಿದೆ. ಈ ಯೋಜನೆಯಿಂದಲೇ ಇವತ್ತು ಅಲ್ಲಿಗೆ ನೀರನ್ನು ತರಬೇಕಾಗಿದೆ. 136 ಕೋಟಿ ರೂ.ಗಳನ್ನು ಇವತ್ತು ಏನು ಬಜೆಟ್‌ನಲ್ಲಿ ಇಟ್ಟಿದ್ದೇವೆ ಎಂದು ತೋರಿಸಿದ್ದೀರಿ, ಇದನ್ನು ಯಾವ ರೀತಿ ಉಪಯೋಗ ಮಾಡಿ, ಎಲ್ಲಿಂದ ನೀರನ್ನು ತರುತ್ತೀರಿ ಎಂಬ ಪ್ರಶ್ನೆಯನ್ನು ನಮ್ಮ ಮುಂದೆ ಇದೆ. ಇವತ್ತು ಕಳಸಾ-ಬಂಡೂರಿ ಯೋಜನೆಯ ಕೆಲಸವನ್ನು ನಾವು ಪ್ರಾರಂಭ ಮಾಡುತ್ತೇವೆಂದು ನೀವು ಹೇಳಿದ್ದೀರಿ. ಅದನ್ನು ಮಾಡಬೇಕೆಂದು ನಾವು ಮತ್ತು ನೀವು ಸೇರಿ ಸಚಿವ ಸಂಪುಡದಲ್ಲಿ ನಿರ್ಧಾರ ಮಾಡಿದ್ದೇವೆ. ಆದರೆ ಈ ಕೆಲಸವನ್ನು ಮಾಡಬಾರದು ಎಂಬ ತಡೆಯಾಜ್ಞೆಯನ್ನು ಗೋವಾ ಸರ್ಕಾರದ ಮನವಿಯ ಮೇಲೆ ಅಂದಿನ NDA ಸರ್ಕಾರದವರು ನೀಡಿದ್ದಾರೆ. ಇವತ್ತು ಕೇಂದ್ರ ಸರ್ಕಾರ ಆ ಒಂದು ತಡೆಯಾಜ್ಞೆಯನ್ನು ತೆರವುಗೊಳಿಸದಿದ್ದರೆ, ನೀವು ಕಳಸಾ-ಬಂಡೂರಿ ನಾಲಾ ಕೆಲಸವನ್ನು ಹೇಗೆ ಮಾಡಲಿಕ್ಕಾಗುತ್ತದೆ? ಆ ಕೆಲಸ ಮಾಡದೆ ನೀವು ಎಲ್ಲಿಂದ ಹುಬ್ಬಳ್ಳಿ-ಧಾರವಾಡಕ್ಕೆ ನೀರನ್ನು ಕೊಡುತ್ತೀರಿ ಎಂಬುದು ಪ್ರಮುಖವಾದ ಅಂಶ.

ಶ್ರೀ ಕೆ.ಎಸ್.ಈಶ್ವರಪ್ಪ:- ಕಳಸಾ-ಬಂಡೂರಿ ಕಾಮಗಾರಿಯನ್ನು...

ಶ್ರೀ ಹೆಚ್.ಡಿ.ರೇವಣ್ಣ:- ನೀವು ಕೇವಲ ಇಂಧನ ಸಚಿವರು ಮಾತ್ರ. ನೀರಾವರಿ ಬಗ್ಗೆ ತನಿಖೆ ಆಗುತ್ತಿದೆ, ಅಲ್ಲಿಯವರೆಗೆ ನೀವು ಅದರ ಬಗ್ಗೆ ಮಾತನಾಡುವಂತಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:- ಕುಮಾರ ಸ್ವಾಮಿಗೂ ಮತ್ತು ನಿಮಗೂ ಏನಾದರೂ ತಂದೆ ತಾಯಿ blood ಬೇರೆ ಬೇರೆಯೇ? ಏಕೆಂದರೆ, ಅವರು ಸಾಮಾನ್ಯವಾಗಿ ನಿಧಾನವಾಗಿ ಹೋಗುತ್ತಾರೆ. ನೀವು ರಾಜಕೀಯದಲ್ಲಿ ಮೈಮೇಲೆಯೇ ಬೀಳುತ್ತೀರಿ.

ಕಳಸ ಬಂಡೂರಿ ಕಾಮಗಾರಿಯನ್ನು ನಮ್ಮ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿಕೊಂಡು ನಾವು ಆರಂಭ ಮಾಡಿದಾಗ ಗೋವಾ ಸರ್ಕಾರದವರು ಸುಪ್ರೀಂ ಕೋರ್ಟಿಗೆ ಹೋದರು, ಸುಪ್ರೀಂ ಕೋರ್ಟಿನವರು ಕೇಂದ್ರ ಸರ್ಕಾರಕ್ಕೆ, ಇದು ಕುಡಿಯುವ ನೀರಿನ ಯೋಜನೆ ರಾಜ್ಯ ಸರ್ಕಾರದ ದುಡ್ಡು, ರಾಜ್ಯ ಸರ್ಕಾರದ ಭೂಮಿ, ಅವರ ನೀರಿನ ವಿಚಾರದಲ್ಲಿ ನಿಮ್ಮ ಅಭಿಪ್ರಾಯವನ್ನು ತಿಳಿಸಿ ಎಂದು ನಾಲ್ಕು ಸಾರಿ ಕೇಂದ್ರ ಸರ್ಕಾರಕ್ಕೆ ನೋಟೀಸ್ ಕೊಟ್ಟರು. ಒಂದು ಸಾರಿಯೂ ಕೇಂದ್ರ ಸರ್ಕಾರ ಅದಕ್ಕೆ ಉತ್ತರವನ್ನು ಕೊಲಲಿಲ್ಲ. ಕೊನೆಗೆ ಸುಪ್ರೀಂ ಕೋರ್ಟ್ ತೀರ್ಮಾನ ಮಾಡಿ, ಇದು ಕುಡಿಯುವ ನೀರಿನ ಯೋಜನೆಯಾಗಿರುವುದರಿಂದ ಇದಕ್ಕೆ ನಾವು ಯಾವುದೇ ಕಾರಣಕ್ಕೂ ಸ್ಟೇ ಕೊಡುವುದಕ್ಕೆ ಬರುವುದಿಲ್ಲವೆಂದು ತುಂಬಾ ಸ್ಪಷ್ಟವಾಗಿ ಹೇಳಿಕೆ ಕೊಟ್ಟಿರುವ ಸಂದರ್ಭದಲ್ಲಿ ನಾವು ಕಾಮಗಾರಿಯನ್ನು ಆರಂಭ ಮಾಡುತ್ತೇವೆ. ಮತ್ತೆ ಹಿಂದಿನ ಮುಖ್ಯಮಂತ್ರಿಗಳಿಗೆ ಏನು ಸ್ಪಷ್ಟನೆ ಬೇಕೆಂಬುದು ನನಗೆ ಗೊತ್ತಾಗುತ್ತಿಲ್ಲ. ಈಗಾಗಲೇ ಸುಪ್ರೀಂ ಕೋರ್ಟ್ ಕ್ಲಿಯರ್ ಮಾಡಿದೆ, ನಾವು ಕಾಮಗಾರಿಯನ್ನು ಆರಂಭ ಮಾಡುತ್ತೇವೆ.

ಶ್ರೀ ಹೆಚ್.ಡಿ.ಕುಮರಸ್ವಾಮಿ: ಕಾಮಗಾರಿ ಆರಂಭ ಮಾಡುವುದಕ್ಕೆ ಕೇಂದ್ರ ಸರ್ಕಾರದ ಅರಣ್ಯ ಇಲಾಖೆಯಿಂದ ಅನುಮತಿ ಬೇಡವೇ, ಅರಣ್ಯದ ಮಧ್ಯದಲ್ಲೇ ಕಾಲುವೆ ತೋಡಬೇಕಲ್ಲವೇ? ಕೇಂದ್ರ ಸರ್ಕಾರದ ಅರಣ್ಯ ಇಲಾಖೆ, ಪರಿಸರ ಇಲಾಖೆ ಅನುಮತಿಯನ್ನು ಕೊಡುತ್ತಾರೆಯೇ? ಹೀಗೆ ಹಲವಾರು ರೀತಿಯ ಕಾಂಪ್ಲಿಕೇಷನ್ಸ್ ಇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ಕೇಂದ್ರ ಸರ್ಕಾರ ಅದಕ್ಕೆಲ್ಲಾ ಅನುಮತಿಯನ್ನು ಕೊಟ್ಟು ಅದನ್ನು ಅಬೆಯನ್ಸ್‌ನಲ್ಲಿಟ್ಟಿತ್ತು, ಇದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ, ಎಂದರೆ ಕ್ಯಾನ್ಸಲ್ ಎಂದಲ್ಲ, ಪೆಂಡಿಂಗ್ ಇಟ್ಟಿತ್ತು, ಈ ಸಂದರ್ಭದಲ್ಲಿ ನಾವು ಕಾಮಗಾರಿ ಚಾಲು ಮಾಡಿದ ತಕ್ಷಣ ಗೋವಾ ಸರ್ಕಾರ ಸುಪ್ರೀಂ ಕೋರ್ಟಿಗೆ ಹೋದರು. ಸುಪ್ರೀಂ ಕೋರ್ಟ್ ತುಂಬಾ ಸ್ಪಷ್ಟವಾಗಿ ಈ ಕಾಮಗಾರಿಗೆ ನಾವು ಸ್ಟೇ

ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ, ಕಾಮಗಾರಿಯನ್ನು ಆರಂಭ ಮಾಡುತ್ತೇವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನೀವು ಕಾಮಗಾರಿಯನ್ನು ಆರಂಭ ಮಾಡುವುದು ಒಂದು ಕಡೆಯಾಗಲಿ, ಇವತ್ತು ಕಾಮಗಾರಿಯನ್ನು ಆರಂಭ ಮಾಡುವುದಕ್ಕೆ ಆ ತಡೆಯಾಜ್ಞೆ ಏನಿತ್ತು ಅದನ್ನು ಕೇಂದ್ರ ಸರ್ಕಾರ ವೆಕೇಟ್ ಮಾಡದೇ ಇದ್ದರೆ, ಕೆಲವು ಕಡೆ ನೀವು ಕೆಲಸ ಮಾಡುವುದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕು, ಸುಪ್ರೀಂ ಕೋರ್ಟಿಗೂ ಇದಕ್ಕೂ ಸಂಬಂಧವಿಲ್ಲ. ಸುಪ್ರೀಂ ಕೋರ್ಟ್ ಕುಡಿಯುವ ನೀರಿಗೆ ಮಾಡಿಕೊಳ್ಳಿ ಎಂದು ಹೇಳಿರಬಹುದು. ಆದರೆ ಇವತ್ತೇನು ತಡೆಯಾಜ್ಞೆ ಇದೆ ಅದರ ಆಧಾರದ ಮೇಲೆ ಕೆಲವು ಅರಣ್ಯ ಪ್ರದೇಶದಲ್ಲಿ ಕಾಲುವೆ ತೋಡಬೇಕಾಗಿರುವುದರಿಂದ ಕೇಂದ್ರದ ಪರಿಸರ ಇಲಾಖೆಯ ಅನುಮತಿಯನ್ನು ಪಡೆದುಕೊಳ್ಳಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ಸರ್, ದಯವಿಟ್ಟು ಅರ್ಥ ಮಾಡಿಕೊಳ್ಳಿ ತಡೆಯಾಜ್ಞೆಯೇ ಇಲ್ಲ, ಪೆಂಡಿಂಗ್ ಇದೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಇದು ಕೋರ್ಟಿನ ಪ್ರಶ್ನೆಯಲ್ಲ, ಕೇಂದ್ರದ ಪರಿಸರ ಇಲಾಖೆ ಇದಕ್ಕೆ ಅನುಮತಿಯನ್ನು ಕೊಡುತ್ತದೆಯೇ ಎಂದು ಅವರು ಪ್ರಶ್ನೆ ಮಾಡುತ್ತಿದ್ದಾರೆಯೇ ಹೊರತು ಕೋರ್ಟಿನ ವಿಚಾರ ಅವರು ಏತ್ತುತ್ತಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಹಿಂದಿನ ಎನ್ ಡಿ ಎ ಸರ್ಕಾರ ತಡೆಯಾಜ್ಞೆಯನ್ನು ಕೊಟ್ಟಿತ್ತು, ಕೊಡಬಹುದೆಂದು ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿದೆ ಆದರೆ ಕೇಂದ್ರ ಸರ್ಕಾರದಲ್ಲಿ ಇನ್ನು ಪೆಂಡಿಂಗ್ ಇದೆ ಎನ್ನುವ ಮಾತನ್ನು ಅವರು ಹೇಳುತ್ತಿರುವುದು, ನಾವು ಕಾಮಗಾರಿ ಮಾಡಲು ಹೋದರೆ ಕೇಂದ್ರ ಸರ್ಕಾರ ಅಡ್ಡ ಬರಬಹುದಾ ಎಂದು ಹೇಳುತ್ತಿರುವುದು.

ಶ್ರೀ ಕೆ.ಎಸ್.ಈಶ್ವರಪ್ಪ: ಕೇಂದ್ರ ಸರ್ಕಾರದ ಪರಿಸರ ಇಲಾಖೆ ಅವತ್ತು ಪೆಂಡಿಂಗ್ ಇಟ್ಟಿತ್ತು, ಅಬೆಯನ್ಸ್ನಲ್ಲಿಟ್ಟಿತ್ತು, ತಡೆಯಾಜ್ಞೆ ಕೊಟ್ಟಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಾವೇ ಕೇಂದ್ರ ಸರ್ಕಾರ ಮುಂದೆ, ನಾನು, ನೀವು, ಬಹುಶಃ ಅಧ್ಯಕ್ಷರು ಕಂದಾಯ ಸಚಿವರಾಗಿದ್ದಾಗ ಬಂದಿದ್ದರು, ಎರಡು, ಮೂರು ಸಭೆಗಳು ಕೇಂದ್ರದ ಜಲಸಂಪನ್ಮೂಲ ಸಚಿವರೊಡನೆ ಆಯಿತು. ಆ ತಡೆಯಾಜ್ಞೆಯನ್ನು ವೆಕೇಟ್ ಮಾಡುವ ವಿಚಾರವನ್ನೇನೂ ಪ್ರಸ್ತಾಪ ಮಾಡಿದೆವು, ನಾವು ಹೋಗಿ ಕೇಂದ್ರ ಸರ್ಕಾರದ ಮುಂದೆ ಮನವಿಗಳನ್ನು ಕೊಟ್ಟಾಗ ಆ ಸಭೆಗಳಲ್ಲಿ ಏನಾದರೂ ತೀರ್ಮಾನಗಳಾಗಿದ್ದಾವೆಯೇ? ತಡೆಯಾಜ್ಞೆಯನ್ನು ತೆರವುಗೊಳಿಸಿ ಎಂದೆ

ಅವರ ಮುಂದೆ ಹೋಗಿ ಮನವಿಯನ್ನು ಕೊಟ್ಟಿದ್ದೇವೆ, ಇಲ್ಲಿಯವರೆಗೆ ಕೇಂದ್ರ ಸರ್ಕಾರ ಯಾವ ತೀರ್ಮಾನವನ್ನು ಮಾಡಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಕೇಂದ್ರ ಸರ್ಕಾರ ಏನು ಮಾಡಲಿಲ್ಲವೆನ್ನುವ ಒಂದೇ ಕಾರಣಕ್ಕೆ, ಅವರು ಸ್ಟೇ ಕೊಟ್ಟಿಲ್ಲವೆನ್ನುವುದಕ್ಕೋಸ್ಕರ ನಾವು ಕಾಮಗಾರಿಯನ್ನು ಚಾಲು ಮಾಡಿದೆವು, ಆಗ ಗೋವಾ ಸರ್ಕಾರದವರು ಸುಪ್ರೀಂ ಕೋರ್ಟಿಗೆ ಈ ರೀತಿ ಕಾಮಗಾರಿಯನ್ನು ಆರಂಭ ಮಾಡಿದ್ದಾರೆ ಸ್ಟೇ ಕೊಡಬೇಕೆಂದು ಹೋದರು, ಸ್ಟೇ ಕೊಟ್ಟಿಲ್ಲ, ಕಾಮಗಾರಿ ನಡೆಯುತ್ತಿದೆ, ಹಾಗಾಗಿ ಕಾಮಗಾರಿ ಮುಂದುವರೆಯುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅಧ್ಯಕ್ಷರೆ, ತಾವು ಸ್ವಲ್ಪ ಕಾನೂನು ತಜ್ಞರಿದ್ದೀರಿ, ಹೇಳಿಬಿಟ್ಟರೆ ಒಳ್ಳೆಯದು.

ಅಧ್ಯಕ್ಷರು: ಇದರಲ್ಲಿ ಸುಪ್ರೀಂ ಕೋರ್ಟಿನಿಂದಾಗಲಿ, ಯಾವುದೇ judiciary bodyಯಲ್ಲಿ ಈ ಒಂದು ಕಾಮಗಾರಿಯನ್ನು ಮಾಡಬಾರದೆಂದು ಯಾವುದೇ ತಡೆಯಾಜ್ಞೆ ಇರಲಿಲ್ಲ. ಆದರೆ ಕೇಂದ್ರ ಸರ್ಕಾರ ಒಂದು ಹಂತದಲ್ಲಿ ಕಾಮಗಾರಿ go ahead ಎಂದು clearance ಕೊಟ್ಟಿತ್ತು. ಮುಂದೆ ಗೋವಾ ಸರ್ಕಾರ ತಕರಾರು ಅರ್ಜಿಯನ್ನು ಹಾಕಿದ ಮೇಲೆ ಸ್ಟೇ ಕೊಡಲಿಲ್ಲ, ಕೇಂದ್ರ ಸರ್ಕಾರವೇನು clearance ಕೊಟ್ಟಿದ್ದರು, ಅದನ್ನು keep in abeyance ಎಂದು ಕೊಟ್ಟರು ಅಷ್ಟೆ. ಅಂದರೆ ಆ ಯೋಜನೆಯನ್ನು ರಿಜೆಕ್ಟ್ ಮಾಡುವುದೆಂದಾಗಲಿ ಅಥವಾ ಪೂರ್ತಿ ತಡೆಯಾಜ್ಞೆ ಎಂದಾಗಲಿ ಕೊಟ್ಟಿಲ್ಲ, clearance ಕೊಟ್ಟಿದ್ದನ್ನು keep in abeyance ಎಂದು ಕೊಟ್ಟಿದ್ದರು, keep in abeyance ಎನ್ನುವುದನ್ನು ವೆಕೇಟ್ ಮಾಡಬೇಕೆನ್ನುವ ಪ್ರಯತ್ನವನ್ನು ನಿಮ್ಮ ಸರ್ಕಾರವಿದ್ದಾಗ ಈಗಿನ ಸರ್ಕಾರವಿರುವಾಗ ಮತ್ತೆ ಯಾವುದೇ ಸರ್ಕಾರವಿದ್ದಾಗಲೂ ನಡೆಯುತ್ತಲೇ ಇದೆ. But, in the mean time, keep in abeyance ಎಂದಿದ್ದಾಗಲೂ ಕೂಡ ಕಾಮಗಾರಿಯನ್ನು ನಾವು ಮಾಡೋಣವೆನ್ನುವುದು ಸಚಿವ ಸಂಪುಟದ ತೀರ್ಮಾನವಾಯಿತ್ತು, ಅದು ಮುಂದುವರೆದಿದೆ. ಅದಾದ ಮೇಲೆ ಮತ್ತೆ ಗೋವಾ ಸರ್ಕಾರ ಸುಪ್ರೀಂ ಕೋರ್ಟಿಗೆ ಹೋಗಿ ಅದು keep in abeyance ಎಂದು ಇದೆ, ಈ ಯೋಜನೆಯನ್ನು ಅಲೋ ಮಾಡಬಾರದು ತಡೆಯಾಜ್ಞೆ ಕೊಡಬೇಕೆಂದು, ಪಿಟಿಷನ್ ಫೈಲ್ ಸಹಿತ ಮಾಡಿದೆ, ಬಹಳಷ್ಟು ಪ್ರಯತ್ನ ಮಾಡಿದರು ಸುಪ್ರೀಂ ಕೋರ್ಟ್ ಇದುವರೆವಿಗೂ ಅದನ್ನು ಕಾನೂನು ಬದ್ಧವಾಗಿ ಅಲೋ ಮಾಡಿಲ್ಲ.

ಶ್ರೀ ವಿ.ಸೋಮಣ್ಣ: ಸ್ವಾಮಿ ಹಾಗಾದರೆ ಕಾಮಗಾರಿಯನ್ನು ಆರಂಭ ಮಾಡಬಹುದಲ್ಲ, ಅದನ್ನಾದರೂ ಮಾಡಲೆಂದು ಅವರು ಒತ್ತಾಯ ಮಾಡುತ್ತಿರುವುದು.

ಶ್ರೀ ಕೆ.ಎಸ್.ಈಶ್ವರಪ್ಪ: ಮಾಡುತ್ತೇವೆದೇ ಹೇಳುತ್ತಿರುವುದು, ಖಂಡಿತಾ ಸರಿಯಿದೆ

Dr.H.C.MAHADEVAPPA: Sir, you mean to say that still the project is under abeyance.

ಅಧ್ಯಕ್ಷರು: ಕೇಂದ್ರ ಸರ್ಕಾರದಿತ್ತು.

ಡಾ:ಹೆಚ್.ಸಿ.ಮಹದೇವಪ್ಪ: ಇನ್ನೂ keep it in abeyance ಎಂದು ಹೇಳಿದ್ದರು, but still you can go ahead with the project ಎಂದು ತಾವು ಹೇಳುತ್ತಿದ್ದೀರಿ, keep it in abeyance ಎಂದು ಆ ಯೋಜನೆ, ನಕ್ಷೆ ಎಲ್ಲಾ ತಯಾರು ಮಾಡಿ, ಅಪ್ರೂವಲ್ ಕೊಡದೇ Environment Department clear ಮಾಡದೇ how can you proceed with the work?

ಅಧ್ಯಕ್ಷರು: ಒಂದು ಸಲ ಕೊಟ್ಟಿತ್ತು.

ಡಾ:ಹೆಚ್.ಸಿ.ಮಹದೇವಪ್ಪ: ನೀವು ಮಡಬೇಡಿ ಎಂದು ನಾವೇನು ಹೇಳುತ್ತಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾಡಬೇಡಿ ಎಂದು ಹೇಳುವುದಕ್ಕೂ ಆಗುವುದಿಲ್ಲ. ಆ ರೀತಿ ಹೇಳುವುದಕ್ಕೆ ಸಾಧ್ಯನೂ ಇಲ್ಲ, ನೀವು ಹೇಳಿದರೂ ಉತ್ತರ ಕರ್ನಾಟಕಕ್ಕೆ ಹೋದರೆ ಆ ವಿಚಾರವೇ ಬೇರೆಯಾಗುತ್ತದೆ, ಅಲ್ಲಿ ನೀವು ಬೇಡವೆಂದರೂ ಕೇಳುವಂತಿಲ್ಲ, ಅದು ಪ್ರಶ್ನೆಯಲ್ಲ. ಈಗ abeyanceನಲ್ಲಿ ಇಟ್ಟಿದ್ದಾರೆ. ನಾವು ಮೇಲಿಂದ ಮೇಲೆ ಕೇಂದ್ರದ ಎನ್.ಡಿ.ಎ ಸರ್ಕಾರವಿದ್ದಾಗ ನಮ್ಮ ರಾಜ್ಯ ಸರ್ಕಾರ ಹೋದೆವು, ಬೇರೆ ಬೇರೆ ಸರ್ಕಾರಗಳಿದ್ದಾಗ ಹೋದೆವು, abeyance withdraw ಮಾಡಲಿಲ್ಲ. Abeyanceನಲ್ಲಿ ಇಟ್ಟ ತಕ್ಷಣ ಸ್ಟೇನೂ ಅಲ್ಲ. ಅದಕ್ಕೋಸ್ಕರ ಸಮ್ಮಿಶ್ರ ಸರ್ಕಾರದಲ್ಲಿ ನಾವೇನು ತೀರ್ಮಾನ ತೆಗೆದುಕೊಂಡೆವು, Abeyanceನಲ್ಲಿ ಇಟ್ಟಂಥ ಸಂದರ್ಭದಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಹತ್ತಾರು ಸುಪ್ರೀಂ ಕೋರ್ಟ್ ತೀರ್ಪುಗಳಲ್ಲಿ ಕುಡಿಯುವ ನೀರಿಗೆ ಆದ್ಯತೆ ಕೊಡಬೇಕೆಂದು ಬಂದಿರುವುದರಿಂದ ನಾವು ಸಚಿವ ಸಂಪುಡದಲ್ಲಿ ತೀರ್ಮಾನವನ್ನು ತೆಗೆದುಕೊಂಡು, abeyanceನಲ್ಲಿದ್ದರೂ ಕೂಡ ಕೇಂದ್ರ ಸರ್ಕಾರ ನಮ್ಮ ಮಾತಿಗೆ ಬೆಲೆಕೊಡದಿದ್ದಕ್ಕೋಸ್ಕರ ನಾವು ಚಾಲು ಮಾಡೋಣವೆಂದು ಸಚಿವಸಂಪುಟದಲ್ಲಿ ತೀರ್ಮಾನ ಮಾಡಿಕೊಂಡು ಚಾಲು ಮಾಡಿದೆವು. ನಾವು ಚಾಲು ಮಾಡಿದಾಗ ಅವತ್ತು ಗೋವಾ ಸರ್ಕಾರ ಸುಪ್ರೀಂ ಕೋರ್ಟಿಗೆ ಹೋಗುತ್ತದೆಂದು ಗೊತ್ತಿತ್ತು. ದೈವ ದಯೆಯಿಂದ ಸುಪ್ರೀಂ ಕೋರ್ಟ್, ಕರ್ನಾಟಕದ ಈ ಒಂದು ಯೋಜನೆ ಕುಡಿಯುವ

ನೀರಿದಾಗಿರುವುದರಿಂದ ಸ್ಟೇ ಕೊಟ್ಟಿಲ್ಲ, ನಾವು ಕಾಮಗಾರಿಯನ್ನು ಆರಂಭ ಮಾಡುತ್ತೇವೆ.

ಶ್ರೀ ಬಿ.ಸಿ.ಪಾಟೀಲ್: ಕೇಂದ್ರ ಸರ್ಕಾರ abeyanceನಲ್ಲಿಟ್ಟಾಗಲು ಕೂಡ ರಾಜ್ಯ ಸರ್ಕಾರ ಅದನ್ನು ಓವರ್ ರೂಲ್ ಮಾಡಿ ಕೆಲಸ ಪ್ರಾರಂಭ ಮಾಡಬಹುದೇ?

ಅಧ್ಯಕ್ಷರು: ಅಷ್ಟು ಮಾಡಿ ಹಾಗೇನಾದರು ಕಾನೂನು ವಿರುದ್ಧವಾಗಿದ್ದರೆ ಸುಪ್ರೀಂ ಕೋರ್ಟಿನಲ್ಲಿ ಸ್ಟೇ ಸಿಗುತ್ತಿತ್ತು, ಇನ್ನು ಸಿಕ್ಕಿಲ್ಲ.

ಶ್ರೀ ಬಿ.ಸಿ. ಪಾಟೀಲ್: ಈಗ ತಾವು ಹೇಳಿದ್ದು ಕೇಂದ್ರ ಸರ್ಕಾರ abeyanceನಲ್ಲಿಟ್ಟಿದೆ ಅದನ್ನು ನಾವು ಓವರ್ ರೂಲ್ ಮಾಡಿ ಸಮ್ಮಿಶ್ರ ಸರ್ಕಾರ ತೀರ್ಮಾನ ತೆಗೆದುಕೊಂಡು ನಾವು ಕೆಲಸ ಪ್ರಾರಂಭ ಮಾಡಿದೆವೆಂದು ಹೇಳುತ್ತಿದ್ದಿರಿ, ಅದನ್ನು ಮಾಡಬಹುದಾ? ಅದಕ್ಕೆ ಅವಕಾಶವಿದೆಯಾ?

ಡಾ:ಹೆಚ್.ಸಿ.ಮಹದೇವಪ್ಪ: ಏನು ಮಾಡಬಹುದು ಎಂದರೆ, Is it in accordance with the provisions of the law?

Mr.Speaker:- Definitely.

ಅಧ್ಯಕ್ಷರು: ಮಹದೇವಪ್ಪನವರೆ, ನೀವು ನಿಮ್ಮ ಲ್ಯಾಂಡ್‌ನಲ್ಲಿ ಮಾಡುತ್ತಿದ್ದೀರಿ, ನಿಮ್ಮ ಜಾಗದಲ್ಲಿ ನೀವು ಮಾಡುತ್ತಿದ್ದೀರಿ, ರಾಜ್ಯ ಸರ್ಕಾರವೇ ದುಡ್ಡನ್ನು ಹಾಕುತ್ತಿದೆ, ಕೇಂದ್ರ ಸರ್ಕಾರವನ್ನು ಕೇಳಿಲ್ಲ, ಅದಕ್ಕೂ ಸಾಕಷ್ಟು ರೂಲಿಂಗ್ಸ್ ಇದ್ದಾವೆ. ಇಷ್ಟು ಹೊತ್ತಿಗಾಗಲಿ ಸುಪ್ರೀಂ ಕೋರ್ಟಿನಲ್ಲಿ ಸ್ಟೇ ಆಗುತ್ತಿತ್ತು. ಇದು in accordance with the provisions of law ಇಲ್ಲವೆಂದಿದ್ದರೆ ಇಷ್ಟು ಹೊತ್ತಿಗೆ ಸ್ಟೇ ಕೊಡುತ್ತಿದ್ದರು.

ಡಾ:ಹೆಚ್.ಸಿ.ಮಹದೇವಪ್ಪ: ಹಿಂದೆ ನಾವು ಅನೇಕ ಯೋಜನೆಗಳಿಗೆ ರಾಜ್ಯ ಸರ್ಕಾರದಿಂದಲೇ ದುಡ್ಡನ್ನು ಕೊಡುತ್ತಿದ್ದೆವು. ಉದಾ: ಕಬಿನಿ ಮುಂದುವರೆದ ಕಾಮಗಾರಿಗಳು, Even today, the Environment Department has not cleared the project.

ಶ್ರೀ ವಿ.ಸೋಮಣ್ಣ: ಅಧ್ಯಕ್ಷರೆ, ಈಗ ಕುಡಿಯುವ ನೀರಿನ ಯೋಜನೆಯನ್ನು ತಮಿಳುನಾಡಿನವರು ಹೊಗೆನಕಲ್‌ನಲ್ಲಿ ಮಾಡುತ್ತಿದ್ದಾರೆ, ಅದಕ್ಕೆ ಕೇಂದ್ರ ಸರ್ಕಾರ ಅನುಮತಿಯನ್ನು ಕೊಟ್ಟಿದೆಯೇ? ಮಾಡುವುದಾದರೆ ಮಾಡಿ ನಮ್ಮದೇನು ಇಲ್ಲ, ಕೆಲಸ ಆರಂಭ ಮಾಡುತ್ತೇವೆಂದು ಕಾಲ ಕಳೆಯಬೇಡಿ, ಆರಂಭ ಮಾಡುವುದಾದರೆ ಮಾಡಿ.

ಶ್ರೀ ಉಮೇಶ್ ವಿ.ಕತ್ತಿ: ಅಧ್ಯಕ್ಷರೆ, ಬಂಡೂರಿ ನಾಲಾ ಕೆಲಸ ಆರಂಭವಾಗಿದೆ, ನಿಮ್ಮ ಚರ್ಚೆಯನ್ನು ಕೇಳಿ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರ

ಅದನ್ನು ನಿಲ್ಲಿಸುವುದು ಬೇಡ, ಮಾನ್ಯ ಮಾಜಿ ಮುಖ್ಯಮಂತ್ರಿಗಳು ಮಾತನಾಡಲಿ, ಅದರ ಮೇಲೆ ಉತ್ತರ ಕೊಡುವಾಗ ಹೇಳಲಿ ಚರ್ಚೆ ಬೇಡ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಾನು ಹೇಳತಕ್ಕಂಥದ್ದು, ಜಲನೀತಿ ಎಂಬುದು ರಾಜ್ಯಕ್ಕೆ ಸಂಬಂಧಪಟ್ಟದ್ದಲ್ಲ, ಎಲ್ಲರಿಗೂ ಗೊತ್ತಿರುವ ವಿಚಾರ. ಖರ್ಗೆಯವರು ನಮಗೆಲ್ಲರಿಗಿಂತ ಸಿನಿಯರ್ ಲೀಡರ್ ಇದ್ದಾರೆ ನೀರಾವರಿ ಮಂತ್ರಿಗಳಾಗಿ ಕೆಲಸ ಮಾಡಿದ ಅನುಭವವಿದೆ, ಇದೇನಿದು ಎಂದು ಅವರು ಯೋಚನೆ ಮಾಡುತ್ತಿದ್ದಾರೆ. ಇವತ್ತು ಈ ಕಾಮಗಾರಿಯನ್ನು ಕೇಂದ್ರ ಸರ್ಕಾರ ಅನುಮತಿ ಕೊಡದೆ ಮಾಡುದುವಕ್ಕಾಗುತ್ತದೆಯೇ? ತಾವೇ ನಮಗೆ ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು): ನಾನು ಯೋಚನೆ ಏನು ಮಾಡುತ್ತಿದ್ದೆ ಎಂದರೆ, ಇವರೆಲ್ಲರೂ ನಾವು ನೀರಾವರಿಗೆ ಇಷ್ಟು ಹಣವನ್ನು ಕೊಟ್ಟಿದ್ದೇವೆ ಕೆಲಸ ಮಾಡುತ್ತಿದ್ದೇವೆ, ಆ ಯೋಜನೆ ಮುಗಿಸುತ್ತೇವೆ, ಈ ಯೋಜನೆಯನ್ನು ಮುಗಿಸುತ್ತೇವೆ, ಅಧ್ಯಕ್ಷರ ಮರ್ಜಿಯಲ್ಲಿ ಬಂದು ಕಳಸಬಂಡೂರಿ ನಾಲಕ್ಕೆ 130 ಕೋಟಿಯನ್ನು ಕೊಟ್ಟು ಅದನ್ನು ಮುಗಿಸುತ್ತೇವೆ ಎಂದು ಹೇಳುತ್ತಾರೆ. abeyanceನಲ್ಲಿ ಇರುವುದು ಸ್ಟೇ ಇಲ್ಲ. The order is kept in abeyance. ಅದಕ್ಕಾಗಿ abeyance ಇರತಕ್ಕದ್ದು ಎಲ್ಲಿಯವರೆಗೆ ಅಂದರೆ ಅದನ್ನು ವೆಕೇಟ್ ಮಾಡುವವರೆಗೆ naturally, ಕೆಲಸ ಪ್ರಾರಂಭ ಮಾಡುವುದಕ್ಕಾಗುವುದಿಲ್ಲವೆಂಬುದು ಒಂದು. ಅವರು ಹೇಳಿದಂತೆ environmental clearance, ಬೇರೆ ಬೇರೆ clearance ಏನಿರುತ್ತವೆ, abeyance order ತೆಗೆದಾಗ ಮಾತ್ರ ಆ clearance ಕೊಡುತ್ತಾರೆ, ಆ abeyance order ಹೋದ ಮೇಲೆ environmental clearance ಇರಬಹುದು, ಬಾಕಿ clearanceಗಳು ಸಣ್ಣಪುಟ್ಟದ್ದು ಸಿಗುತ್ತವೆ. ಇಲ್ಲದಿದ್ದರೆ ಅವರು ಏನು ಮಾಡುತ್ತಾರೆ, ಆ ನೆಪದಲ್ಲಿ ಅವರು ಹಿಡಿದುಕೊಂಡು ಕುಳಿತಿದ್ದಾರೆ. ಅದಕ್ಕಾಗಿ ನಾವು ಸುಮ್ಮನೆ ಹೇಳಬಹುದು, ಮೊಂಡು ಧೈರ್ಯದಿಂದ ನಾವು ಪ್ರಾರಂಭ ಮಾಡುತ್ತೇವೆಂದು ಹೇಳಬಹುದು. ಇವೆಲ್ಲಾ ಒಳ್ಳೆಯ ಮಾತಲ್ಲ. ನಾಳೆ ಒಂದು ಮಡುವುದಕ್ಕೆ ಹೋಗಿ ಇನ್ನೊಂದು ಸಿಕ್ಕಿ ಬೀಳುವುದು ಬೇಡ. ಇರತಕ್ಕಂತಹ ಕಾನೂನಿನಡಿಯಲ್ಲಿ ಅಥವಾ ಇಲ್ಲರೂ prescribe ಮಾಡಿ ಆದರೂ ಮಾಡಬೇಕು. ಇಲ್ಲದಿದ್ದರೆ ಮನವೊಲಿಸಿಕೊಂಡಾದರೂ ಮಾಡಬೇಕು. ನೀರಾವರಿಗೆ ಅಷ್ಟೊಂದು ಆದ್ಯತೆ ಕೊಡುವುದು ನಿಮ್ಮ ಇಚ್ಚೆ ಇದ್ದಿದ್ದರೆ, ಆಂಧ್ರಪ್ರದೇಶದವರ ಹಾಗೆ ನೇವೂ ಮಾಡಬಹುದಾಗಿತ್ತು. ಇವತ್ತು ಆಂಧ್ರ ಪ್ರದೇಶದವರು 16,000 ಕೋಟಿ ರೂ. ಇಟ್ಟಿದ್ದಾರೆ. ನಿಮಗೆ ಗೊತ್ತಿದೆ. ನಾವು ಇಡತಕ್ಕಂತಹ ಅಲೋಕೇಶನ್ನೇ 3,800 ಕೋಟಿಗೆ ತಂದಿಟ್ಟಿದ್ದೇವೆ. 39% ಎಲ್ಲಿ ಅಥವಾ 31% ಎಲ್ಲಿ? ಇವತ್ತು ನೀವು 13%

ಇಟ್ಟಿದ್ದು ಎಲ್ಲಿ? ಅವರು ಇಟ್ಟಿದ್ದು 14,000 ಕೋಟಿ. Highest in the history of Irrigation. ಯಾವ ರಾಜ್ಯದವರೂ ಕೂಡ ಇಟ್ಟಿಲ್ಲ. ಅದರ ಜೊತೆ ಜೊತೆಯಲ್ಲಿ ಬರೀ ಹೌಸಿಂಗ್‌ನಂತಹ ಪ್ರೋಗ್ರಾಂಗೆ 5,500 ಕೋಟಿ ರೂಪಾಯಿ ಇಟ್ಟಿದ್ದಾರೆ. ಇದನ್ನು ನಾನು ಹೇಳುವುದಿಲ್ಲ. ಆ ಮೇಲೆ ಹೇಳುತ್ತೇನೆ. ನನ್ನ ಬಜೆಟ್ ಚೆನ್ನಾಗಿದೆ, ನನ್ನ ಬಜೆಟ್ ಚೆನ್ನಾಗಿದೆ, ಎಂದು ಹೇಳುತ್ತೀರಿ. ನಿಮ್ಮ ಬಜೆಟ್ಟೇ ಚೆನ್ನಾಗಿದೆ, ನಿಮ್ಮ ಕುದುರೆಯೇ ಚೆನ್ನಾಗಿದೆ. ಬೇರೆಯವರ ಕುದುರೆ ಚೆನ್ನಾಗಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: 'ಹೆತ್ತವರಿಗೆ ಹೆಗ್ಗಣ ಮುದ್ದು' ಎಂದು ಅನಿಸಲೇಬೇಕಲ್ಲ. ನಾನು ಹೇಳಿದ ವಿಷಯ, ಕೆಲವು technical problemಗಳಿಂದ ನೀವು ಏನು ಕೆಲಸ ಮಾಡಿದರೂ ತೊಂದರೆಗೊಳಗಾಗುತ್ತೀರಿ. ಒಂದು ಹೇಳುತ್ತೇನೆ, ಕೆಲಸ ಮಾಡುವುದಾದರೆ, ಅದರಲ್ಲಿ ಯಶಸ್ವಿಯಾದರೆ ನಿಮಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. Atleast ನೀವಾದರೂ ಆ ಭಾಗದ ಜನರ ಸಮಸ್ಯೆಯನ್ನು ಯಾವುದೋ ಒಂದು ರೀತಿಯಲ್ಲಿ ಮಾಡಿ ಇವತ್ತು ಏನು ಆ ಆಸೆಯನ್ನು ನೆರವೇರಿಸುತ್ತಿದ್ದೀರಿ, ಅದಕ್ಕೆ ನನ್ನ ಸಂಪೂರ್ಣ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಧ್ಯಕ್ಷರೆ, ಏತಕ್ಕೆ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದೆ ಎಂದರೆ, 1995ನೇ ಇಸವಿಯಲ್ಲಿ ನಡೆದ ಎರಡು ಮೂರು ವಿಷಯಗಳನ್ನು ಹೇಳುತ್ತೇನೆ. ಈ ರಾಜ್ಯದಲ್ಲಿ ಹಲವಾರು ಸರ್ಕಾರಗಳಲ್ಲಿ ಹಲವಾರು ಜನ ಪ್ರಮುಖವಾದ ನಿರ್ಣಯಗಳನ್ನು ಮಾಡಿರತಕ್ಕಂಥದ್ದು ಏನಿದೆ, ಆ ನಿರ್ಣಯಗಳಿಗೆ ಯಾರಿಂದ ಏನಾಯಿತು ಎಂದು ಜನಗಳಿಗೆ ಸರಿಯಾದ ಮಾಹಿತಿಯನ್ನು ನೀಡುವುದರಲ್ಲಿ ಎಲ್ಲೋ ಒಂದು ಕಡೆ ಏನು ಲೋಪಗಳಾಗಿವೆ, ಕೆಲಸ ಮಾಡತಕ್ಕಂತಹವರಿಗೆ ಎಲ್ಲೋ ಒಂದು ಕಡೆ ನಾವು ಅವರ ಪ್ರೋತ್ಸಾಹಕ್ಕೆ ತಣ್ಣೀರೆರಚಿದ್ದೇವೆ ಎನ್ನತಕ್ಕಂತಹ ದೃಷ್ಟಿಯಿಂದ ಈ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಈ UKP project ವಿಷಯದಲ್ಲಿ ಸನ್ಮಾನ್ಯ ದೇವೇಗೌಡರು Irrigation Minister ಆಗಿ Central Water Commission ನಿಂದ 524 ಮೀಟರ್‌ಗೆ ಗೇಟನ್ನು ಅಳವಡಿಸತಕ್ಕಂಥದ್ದಕ್ಕೆ 1986–87 ರಲ್ಲಿ ಎಲ್ಲಾ ರೀತಿಯ clearance ಅನ್ನು ಪಡೆಯತಕ್ಕಂಥದ್ದರಲ್ಲಿ ಯಶಸ್ವಿಯಾದರೂ 519.7 ಮೀಟರ್‌ಗೆ ನೀರನ್ನು ನಿಲ್ಲಿಸತಕ್ಕಂಥದ್ದಕ್ಕೆ ತೀರ್ಮಾನ ಮಾಡಿ, 519.7 ಮೀಟರ್‌ನಿಂದ 524 ಮೀಟರ್‌ವರೆಗೆ ಬರತಕ್ಕಂತಹ ನೀರನ್ನು ವಿದ್ಯುಚ್ಛಕ್ತಿಯ ಉತ್ಪಾದನೆಗೆ ಬಳಸುವಂತೆ ತೀರ್ಮಾನಗಳನ್ನು ಮಾಡಿದರು, ಇವೆಲ್ಲಾ ಮತ್ತೆ 15 ಮೀಟರ್‌ಗೆ ಕ್ರಸ್ಟ್ ಗೇಟ್ ನಿಲ್ಲಿಸತಕ್ಕಂಥದ್ದು ಕಳೆದ 1962ನೇ ಇಸವಿಯಿಂದ ಪ್ರಾರಂಭವಾದಂತಹ ಈ ಕಾರ್ಯಕ್ರಮಗಳಿಗೆ 1995 ನೇ ಇಸವಿಯಲ್ಲಿ ಚಾಲನೆ ಕೊಟ್ಟಿರುವುದು ಎನ್ನುವುದನ್ನು ಈ ಸದನದ ಮುಖಾಂತರ ಇವತ್ತು ರಾಜ್ಯದ ಜನತೆಗೆ ನಾನು ತಿಳಿಸುವುದಕ್ಕೆ

ಬಯಸುತ್ತೇನೆ. ಸರಿಯಾದ ರೀತಿಯ ಕೆಲಸ ಮಾಡಿದ್ದಕ್ಕೆ ಪ್ರೋತ್ಸಾಹ ಸಿಗದೇ ಇರುವುದಕ್ಕೋಸ್ಕರ ಈ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯದರಾಗಿ ಆ ಸಂದರ್ಭದಲ್ಲಿ ಹೇಳಿದ್ದಾರೆ. ಅಧಿಕಾರ ಉಳಿಸಿಕೊಳ್ಳುವುದಕ್ಕೆ ಪ್ರಧಾನ ಮಂತ್ರಿಗಳಾಗಿ ಸನ್ಮಾನ್ಯ ದೇವೇಗೌಡರು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಲಿಲ್ಲ ಎನ್ನತಕ್ಕಂತಹ ರೀತಿಯಲ್ಲಿ ಚರ್ಚೆಗಳಾಗಿವೆ. ಆ ದೃಷ್ಟಿಯಿಂದ ನಾನು ಇವತ್ತು ಆ clarification ಕೊಡುತ್ತಿದ್ದೇನೆ. Mulawada Lift Irrigation Schemeಗೆ ಸಂಬಂಧಪಟ್ಟ ಹಾಗೆ drought prone area ದಲ್ಲಿ ಬಿಜಾಪುರ ಜಿಲ್ಲೆಯ ಜನತೆಗೆ ಶಾಪ ಇತ್ತು, ಆ ಶಾಪ ವಿಮೋಚನೆ ಆಗಬೇಕೆಂಬ ತೀರ್ಮಾನಕ್ಕೋಸ್ಕರವಾಗಿ ಅಲ್ಲಿಯ ಒಂದು Head work design ಗಳನ್ನು ಏನು create ಮಾಡಬೇಕಾಗಿತ್ತು, ಆ ಸಂದರ್ಭದಲ್ಲಿ ಈ ಕಾರ್ಯಕ್ರಮಗಳಿಗೆಲ್ಲಾ ಚಾಲನೆ ಕೊಟ್ಟಿರತಕ್ಕಂಥದ್ದು. ಅದರ ಜೊತೆಗೆ ಆಲಮಟ್ಟಿ Lift Irrigation ಇರಬಹುದು, ರಾಮಪುರ Lift Irrigation ಇರಬಹುದ ಮಾನ್ಯ ಅಮರೇಗೌಡ ಬಯ್ಯಾಪುರರವರು ಇಲ್ಲ, ಕೊನೆಗೆ ನಾವೇ ಹೋಗಿ ಉದ್ಘಾಟನೆ ಮಾಡಬೇಕಾಗಿ ಬಂದಿತು. ಕಡೆಗೆ ನಾನೇ ನಿಮ್ಮ ಜೊತೆ ಬಂದು ಉದ್ಘಾಟನೆ ಮಾಡಬೇಕಯಿತಲ್ಲ. ಅದರ ಜೊತೆಗೆ ನಾರಾಯಣಪುರ Right Bank Canal ನಿಂದ ಏನು ದೇವದುರ್ಗಕ್ಕೆ Irrigation ಆಗಿದೆ, ದೇವದುರ್ಗದ ಶಾಸಕರು ಇಲ್ಲಿ ಇದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಪಾಪ ಸಚಿವರಾಗಿದ್ದಾರೆ. ಅವರ ಕ್ಷೇತ್ರಕ್ಕೆ ಅಭಿವೃದ್ಧಿ ಕೆಲಸ ಆಗಬೇಕೆಂದು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಇವತ್ತು ಸರ್ಕಾರದ ಪರ ಹೋಗಿದ್ದೇನೆಂದು ಹೇಳಿದ್ದಾರೆ. ಅವರಿಗೆ ಇನ್ನು ಅವೆಲ್ಲಾ ಏನೂ ಗೊತ್ತಿಲ್ಲ. 40 ದಿವಸಗಳಲ್ಲಿ ಅಭಿವೃದ್ಧಿ ಕೆಲಸಕ್ಕೆ ಆ ಭಾಗದ ಜನ ಬಹಳ ಒತ್ತಾಸೆ ಮಾಡಿ ನೀವು ಜೆಡಿಎಸ್ ಪಕ್ಷಕ್ಕೆ ರಾಜೀನಾಮೆ ಕೊಟ್ಟು ಬಿಜೆಪಿ ಪಕ್ಷಕ್ಕೆ ಸೇರಿಕೊಳ್ಳಿ ಎಂದು ಹೇಳಿದ್ದಾರೆಂದು ಕಾಣುತ್ತದೆ. ಪಾಪ ಮಂತ್ರಿಗಳು ಇದ್ದಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಸಿ.ಸಿ.ಪಾಟೀಲ್: ಬಯ್ಯಾರಪುರ ಅವರ ಕ್ಷೇತ್ರದ ನೀರಾವರಿ ಯೋಜನೆಗೆ ತಾವು ಹೋಗಿ ಪೂಜೆ ಮಾಡಿದಿರಿ. ಆದರೆ ಕಳಸಾ ಬಂಡೂರಿಗೆ ತಾವು ಪೂಜೆ ಮಾಡಲಿಕ್ಕೆ ಎಂಬ ನೋವು ಆ ಭಾಗದ ಜನತೆಗೆ ಇದೆ. ಆ ಭಾಗದ ಜನತೆಗೆ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರು ಬರಲಿಲ್ಲ ಎನ್ನುವಂತಹ ನೋವು ಕೂಡ ಇದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಏತಕ್ಕೆ ನಾನು ಬರಲಿಲ್ಲವೆಂದರೆ, ಕಾನೂನಿನ ತೊಡಕುಗಳು ಇದ್ದವು. ನಾನು ಯಾವುದೇ ಒಂದು ಕಾರ್ಯಕ್ರಮಕ್ಕೆ ಹೋಗಲು

ತೀರ್ಮಾನ ಮಾಡಿದರೆ, ಆ ತೀರ್ಮಾನಗಳಲ್ಲಿ ಯಾವುದೇ ರೀತಿಯ ತಾತ್ಕಾಲಿಕ ಖುಷಿ ಕೊಡತಕ್ಕಂತಹ ಕಾರ್ಯಕ್ರಮ ಅಲ್ಲ. ಆ ಕಾರ್ಯಕ್ರಮದ ಬಗ್ಗೆ ತೀರ್ಮಾನ ಮಾಡಿದರೆ ಸಂಪೂರ್ಣವಾಗಿ ಆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಆ ದೃಷ್ಟಿಯಿಂದ ಅವತ್ತು ನಾನು ಆ ಕಾರ್ಯಕ್ರಮಕ್ಕೆ ಬರಲಿಲ್ಲ ಹೊರತು, ಆ ಕಾರ್ಯಕ್ರಮಕ್ಕೆ ಬರಬಾರದು ಎನ್ನುವ ದೃಷ್ಟಿಯಿಂದ ಬರಲಿಲ್ಲ ಎನ್ನತಕ್ಕಂಥದ್ದನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಎಲ್ಲಾ ಕಾರ್ಯಕ್ರಮಗಳ Head work design ಎಲ್ಲದಕ್ಕೂ 1995ನೇ ಇಸವಿಯಲ್ಲಿ ಏನು ತೀರ್ಮಾನಗಳು ಮಾಡಿದರು, ಅದರ ಜೊತೆಗೆ ಯಾವ first phase ನಲ್ಲಿ workಗಳನ್ನು ತೆಗೆದುಕೊಳ್ಳಬೇಕಾಗಿತ್ತು, first phase workಗಳನ್ನೂ second phase workಗಳು ಏನಿತ್ತು ಅದನ್ನೂ first phase ನಲ್ಲಿ ಮುಗಿಸಬೇಕೆಂದು ನಿರ್ಧಾರಗಳನ್ನು ಮಾಡಿದರು. ನಾನು ಏತಕ್ಕೆ ಈ ವಿಷಯವನ್ನು ಪ್ರಸ್ತಾಪ ಮಾಡಿದೆ ಎಂದರೆ, ನಾವು ವಿರೋಧ ಪಕ್ಷದಲ್ಲಿದ್ದಾಗ ಒಂದು ರೀತಿ ಮಾತನಾಡುತ್ತೇವೆ. ಆ ಭಾಗದಲ್ಲಿದ್ದಾಗ ಒಂದು ರೀತಿಯಲ್ಲಿ ಮಾತನಾಡುತ್ತೇವೆ. ಅವತ್ತು ಏನು ದೇವೇಗೌಡರು ಒಂದು ಸಾವಿರ ಕೋಟಿ ಹಣ ಈ ವರ್ಷದಿಂದ ಕೊಡತಕ್ಕಂತಹ ನಿರ್ಧಾರವನ್ನು ನಮ್ಮ ಸರ್ಕಾರ ಮಾಡಿದೆ ಎಂದು ಹೇಳಿದ್ದಕ್ಕೆ, ಆಗ ಈ ಭಾಗದಲ್ಲಿ ಕುಳಿತು ಬರೀ 500 ಕೋಟಿ ರೂ. ಬಜೆಟ್‌ನಲ್ಲಿ ತೋರಿಸಿದ್ದೀರಿ, ಇನ್ನುಳಿದ 500 ಕೋಟಿ ರೂ. ತೋರಿಸಲಿಲ್ಲವೆಂದು ದೊಡ್ಡ ವಾದವನ್ನು ಮಾಡಿರತಕ್ಕಂಥದ್ದು ಇವತ್ತು ನಾನು ಗಮನಿಸಿರತಕ್ಕಂತಹ ಅಂಶ. ಆ ದೃಷ್ಟಿಯಿಂದ ಇವತ್ತು ಈ ವಿಷಯಗಳನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸಿದೆ. ಅದರ ಜೊತೆಗೆ ಯಾವ ಒಂದು UKP ವಿಷಯದಲ್ಲಿ ಆ ಭಾಗದ ಜನತೆ ಆದಷ್ಟು ಬೇಗ ಕಾಮಗಾರಿಗಳು ಆಗಬೇಕೆಂದಿದ್ದರೂ ಆ ಸಂದರ್ಭದಲ್ಲಿ ಏನು ಸನ್ಮಾನ್ಯ ನಿಜಲಿಂಗಪ್ಪನವರು ಶ್ರೀಮತಿ ಇಂದಿರಾಗಾಂಧಿಯವರನ್ನು ಬಿಜಾಪುರಕ್ಕೆ ಕರೆದುಕೊಂಡು ಬಂದು ಚಿನ್ನದಲ್ಲಿ ಅವರನ್ನು ತೂಗಿಸಿದರು. ಅದರ ಜೊತೆಗೆ ಇದೇ ಸದನ ಅವತ್ತು ಒಂದು ಠರಾವು ಪಾಸ್ ಮಾಡುತ್ತಾರೆ. ಈ ಸದನದಲ್ಲಿ unanimous ಆಗಿ Karnataka Government ನ ಎಲ್ಲಾ ಪ್ರಾಜೆಕ್ಟ್‌ಗಳೇನಿವೆ, Central Fund ಅನ್ನು Central Government ನವರು ಕೊಡಬೇಕೆದು, ಹಾಗೂ ಎಲ್ಲಾ ಪ್ರಾಜೆಕ್ಟ್‌ಗಳನ್ನು Central Government overtake ಮಾಡಬೇಕೆಂದು ಒಂದು ಠರಾವು ಪಾಸ್ ಮಾಡಿ ಕೇಂದ್ರ ಸರ್ಕಾರದ ಮುಂದೆ ಹೋದಾಗ ನಮ್ಮ ರಾಜ್ಯಕ್ಕೆ ಒಂದು ನಯಾ ಪೈಸೆ ಹಣವನ್ನು ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗುವವರೆಗೂ ಕೇಂದ್ರ ಸರ್ಕಾರ ಕೊಡಲಿಲ್ಲ. ಇವತ್ತು ಈ ರಾಜ್ಯದಲ್ಲಿ ಅವರನ್ನು ಒಬ್ಬ ಖಳನಾಯಕರಾಗಿ ನಾವು ಸೃಷ್ಟಿ ಮಾಡಿದ್ದೇವೆ. ಏನು ಇವರು ಪ್ರಧಾನ ಮಂತ್ರಿಗಳಾಗಿ ಹೋಗಿ ಕೂತರು

ಮೊದಲನೇ ಬಾರಿಗೆ Accelerated Irrigated Funds ಎಂದು ಒಂದು ಯೋಜನೆ ಅಡಿಯಲ್ಲಿ ಎಲ್ಲಾ ರಾಜ್ಯಗಳ on going projects ಗೆ ಹಣವನ್ನು ಕೊಡಬೇಕೆಂದು ತೀರ್ಮಾನ ಮಾಡಿ ಅವತ್ತು ಏನು ಮೊದಲನೇ ಬಾರಿಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಗಳ ನೀರಾವರಿ ಯೋಜನೆಗಳಿಗೆ ಹಣವನ್ನು ಕೊಡತಕ್ಕಂತಹ ನಿರ್ಧಾರ ಮಡಿದರು, ಅದರ ಆಧಾರದ ಮೇಲೆ ಇವತ್ತು, ಹಲವಾರು ಮೀಡಿಯಂ ಪ್ರಾಜೆಕ್ಟ್‌ಗಳಿಗೂ ಸುಮಾರು 2000 ಕೋಟಿ ರೂ.ಗಳಷ್ಟು ಹಣ ಬಂದಿದ್ದು ಅವತ್ತು ಅವರು ತೆಗೆದುಕೊಂಡ ನಿರ್ಧಾರದಿಂದ ಈ ರಾಜ್ಯಕ್ಕೆ ಬಂದಿರತಕ್ಕಂಥದ್ದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಯಾವ Irrigation Project ಗಳ ಬಗ್ಗೆ ತಾವು ಚರ್ಚೆ ಮಾಡಿದ್ದೀರಿ, ಹೋದ ವರ್ಷದ 653 ಕೋಟಿ ರೂ.ಗಳ ಪೆಂಡಿಂಗ್ ಬಿಲ್ಲಿನ ಕಾಮಗಾರಿಗಳು ಆಗಿರತಕ್ಕಂಥದ್ದು ನಾವು ಕೊಡಲಿಕ್ಕೆ ಸಾಧ್ಯವಾಗಿಲ್ಲ. ಯಾವ ರೀತಿ ನೀವು ಇವತ್ತು 13% ಕಡಿತ ಮಾಡಿ, ಈ ಒಂದು ಕಾಮಗಾರಿಗಳಿಗೆ ಮುಂದಿನ ಯೋಜನೆಗಳಿಗೆ ನೀವು ಹಣವನ್ನು ತೊಡಗಿಸುತ್ತೀರಿ ಎನ್ನತಕ್ಕಂಥದ್ದು ನಮ್ಮೆಲ್ಲರನ್ನು ಕಾಡತಕ್ಕಂತಹ ಅನುಮಾನಗಳು ಬಹುಶಃ ಇವತ್ತು ನೀರಾವರಿ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಎಲ್ಲೋ ಒಂದು ಕಡೆ ಈ ಸರ್ಕಾರ 100ಕ್ಕೆ 100 ವಿಫಲರಾಗುತ್ತಾತೆ ಎನ್ನುವುದನ್ನು ಬಜೆಟ್‌ನಲ್ಲಿ ಅಲೋಕೇಟ್ ಮಾಡಿರುವ ಹಣವನ್ನು ನಾವು ನೋಡಿದಾಗ ಊಹೆ ಮಾಡಿಕೊಳ್ಳಬಹುದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಶಿಕ್ಷಣ ಕ್ಷೇತ್ರದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಸರ್ಕಾರದಲ್ಲಿ ಹಲವಾರು ವಿಷಯಗಳನ್ನು ಏನು ನಿರ್ಧಾರ ಮಾಡಿದರು, ಅದು ನಮ್ಮ ಸರ್ಕಾರದಲ್ಲಿ ಆದಂತಹ ನಿರ್ಧಾರಗಳು. BJPಯವರು ನಾವೇ ಮಾಡಿದ್ದೆವೆಂದು ಹೇಳುತ್ತಾರೆ, ಬಹಳ ಸಂತೋಷ. ಇವತ್ತಿನ ಬಜೆಟ್ ಬಗ್ಗೆ ಚರ್ಚೆ ಮಾಡುತ್ತೇನೆ. ಇವತ್ತು ಏನಾಗಿದೆ ಅಧ್ಯಕ್ಷರೆ, Housing Scheme ಬಗ್ಗೆ ಹೇಳಬೇಕೆಂದರೆ, 1994ನೇ ಇಸವಿಯಲ್ಲಿ ಸದನದಲ್ಲಿ ನಡೆದ ಕಲಾಪಗಳನ್ನು ಓದುತ್ತಿದ್ದಾಗ ನೋಡಿದೆ. 6ನೇ ಮಾರ್ಚ್ 1996ನೇ ಇಸವಿಯಲ್ಲಿ ಈ ಸದನದಲ್ಲಿ ಚರ್ಚೆ ಆದಾಗ ಈ ರಾಜ್ಯದಲ್ಲಿ ಮುಂದಿನ ನಾಲ್ಕು ವರ್ಷಗಳಲ್ಲಿ 19.50 ಲಕ್ಷ ಜನ ಸೈಟ್ ಮತ್ತು ನಿವೇಶನ ಇಲ್ಲದೇ ಇರುವವರು ಯಾರಿದ್ದಾರೆಂದು 1996ನೇ ಇಸವಿಯಲ್ಲಿ ಒಂದು ಸರ್ವೇ ಮಾಡಿ 19.50 ಲಕ್ಷ ಜನರಿಗೆ ನಿವೇಶನ ಮತ್ತು ಮನೆಗಳು ಇಲ್ಲ ಎನ್ನತಕ್ಕಂತಹ ಒಂದು ವರದಿಯನ್ನು ಮಾಡುತ್ತಾರೆ, ಅದರ ಆಧಾರದ ಮೇಲೆ ಮುಂದಿನ ನಾಲ್ಕು ವರ್ಷಗಳಲ್ಲಿ 19 ಲಕ್ಷ ಮನೆಗಳನ್ನು ಕಟ್ಟಬೇಕು ಎನ್ನತಕ್ಕಂಥ ನಿರ್ಧಾರ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇಲ್ಲಿಯವರೆವಿಗೆ ನಾನು ಮುಖ್ಯಮಂತ್ರಿಯಾಗಿದ್ದಾಗ ಕಳೆದ ವರ್ಷ ಸಭೆಗಳನ್ನು ನಡೆಸಿದಾಗ ಈ ಬಗ್ಗೆ ಮಾಹಿತಿಯನ್ನು ಕೇಲಿದಾಗ ನನಗೆ ನಮ್ಮ

ಅಧಿಕಾರಿಗಳು ಕೊಟ್ಟಂಥ ಮಾಹಿತಿ ಏನೆಂದರೆ 24 ಲಕ್ಷ ಮನೆ ಇಲ್ಲದೇ ಇರತಕ್ಕಂಥವರು, ನಿವೇಶನ ಇಲ್ಲದೇ ಇರತಕ್ಕಂಥವರಿದ್ದಾರೆ ಎನ್ನತಕ್ಕಂಥ ವರದಿಯನ್ನು 2007 ನೇ ಇಸವಿಯಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ ನನ್ನ ಗಮನಕ್ಕೆ ತಂದಿದ್ದಾರೆ. ಆ ದೃಷ್ಟಿಯಿಂದಲೇ ನಾನು ಭಾಷಣವನ್ನು ಪ್ರಾರಂಭ ಮಾಡಬೇಕಾದರೆ ಹೇಳಿದ್ದು, ನೀವು ಯಾವ ಯಾವ ಇಲಾಖೆಗೆ ಎಷ್ಟು ಶೇಕಡಾವಾರು ಹಣವನ್ನು ಕೊಡುತ್ತಿದ್ದೀರೋ ಆ ವಿಷಯದ ಬಗ್ಗೆ ನಾನು ಹೆಚ್ಚಿಗೆ ಪ್ರಾಮುಖ್ಯತೆ ಕೊಡುವುದಕ್ಕೆ ಹೋಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ ಉದ್ದೇಶ, ಇವೊತ್ತು ಶೇಕಡಾವಾರು ಹಣ ಕೊಡುವುದರಿಂದ ನಮ್ಮ ಕಾರ್ಯಕ್ರಮಗಳನ್ನು ಯಶಸ್ವಿ ಮಾಡುತ್ತೇವೆ ಎಂದು ಹೇಳುವುದಕ್ಕಿಂತ ಹೆಚ್ಚಾಗಿ ನಾವು ಕೊಡತಕ್ಕಂಥ ಹಣ ಯಾವ ರೀತಿಯಲ್ಲಿ ಇವೊತ್ತು ಆ ಕಾಮಗಾರಿಗಳು ಸಂಪೂರ್ಣಗೊಳ್ಳಬೇಕಾಗುತ್ತದೆ, ಯಾವ ಯೋಜನೆಯನ್ನು ನಾವು ಕೈಗೆತ್ತಿಕೊಳ್ಳುತ್ತೇವೆ ಆ ಯೋಜನೆಗಳು ಸಂಪೂರ್ಣ ಮಾಡಲು ಯಾವ ಗುರಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ ಆ ಗುರಿಯನ್ನು ಇಟ್ಟುಕೊಳ್ಳದೇ ಇದ್ದರೆ ಬಹುಶಃ ಈ ಒಂದು ವಸತಿ ಇಲಾಖೆಗೆ ಸಂಬಂಧ ಪಟ್ಟಂತೆ ಇವೊತ್ತೇನು ನಾವು ಯೋಜನೆಗಳಲ್ಲಿ 800 ಕೋಟಿ ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಇವರು ಹೇಳಿದ್ದಾರೆ, ಕಳೆದ ವರ್ಷ 550 ಕೋಟಿ ಕೊಟ್ಟಿರಬಹುದು, ಈ ಬಾರಿ 800 ಕೋಟಿ ಎಂದು ಹೇಳಿದ್ದಾರೆ. ಆದರೆ ನಾವು ಇವೊತ್ತು ಸಭೆಗಳನ್ನು ಮಾಡಿದಾಗ ಅಧಿಕಾರಿಗಳು ಕೊಡತಕ್ಕಂಥ ಮಾಹಿತಿಗಳನ್ನು ನೋಡಿದರೆ ನಾವು ಇನ್ನೂ ಹಿಂದೆ ಹಿಂದಕ್ಕೆ ಹೋಗುತ್ತಿದ್ದೇವೆಯೇ ಹೊರತು ಮುಂದೆ ಹೆಜ್ಜೆ ಇಡತಕ್ಕಂಥ ಕೆಲಸಗಳು ಆಗುತ್ತಿಲ್ಲವೆನ್ನತಕ್ಕಂಥ ವಿಷಯವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರ ಜೊತೆಗೆ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ನಾನು ಮಾಧ್ಯಮಗಳಲ್ಲಿ ನೋಡಿದೆ, ಬಜೆಟ್ ಅನ್ನು ಮಂಡನೆ ಮಾಡಿದ ನಂತರ ಬೆಂಗಳೂರು ನಗರಕ್ಕೆ ಯಾರೂ ಮಾಡದಂಥ ಕಾರ್ಯಕ್ರಮಗಳನ್ನು ಮಾಡಿಬಿಟ್ಟಿದ್ದಾರೆ ಎನ್ನತಕ್ಕಂಥ ರೀತಿಯಲ್ಲಿ ಪತ್ರಿಕೆಗಳಲ್ಲಿ ಬೆಂಗಳೂರು ನಗರಕ್ಕೆ ಸಿಂಹಪಾಲು ಎಂದು ಹಾಕಿದ್ದಾರೆ. ಯಾವ ರೀತಿಯಲ್ಲಿ ಸಿಂಹಪಾಲು ಕೊಟ್ಟಿದ್ದಾರೆ? 1800 ಕೋಟಿ ಎಂದು ತೋರಿಸಿದ್ದಾರೆ. ಎಲ್ಲಿದೆ 1800 ಕೋಟಿ? 1800 ಕೋಟಿ ರೂಪಾಯಿಗಳನ್ನು ಎಲ್ಲಿಂದ ವಿನಿಯೋಗ ಮಾಡುತ್ತಾರೆ? ಇವೊತ್ತು ವಾಸ್ತವಾಂಶ ಕೊಟ್ಟಿರತಕ್ಕಂಥ ಹಣ ಕೇವಲ 300 ಕೋಟಿ ರೂಪಾಯಿಗಳು. ಅದರ ಮೇಲೆ ಇವರು ಯಾವುದೇ ರೀತಿಯ ಹಣವನ್ನು ಬಜೆಟ್‌ನಿಂದ ಕೊಡುವುದಕ್ಕೆ ಸಾಧ್ಯವಿಲ್ಲವೆನ್ನತಕ್ಕಂಥದ್ದನ್ನು ಬಜೆಟ್ ಅನ್ನು ನೋಡಿದರೆ ಗೊತ್ತಾಗುತ್ತದೆ. ಇವೊತ್ತು ಬೆಂಗಳೂರು ನಗರದ ವ್ಯಾಪ್ತಿಗೆ

ಸಂಬಂಧಪಟ್ಟಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸತಕ್ಕಂಥದ್ದಕ್ಕೆ ಬೆಂಗಳೂರು ಮಹಾನಗರಪಾಲಿಕೆ ಇರಬಹುದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವಿರಬಹುದು, ಬಿ.ಎಂ.ಟಿ.ಸಿ. ಇರಬಹುದು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇರಬಹುದು, ಈ ಎಲ್ಲಾ ಸಂಸ್ಥೆಗಳು ಏನು ಹಣವನ್ನು ಅವರಲ್ಲಿ ಇವೊತ್ತು ಖರ್ಚು ಮಾಡತಕ್ಕಂಥದ್ದಕ್ಕೆ ಅವರ ಒಂದು ವ್ಯಾಪ್ತಿಯಲ್ಲಿ ಮಾಡುತ್ತಿದ್ದಾರೆ ಅದೆಲ್ಲವನ್ನೂ ಇವರು ಸೇರಿಸಿಕೊಂಡು ಈ ಕೆಲಸಗಳಿಗೆ ನಾವು ಇನ್‌ವೆಸ್ಟ್‌ಮೆಂಟ್ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಇವೊತ್ತು ಏರ್‌ಪೋರ್ಟ್‌ಗೆ ಹೈಸ್ಪೀಡ್ ರೈಲನ್ನು ನಾವು ತರತಕ್ಕಂಥದ್ದಕ್ಕೆ ಪ್ರಾಜೆಕ್ಟ್‌ನ್ನು ತರುತ್ತೇವೆ ಎಂದು ಹೇಳಿದ್ದಾರೆ. ಇವೆಲ್ಲ ತೀರ್ಮಾನವನ್ನು ಹಿಂದಿನ ಸರ್ಕಾರದಲ್ಲಿಯೇ ನಾವು ಮಾಡಿರತಕ್ಕಂಥದ್ದು. ಹೊಸ ಸರ್ಕಾರ ಬಂದ ನಂತರ ಯಾವುದೇ ರೀತಿಯ ಹೊಸ ನಿರ್ಧಾರಗಳನ್ನು ಮಾಡಿಲ್ಲವೆನ್ನತಕ್ಕಂಥದ್ದನ್ನು ಸರ್ಕಾರದ ಅಂಕಿ ಅಂಶಗಳಿವೆ ಅವುಗಳು ನಮ್ಮ ಕಣ್ಣ ಮುಂದೆ ಇದೆ. ನೀವು ಒಂದು ಒಳ್ಳೆಯ ಕಾರ್ಯಕ್ರಮಗಳನ್ನು ತರುತ್ತಿರತಕ್ಕಂಥ ವಿಷಯದಲ್ಲಿ ನಾನು ಟೀಕೆಯನ್ನು ಮಾಡುತ್ತಿದ್ದೇನೆ ಎನ್ನತಕ್ಕಂಥ ಅಥವಾ ಅಸೂಯೆಯಿಂದ ಮಾತನಾಡುತ್ತಿದ್ದೇನೆ ಎಂಬ ಭಾವನೆ ಯಾರಾದರೂ ಸದಸ್ಯರ ಮನಸ್ಸಿನಲ್ಲಿ ಮೂಡಿದರೆ ಅದು ಸರಿಯಲ್ಲ. ಏಕೆಂದರೆ ಇರತಕ್ಕಂಥ ವಾಸ್ತವಾಂಶಗಳನ್ನು ನಾನು ಹೇಳುತ್ತಿದ್ದೇನೆ. ಇದನ್ನು ಕೇವಲ ನಾನು ಇಡುತ್ತಿರುವ ಮಾಹಿತಿಗಳಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಬಿ.ಡಿ.ಎ. ಬಗ್ಗೆ ಬಜೆಟ್‌ನಲ್ಲಿ ಹೇಳಲಾಗಿದೆಯಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಬಿ.ಡಿ.ಎ.ಗೆ ಸರ್ಕಾರದ ಬಜೆಟ್‌ನಿಂದ ಕೊಡತಕ್ಕಂಥ ಹಣವಲ್ಲ. 60 ವರ್ಷಗಳ ಇತಿಹಾಸದಲ್ಲಿ ಬಜೆಟ್‌ನಲ್ಲಿ ಬಿ.ಡಿ.ಎ. ಯಿಂದ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಬಜೆಟ್‌ನ ಕಾರ್ಯಕ್ರಮ ಎಂದು ನೀವು ಯಾರಾದರೂ ಹೇಳಿದ್ದೀರ? ಮೊದಲನೆಯ ಬಾರಿಗೆ ಆ ನಿರ್ಧಾರ ತೆಗೆದುಕೊಂಡಿದ್ದೀರಿ. ಇಲ್ಲಿ ಸೋಮಣ್ಣನವರು ಕುಳಿತಿದ್ದಾರೆ, ನಾನು ಹೇಳಬೇಕಾಗುತ್ತದೆ. ನನಗಿಂತ ಸ್ವಲ್ಪ ಅವರಿಗೂ ಅನುಭವ ಇದೆ. ಅವರು ಬೆಂಗಳೂರು ಭಾಗದಲ್ಲಿ ಶಾಸಕರಾಗಿದ್ದವರು. ಇವೊತ್ತು ಬಿ.ಎಂ.ಪಿ.ಯಲ್ಲಿ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ನೀವು ಸೇರಿಸಿಕೊಂಡರೆ ಹೇಗೆ? ಕರ್ನಾಟಕ ರಾಜ್ಯ ಸರ್ಕಾರದ ಬಜೆಟ್‌ನಿಂದ ಕೊಡತಕ್ಕಂಥ ಹಣವಲ್ಲ ಅದು. ಆ ಒಂದು ಸಂಸ್ಥೆಗಳಿಂದ ವಿನಿಯೋಗ ಮಾಡತಕ್ಕಂಥ ಹಣ ಅದು. ನೀವು ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧ್ಯಕ್ಷರು ಮೊನ್ನೆ ಫೋಟೋ ತೆಗೆಸಿಕೊಂಡಿರುವುದನ್ನು ಪತ್ರಿಕೆಯಲ್ಲಿ ನಾನು ನೋಡಿದೆ. ಮಳವಳ್ಳಿಯ ಹತ್ತಿರ ಶುದ್ಧೀಕರಣ ಘಟಕಕ್ಕೆ ನೀವು

ಹೋಗಿ ಫೋಟೋ ತೆಗೆಸಿಕೊಂಡು 2010 ರೊಳಗೆ ಬೆಂಗಳೂರು ನಗರಕ್ಕೆ 4ನೇ ಸ್ಟೇಜ್‌ನಿಂದ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಯಾವಾಗ ಇದು ಪ್ರಾರಂಭವಾಯಿತು? ನಾನು ಈ ಸದನದ ಮುಖಾಂತರ ಏತಕ್ಕಾಗಿ ಹೇಳುತ್ತಿದ್ದೇನೆಂದರೆ,,,

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಫೋಟೋವನ್ನು ನಾನು ತೆಗೆಸಿಕೊಂಡಿದ್ದಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಛೇ,ಛೇ,ಛೇ, ಫೋಟೋ ತೆಗೆಸಿಕೊಂಡದ್ದು ತಪ್ಪು ಎಂದು ನಾನು ಹೇಳಲಿಲ್ಲ. ನಾನು ನಿಮ್ಮನ್ನು ಟೀಕೆ ಮಾಡುತ್ತಿಲ್ಲ. ಮಾನ್ಯ ಸಚಿವರೆ ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:- ಕುಮಾರಸ್ವಾಮಿಯವರು ಹೇಳಿದ್ದು ಫೋಟೋ ನೋಡಿದರೆ ಎಂದು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ನೀನು ಸುಮ್ಮನೆ ಕುಳಿತುಕೊಳ್ಳಪ್ಪಾ. ಫೋಟೋವನ್ನು ನಾನೂ ತೆಗೆಸಿಕೊಂಡಿದ್ದೇನೆ, ಅಣ್ಣಾರವರೂ ತೆಗೆಸಿಕೊಂಡಿದ್ದಾರೆ, ಎಲ್ಲರೂ ಫೋಟೋವನ್ನು ತೆಗೆಸಿಕೊಂಡಿದ್ದೇವೆ. ನಾನು ಹೇಳುತ್ತಿರುವುದು ಫೋಟೋ ಬಗ್ಗೆಯಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಮಾನ್ಯ ಸಚಿವರೆ, ನನು ಈಲ್ಡ್ ಆಗಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ. ನಾನು ಏತಕ್ಕಾಗಿ ಈ ವಿಷಯವನ್ನು ಪ್ರಸ್ತಾಪ ಮಾಡಿದೆನೆಂದರೆ, ನಮ್ಮ ರಾಜ್ಯದ ಜನರು ಯಾವ ರೀತಿ ಇದ್ದಾರೆಂದರೆ ಯಾರಾದರೂ ಕಾರ್ಯಕ್ರಮವನ್ನು ಘೋಷಣೆ ಮಾಡಿದರೆ ಅದು ಯಾರ ಕಾಲದಲ್ಲಿ ಪ್ರಾರಂಭವಾಯಿತು, ಅದಕ್ಕೆ ಯಾರು ಚಾಲನೆ ಕೊಟ್ಟರು ಎಂಬುದನ್ನು ಮರೆಯತಕ್ಕಂಥ ಜನರಾಗಿದ್ದಾರೆ. ಆ ದೃಷ್ಟಿಯಿಂದ ಇವೊತ್ತು ಆ ಬಗ್ಗೆ ಸ್ಪಷ್ಟೀಕರಣ ಕೊಡುವುದಕ್ಕೆ ಹೇಳುತ್ತಿದ್ದೇನೆ. ನಿಮ್ಮನ್ನು ಟೀಕೆ ಮಾಡಬೇಕೆಂದಲ್ಲ. ಇವೊತ್ತು ಕಾರ್ಯಕ್ರಮವನ್ನು ನೀವು ಮುಂದುವರಿಸುತ್ತಿದ್ದೀರಿ. ಆ ಕೆಲಸವನ್ನು ಮಾಡಬೇಕಾದ ಮತ್ತು ಮುಂದುವರಿಸಬೇಕಾದ ಜವಾಬ್ದಾರಿ ನಿಮ್ಮ ಮೇಲಿದೆ. ಇವೊತ್ತು ಪತ್ರಿಕೆಗಳಲ್ಲಿಬಂದಿರುವ ವರದಿಗಳನ್ನು ನೋಡಿದಾಗ ಎಲ್ಲೋ ಈ ಹೊಸ ಸರ್ಕಾರ ಬಂದು ಮೂರೇ ತಿಂಗಳಲ್ಲಿ ಜಂಥರ್ ಮಂಥರ್ ಮಾಡಿ ಬೆಂಗಳೂರು ನಗರಕ್ಕೆ ನಾಲ್ಕನೇ ಹಂತದಿಂದ ಕುಡಿಯುವ ನೀರನ್ನು ಕೊಟ್ಟರು ಎನ್ನುವ ಭಾವನೆಯನ್ನು ತಿಳಿದುಕೊಳ್ಳತಕ್ಕಂಥ ಜನರಿದ್ದಾರೆ. ಆ ದೃಷ್ಟಿಯಿಂದ ನಾನು ಆ ಬಗ್ಗೆ ಸ್ಪಷ್ಟೀಕರಣ ಕೊಡುವುದಕ್ಕೆ ಹೇಳಿದೆ. ನಾನು ಏತಕ್ಕಾಗಿ ಹೇಳಿದೆನೆಂದರೆ ಈ ಬಗ್ಗೆ 1996ರಲ್ಲಿ

ಸದನದಲ್ಲಿ ನಡೆದಿರುವಂಥ ಕಲಾಪದಲ್ಲಿ ಪ್ರಸ್ತಾಪವಾಗಿದೆ. ನಮ್ಮ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ನಮ್ಮ ಅಧಿಕಾರಿಗಳು ಯಾವ ರೀತಿಯಲ್ಲಿ ಅನುಷ್ಠಾನ ತರತಕ್ಕಂಥದ್ದಕ್ಕೆ 20 ವರ್ಷ, 25 ವರ್ಷ ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳುವುದಕ್ಕೆ ಹೇಳಿದೆ. ನಾವು ಕಾರ್ಯಕ್ರಮವನ್ನು ಪ್ರಾರಂಭ ಮಾಡಬೇಕೆಂದು ಯೋಜನೆಯನ್ನು ಸಿದ್ಧಪಡಿಸಿದ ಮೇಲೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಎಷ್ಟೆಷ್ಟು ವರ್ಷ ತೆಗೆದುಕೊಳ್ಳುತ್ತಾರೆ ಎಂಬುದನ್ನು ಉದಾಹರಣೆ ಕೊಡುವುದಕ್ಕೆ ಹೇಳುತ್ತಿರತಕ್ಕಂಥದ್ದು, ಆ ದೃಷ್ಟಿಯಿಂದ ಹೇಳಿದೆನೇ ಹೊರತು ನಾನು ನಿಮ್ಮನ್ನು ಟೀಕೆ ಮಾಡಬೇಕೆಂದು ಹೇಳಲಿಲ್ಲ. 1996ರಲ್ಲಿ ಸದನದ ಕಲಾಪದಲ್ಲಿ ಸನ್ಮಾನ್ಯ ದೇವೇಗೌಡರೆ ಉತ್ತರ ಕೊಡುತ್ತಾ ಹೇಳುತ್ತಾರೆ, ಇನ್ನು ಮುಂದೆ ನಗರಗಳಿಗೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆಂದು ಈ ಸಂದರ್ಭದಲ್ಲಿ ನಾನು ಹೇಳಲೇಬೇಕಾಗಿದೆ, ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಕಾವೇರಿ ನದಿಯಿಂದ ನೀರು ತರುವ ನಾಲ್ಕನೇ ಹಂತದ ಯೋಜನೆಗೆ ಓವರ್‌ಸೀಸ್ ಎಕನಾಮಿಕ್ ಕೋ-ಆಪರೇಶನ್ ಫಂಡ್, ಜಪಾನ್ ಸಂಸ್ಥೆಯಿಂದ 1070 ಕೋಟಿ ರೂಪಾಯಿಗಳನ್ನು ಸಾಲ ಪಡೆಯುವುದಕ್ಕೆ ಅಗ್ರಿಮೆಂಟ್ ಸೈನ್ ಆಗಿದೆ. ಆದರೆ ಇದರ ಬಗ್ಗೆ ಕೇಂದ್ರ ಸರ್ಕಾರದವರು ಒಂದು ದೋಷ ತೆಗೆದಿದ್ದಾರೆ. ನೀವು ಕಳಸಾ ಬಂಡೂರಿಯದ್ದನ್ನು ಹೇಳಿದಿರಲ್ಲಾ. ಅದಕ್ಕೆ ಇಲ್ಲೇ ಎಕ್ಸಾಂಪಲ್ ಇದೆ. ಅಧ್ಯಕ್ಷರೆ, ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ತರುವುದಕ್ಕೆ ನಾಲ್ಕನೇ ಹಂತದ ಕೆಲಸ ಪ್ರಾರಂಭ ಮಾಡುವುದಕ್ಕೆ ಕೇಂದ್ರ ಸರ್ಕಾರದ ಮುಂದೆ 9.5 ಟಿ.ಎಂ.ಸಿ. ನೀರನ್ನು ಪಡೆಯತಕ್ಕಂಥದ್ದಕ್ಕೆ ರಾಜ್ಯ ಸರ್ಕಾರದಿಂದ ನಾವೇನು ಅನುಮತಿಯನ್ನು ಕೋರಿ ಅವೊತ್ತು ಕೇಂದ್ರ ಸರ್ಕಾರದ ಮುಂದೆ ಪ್ರಸ್ತಾವನೆಯನ್ನು ಕಳುಹಿಸಿದ್ದೆವು. ಆ ಪ್ರಸ್ತಾವನೆಯ ವಿಷಯದಲ್ಲಿಯೇ ಅವೊತ್ತು ದೇವೇಗೌಡರು ಪ್ರಸ್ತಾಪ ಮಾಡುತ್ತಾ ನೀರು ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ಸಿಕ್ಕಿದ ಮೇಲೆ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತೇವೆ ಎಂದಿದ್ದಾರೆ. ಈ ಕಾರ್ಯಕ್ರಮವನ್ನು 1996 ರಲ್ಲಿ ಏನು ಪ್ರಾರಂಭ ಮಾಡುವುದಕ್ಕೆ ಅವೊತ್ತು ಜಪಾನ್ ಸಂಸ್ಥೆಯಿಂದ 1070 ಕೋಟಿ ರೂಪಾಯಿಗಳ ಸಾಲ ಪಡೆದು ಯೋಜನೆಯ ಕಾರ್ಯಕ್ರಮವನ್ನು ಪ್ರಾರಂಭ ಮಾಡಬೇಕಾಗಿತ್ತು. ಇವೊತ್ತು ಆ ಕಾರ್ಯಕ್ರಮದ ವೆಚ್ಚ ಎಷ್ಟಾಗಿದೆ ಎಂದರೆ ಅದು 3300 ಕೋಟಿಗೆ ಬಂದಿದೆ. 1070 ಕೋಟಿ ರೂಪಾಯಿಗಳಲ್ಲಿ ಪ್ರಾರಂಭ ಮಾಡಬೇಕಾದಂಥ ಕಾರ್ಯಕ್ರಮ. ಕೇಂದ್ರ ಸರ್ಕಾರ 9.5 ಟಿ.ಎಂ.ಸಿ. ನೀರನ್ನು ಕೊಡತಕ್ಕಂಥ ವಿಷಯದಲ್ಲಿ ತಮಿಳುನಾಡು ಸರ್ಕಾರದವರು ಏನು ತಕರಾರನ್ನು ತೆಗೆದರೋ ಅದರಿಂದಾಗಿ ಕೆಲಸ ಪ್ರಾರಂಭ

ಮಾಡುವುದಕ್ಕೆ ಡಿಲೇ ಆಯಿತು. ಅವೊತ್ತು ದೇವೇಗೌಡರು ಪ್ರಧಾನ ಮಂತ್ರಿಗಳಾಗಿ ದೆಹಲಿಗೆ ಹೋಗಿದ್ದರಿಂದ ಬೆಂಗಳೂರು ನಗರಕ್ಕೆ 9.5. ಟಿ.ಎಂ.ಸಿ. ನೀರನ್ನು ಕೊಡತಕ್ಕಂಥದ್ದಕ್ಕೆ ಪ್ರಧಾನ ಮಂತ್ರಿಯಾಗಿ ಅವರು ಅನುಮತಿ ಕೊಟ್ಟಿದ್ದರಿಂದ ತದನಂತರದಲ್ಲಿ ಈ ಕೆಲಸಕ್ಕೆ ಚಾಲನೆ ಸಿಕ್ಕಿತು. ಅಲ್ಲಿಯವರೆವಿಗೂ ಕೇಂದ್ರ ಸರ್ಕಾರ ಚಾಲನೆಯನ್ನು ಕೊಟ್ಟಿರಲಿಲ್ಲ. ಇವೊತ್ತು ಕೇಂದ್ರ ಸರ್ಕಾರದಿಂದ ಕಳಸಾ ಬಂಡೂರಿ ನಾಲೆ ವಿಷಯದಲ್ಲಿಯೂ ಅದೇ ರೀತಿ ಆಗತಕ್ಕಂಥದ್ದು, ನೀವು ಕೆಲಸ ಮಾಡಬಹುದು, ಕಾಲುವೆ ತೋಡಬಹುದು, ಆಮೇಲೆ ಎಲ್ಲೋ ಒಂದು ಕಡೆ ಸ್ಟ್ರಕ್ ಆಗುತ್ತದೆ. ಹಣವನ್ನು ಏನು ನೀವು ವಿನಿಯೋಗ ಮಾಡುತ್ತೀರಿ ಆ ಹಣ ಇವೊತ್ತು ಸಾರ್ವಜನಿಕರಿಗೆ ಉಪಯೋಗಕ್ಕೆ ಬರದೇ ಇರತಕ್ಕಂಥ ರೀತಿಯಲ್ಲಿ ಆ ಕಾರ್ಯಕ್ರಮವಾಗುತ್ತದೆ ಎನ್ನತಕ್ಕಂಥದ್ದಕ್ಕೆ ನಾನು ಹೇಳುತ್ತಿರತಕ್ಕಂಥದ್ದು. ಇದು ಬೆಂಗಳೂರು ನಗರದ 4ನೇ ಹಂತದ ಕುಡಿಯುವ ನೀರಿನ ವಿಷಯದಲ್ಲಿ ನಡೆದಿರತಕ್ಕಂಥ ಘಟನೆ.

ಶ್ರೀ ಕಟ್ಟಾ ಸುಬ್ರಹ್ಮನ್ಯ ನಾಯ್ಡು:– ಈಗಾಗಲೇ ಫಸ್ಟ್ ಫೇಸ್ ಆಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:– ಈಗ ಕೆಲಸವಾಗಿದೆ. ನಾನು ಹೇಳುತ್ತಿರತಕ್ಕಂಥದ್ದು ನಾಲ್ಕನೇ ಹಂತದ ವಿಷಯದಲ್ಲಿ ನೀವು ಏನು ಹೇಳುತ್ತಿದ್ದೀರಿ ಅದಕ್ಕೋಸ್ಕರವಾಗಿ ನಾನು ಹೇಳುತ್ತಿರತಕ್ಕಂಥದ್ದು, ಯಾವ ಯಾವ ರೀತಿ ನಡೆದಿದೆ ಎನ್ನತಕ್ಕಂಥದ್ದಕ್ಕೆ ನಾನು ಹೇಳಿದ್ದು. ಏಕೆಂದರೆ ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತಾಗ ಏನು ಚರ್ಚೆ ಮಾಡುತ್ತೀರಿ ಮತ್ತು ಸರ್ಕಾರ ನಡೆಸಬೇಕಾದರೆ ಏನು ಎಂಬುದು ಮುಖ್ಯವಾಗಿರುತ್ತದೆ. ಆಮೇಲೆ ಅಧ್ಯಕ್ಷರೆ ನಾನು ನೋಡಿದೆ, ಬಹುಶಃ ಯಾವ ಸರ್ಕಾರಗಳು ಕೇವಲ 20 ರಿಂದ 25 ದಿವಸಗಳಲ್ಲಿ ಕೋಟ್ಯಾಂತರ ರೂಪಾಯಿಗಳ ಜಾಹಿರಾತನ್ನು ಕೊಟ್ಟಿದ್ದ ಸರ್ಕಾರವನ್ನು ನಾನೂ ಎಂದೂ ನೋಡಿರಲಿಲ್ಲ. ಇಡೀ ದೇಶದಲ್ಲೇ ಎಲ್ಲೂ ಈ ರೀತಿ ಜಾಹಿರಾತು ಕೊಡಲಿಲ್ಲವೇ ಎಂದು ನನಗೆ doubt. ಯಾವ ಸರ್ಕಾರಗಳು ಕೊಡಲಿಲ್ಲವೇ? ಏನು ಜಾಹಿರಾತು ಕೊಡುತ್ತಾರೆ? ಅಂದರೆ ಅಭಿವೃದ್ಧಿಯ ಕನಸುಗಾರ ಯಡಿಯೂರಪ್ಪನವರು, ಬೆಂಗಳೂರು ಅಭಿವೃದ್ಧಿ ಬಗ್ಗೆ ನನ್ನದೆ ಕನಸು ಇದೆ. ಬಜೆಟ್‌ನಲ್ಲಿ ಏನಿದೆ? ಯಾವ ಕನಸು ಇದೆ? ನಾಲ್ಕು page article, ಎಲ್ಲಾ ಪೇಪರ್‌ನಲ್ಲಿ ಇದೆ, ನಾನು ನಿಮಗೆ ಒಂದು ಪೇಪರ್ ಮಾತ್ರ ತೋರಿಸುತ್ತಿದ್ದೇನೆ. 13 ವಿಮಾನ ನಿಲ್ದಾಣಗಳ ನಿರ್ಮಾಣ, ಬಿಜೆಪಿ ಸರ್ಕಾರದಿಂದ ದಿಟ್ಟ ಹೆಜ್ಜೆ, ಸಂಚಾರಿ ಪೀಠಗಳ ಕಾರ್ಯಾರಂಭಕ್ಕೆ ನಾಂದಿ.....

ಡಾ:ಹೆಚ್.ಸಿ.ಮಹದೇವಪ್ಪ: ಬಿಜೆಪಿಯವರು ಆದ್ಯತೆ ಕೊಡದೇ ಇದ್ದರೆ, ಈ ದೇಶದಲ್ಲಿ ಇನ್ನು ಯಾರು ಕೊಡಬೇಕು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ high speed rail. 20 ದಿವಸದಲ್ಲಿ ಇವರೇ decision ತೆಗೆದುಕೊಂಡು ಪ್ರಾರಂಭ ಮಾಡಿದರೋ ಎನ್ನುವ ರೀತಿಯಲ್ಲಿ, ಬೆಂಗಳೂರು ನಗರದ ನಾಗರೀಕರು ಏನು 17 ಶಾಸಕರ ಸ್ಥಾನಗಳನ್ನು ಗಳಿಸಿಕೊಟ್ಟು ಇಲ್ಲಿ ಕೂರಿಸಿದ್ದಾರೆ, ಅವರಿಗೆ ಬಣ್ಣ ಬಣ್ಣದ ಚಿತ್ರಣದಲ್ಲಿ ಜಾಹೀರಾತು ಕೊಟ್ಟಿದ್ದಾರೆ. ಈ projectಗೆ ಮಾನ್ಯ ಧರ್ಮಸಿಂಗ್ ಸರ್ಕಾರ ಇರಬಹುದು, ನಮ್ಮ ಸರ್ಕಾರ ಇರಬಹುದು, ಹಲವಾರು ಸಭೆಗಳನ್ನು ಮಾಡಿದ್ದೇವೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ high speed ರೈಲು ಸಂಪರ್ಕ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮಾರ್ಚ್ 2008ರ ಅಂತ್ಯದಲ್ಲಿ ಪ್ರಾರಂಭಿಸಲಾಗುವುದು. ಈ ವಿಮಾನ ನಿಲ್ದಾಣವು ಬೆಂಗಳೂರು ನಗರದಿಂದ ಸುಮಾರು 34 ಕಿಮೀ ದೂರದಲ್ಲಿದ್ದು, ಹೆಚ್ಚಿನ ಸಂಚಾರವನ್ನು ಭರಿಸಲು ಪ್ರಸಕ್ತ ರಸ್ತೆ ಸೌಲಭ್ಯವು ಶಕ್ತವಾಗಿರುವುದಿಲ್ಲ. ರಸ್ತೆ ಮೂಲಕ ನಗರದ ವಿವಿಧ ಭಾಗವನ್ನು ತಲುಪಲು ಒಂದರಿಂದ ಎರಡು ಗಂಟೆಗಳಷ್ಟು ಹೆಚ್ಚಿನ ಸಮಯ ತಗಲುವುದು. ವಿಮಾನ ಪ್ರಯಾಣಿಕರ ಸಂಖ್ಯೆಯು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರೈಲು ಸಂಪರ್ಕ ಕಲ್ಪಿಸುವ ಅಗತ್ಯವನ್ನು ಮನಗಾಣಲಾಯಿತು. ಬೆಂಗಳೂರು ನಗರದಲ್ಲಿ chek-in ಸೌಲಭ್ಯ ಹೊಂದಿದ ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರೈಲು ಸಂಪರ್ಕ ಕಲ್ಪಿಸಲು ವಿವರವಾದ ಕಾರ್ಯಯೋಜನಾ ವರದಿಯನ್ನು ಹೈಟೆಕ್ ಮುಖಾಂತರ ತಯಾರಿಸಲು ರಾಜ್ಯ ಸರ್ಕಾರವು ದೆಹಲಿಯ ಮೆಟ್ರೋ ರೈಲು ನಿಗಮ ನಿಯಮಿತಕ್ಕೆ ವಹಿಸಿದೆ. ಇದಕ್ಕೆ ನಾವು ಕಳೆದ ಬರಿಯೇ ರೂ.40 ಕೋಟಿ ಬಂಡವಾಳ ಹೂಡಿಕೆ ಹಾಕಿ ಹಣ ಬಿಡುಗಡೆ ಮಾಡಿ, ಈಗಾಗಲೇ ಘನವೆತ್ತ ರಾಜ್ಯಪಾಲರ ಆಡಳಿತದಲ್ಲಿ ಬಿ.ಓ.ಟಿ. ಮೇಲೆ ಮಾಡಲು ಅಂಕಿತವನ್ನು ಕೊಟ್ಟಿದ್ದಾರೆ. ಇವು ಈ ಸರ್ಕಾರದ ಸಾಧನೆಗಳಲ್ಲ. ಆದರೆ ಅವರು ಈಗಾಗಲೇ ನಮ್ಮ ಸರ್ಕಾರದ ಸಾಧನೆ ಎಂದು ತೋರಿಸಿಕೊಂಡಿದ್ದಾರೆ. ಅದರ ಜೊತೆಗೆ ಹಲವಾರು ವಿಮಾನ ನಿಲ್ದಾಣಗಳ ಬಗ್ಗೆ ಹಿಂದಿನ ಸರ್ಕಾರದಲ್ಲೇ ನಾವು ತೀರ್ಮಾನ ಮಾಡಿದ್ದೇವೆ. ಇವರು ಬಜೆಟ್‌ನಲ್ಲಿ ಒಂದು ವಿಚಾರವನ್ನು ತೋರಿಸಿದ್ದಾರೆ. ಬೆಂಗಳೂರಿನಲ್ಲಿ ಎರಡು ವಿಮಾನ ನಿಲ್ದಾಣ ಮಾಡುತ್ತೇವೆಂದು ಹೇಳಿದ್ದಾರೆ. ಈಗಾಗಲೇ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಕಟ್ಟುವಂಥ ಸಂದರ್ಭದಲ್ಲಿ ಕರಾರು ಒಪ್ಪಿಗೆ ಆಗಿರತಕ್ಕಂಥದ್ದು ಏನು? ಬೆಂಗಳೂರು ನಗರದ ಈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ಸುಮಾರು 200 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ವಿಮಾನ ನಿಲ್ದಾಣಗಳನ್ನು operate ಮಾಡಬಾರದು ಎನ್ನತಕ್ಕಂಥ ಕರಾರು ಆಗಿದೆ. ಇವರು

ಪ್ರಣಾಳಿಕೆಯಲ್ಲಿ ನಾವು ಎರಡು ವಿಮಾನ ನಿಲ್ದಾಣಗಳನ್ನು ನಿರ್ಮಾಣ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ನಾನು ವಸತಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಚರ್ಚೆ ಮಾಡಬೇಕಾದರೆ, ಇನ್ನೊಂದು ವಿಷಯವನ್ನು ನಾನು ಹೇಳಲಿಲ್ಲ. ಎಲ್ಲಾ ಆಶ್ರಯ ಮನೆಗಳ ಮೇಲಿನ ಸಾಲವನ್ನು ಮನ್ನಾ ಮಾಡುತ್ತೇವೆ ಎನ್ನತಕ್ಕಂಥ ಯೋಜನೆಯನ್ನು ಪ್ರಣಾಳಿಕೆಯಲ್ಲಿ ಇಟ್ಟಿದ್ದಾರೆ. ಅದರ ಬಗ್ಗೆ ಇವತ್ತು ಚಕಾರ ಇಲ್ಲ. 650 ಕೋಟಿ ರೂ. ಸಂಪೂರ್ಣವಾಗಿ ಸಾಲ ಮನ್ನಾ ಮಾಡುತ್ತೇವೆನ್ನತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಮೆಟ್ರೋ ರೈಲ್‌ಗೆ 700 ಕೋಟಿ ರೂ. ಕೊಟ್ಟಿರುವ ಬಗ್ಗೆ ಹೇಳುವುದಾದರೆ, ನೀವು ಇದ್ದರೂ ಅದನ್ನು ಕೊಡಬೇಕಾಗಿತ್ತು, ಇನ್ಯಾರಿದ್ದರೂ ಕೊಡಬೇಕಾಗಿತ್ತು. ಅದು ಈಗಾಗಲೇ ಆಗಿರತಕ್ಕಂಥ ಒಪ್ಪಂದ. ನನಗೆ ಸಿಕ್ಕಿರತಕ್ಕಂಥ ಮಾಹಿತಿಯ ಪ್ರಕಾರ ವಿಮಾನ ನಿಲ್ದಾಣಗಳನ್ನು ಕಟ್ಟತಕ್ಕಂಥ ಕೆಲಸ ಈಗ ಏನು ಪ್ರಾರಂಭ ಆಗಿದೆ ಅದು ನಿಧಾನ ಗತಿಯಲ್ಲಿ ನಡೆಯುತ್ತಿತ್ತು. ನಾನು ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಈ ಕಾರ್ಯಕ್ರಮಗಳಿಗೆ ಯಾವುದೇ ತೊಡಕು ಆಗಬಾರದು ಎನ್ನುವ ದೃಷ್ಟಿಯಿಂದ ವೇಗವಾಗಿ ಕೆಲಸವಾಗುವಂತೆ ಹಲವಾರು ತೀರ್ಮಾನಗಳನ್ನು ಮಾಡಿದ್ದೆವು. ಆ ಕೆಲಸಕ್ಕೆ ಕೆಲವೊಂದು ಭಾಗದಲ್ಲಿ ಅಡಚಣೆಗಳು ಆಗತಕ್ಕಂಥದ್ದಕ್ಕೆ ಏನು ಮಾರ್ಗದ ವಿಚಾರದಲ್ಲಿ ತೀರ್ಮಾನಗಳು ಆಗಿತ್ತು, ಅದನ್ನು ಮತ್ತೆ ಬದಲಾವಣೆ ಮಾಡತಕ್ಕಂಥ ನಿರ್ಧಾರಗಳು ಇವತ್ತಿನ ಸರ್ಕಾರದಲ್ಲಿ ತೀರ್ಮಾನವನ್ನು ಮಾಡುವುದಕ್ಕೆ ಅಧಿಕಾರಿಗಳ ಮೇಲೆ ಒತ್ತಡವನ್ನು ತಂದು ಕಾಮಗಾರಿಗಳು ನಿಧಾನ ಗತಿಯಲ್ಲಿ ಆಗುವಂಥಾ ರೀತಿಯಲ್ಲಿ ಪ್ರೇರೇಪಣೆಯಾಗಿದೆ ಎನ್ನುವಂಥ ಮಾಹಿತಿ ನನ್ನ ಮುಂದೆ ಇದೆ ಎನ್ನುವಂಥ ವಿಚಾರವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಬೆಂಗಳೂರು ನಗರದ ವಿಷಯಕ್ಕೆ ಸಂಬಂಧಪಟ್ಟಹಾಗೆ ಏನು ದೊಡ್ಡ ದೊಡ್ಡ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರು ನಗರಕ್ಕೆ ಕುಡಿಯುವ ನೀರಿಗೆ 100 ಕೋಟಿ ರೂಪಾಯಿ ಇಡುತ್ತೇವೆಂದು ಹೇಳಿದ್ದಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯೋಜನೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಈ ನಗರದ ಜನ ಅನುಭವಿಸುತ್ತಿದ್ದಾರೆ, ಅದಕ್ಕೆ ಏನು ಹಣ ಮೀಸಲು ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ನಾನು ಒಂದು ಮಾತನ್ನು ಕೇಳುವುದಕ್ಕೆ ಬಯಸುತ್ತೇನೆ, ಇವತ್ತು ಬೋರ್‌ವೆಲ್‌ನ್ನು ಕೊರೆದರೆ ನೀರು ಸಿಗುವುದಕ್ಕೆ ಅವಕಾಶಗಳಿವೆಯೇ? ಬೆಂಗಳೂರು ನಗರದ ಕೆರೆಗಳ ವಿಚಾರದ ಬಗ್ಗೆ ಲಕ್ಷ್ಮಣ್ ರಾವ್ ಕಮಿಟಿ ಮಾಡಲಾಗಿತ್ತು. ನಾವೆಲ್ಲ ಆಗ ರಾಜಕೀಯಕ್ಕೆ ಬಂದಿರಲಿಲ್ಲ. ಮಾನ್ಯ ಸೋಮಣ್ಣನವರು, ರೋಷನ್ ಬೇಗ್‌ರವರು ಅವತ್ತು ನಗರದ ಜನ ಪ್ರತಿನಿಧಿಗಳಾಗಿ ಇದ್ದರು. ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಲಕ್ಷಣ್ ರಾವ್

ಕಮಿಟಿಯನ್ನು appoint ಮಾಡಿ, ಅವರು ಒಂದು ವರದಿಯನ್ನು ಕೊಟ್ಟರು. ಅದರಲ್ಲಿ 236 ಕೆರೆಗಳನ್ನು ಸಂರಕ್ಷಣೆ ಮಾಡಬೇಕು, ಅದರ ಮುಖಾಂತರ ಬೆಂಗಳೂರಿನ ಮುಂದಿನ ದಿನಗಳಲ್ಲಿ ನೀರಿಗಾಗಿ ಏನು ಹಾಹಾಕಾರ ಆಗುತ್ತದೆ ಅದನ್ನು ಸರಿಪಡಿಸಬೇಕಾದರೆ, ಕೆರೆಗಳಿಂದ ground water ಅನ್ನು ಏನು ಉಪಯೋಗ ಮಾಡಬೇಕಾಗುತ್ತದೆ, ಆ ಕೆರೆಗಳನ್ನು ಸಂರಕ್ಷಣೆ ಮಾಡಬೇಕೆಂದು ನಿರ್ಧಾರ ಮಾಡಿದರು. ನಂತರ ಏನಾಯಿತು? ಇವತ್ತು ಸಂಪೂರ್ಣವಾಗಿ ಬೆಂಗಳೂರಿನಲ್ಲಿ ಕೆರೆಗಳು ಎಲ್ಲೆಲ್ಲಿವೆ ಎಂದು ಹುಡುಕಬೇಕು. ರಾಜ ಕಾಲುವೆಗಳು ಎಲ್ಲೆಲ್ಲಿವೆ ಎಂದು ಹುಡುಕಬೇಕು. ನೀವು ನೂರು ಕೋಟಿ ಹಣವನ್ನು ಕುಡಿಯುವ ನೀರಿಗೆ ಬೋರ್‌ವೆಲ್ ಮುಖಾಂತರ ತೆಗೆಯತಕ್ಕಂಥದ್ದಕ್ಕೆ ಎಷ್ಟು ಸಮರ್ಥವಾಗಿ ಯಶಸ್ಸನ್ನು ಪಡೆಯುವುದಕ್ಕೆ ಸಾಧ್ಯ ಎನ್ನುವ ಚಿಂತನೆ ಇದೆ. ಇವತ್ತು ಬೆಂಗಳೂರು ನಗರದ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಏನು ಹೇಳಿದ್ದೀರಿ, ಅದಕ್ಕೆ ನೀವು ಕೊಟ್ಟಿರತಕ್ಕಂಥದ್ದು ಕೇವಲ ಮುನ್ನೂರು ಕೋಟಿ ರೂಪಾಯಿ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ. ಮೂಲಭೂತ ಸೌಕರ್ಯಗಳಿಗೆ ಮುಂದಿನ ದಿನಗಳಲ್ಲಿ 36,000 ಕೋಟಿ ರೂ. ಹಣ ಹೂಡಿಕೆ ಆಗಬೇಕಾಗುತ್ತದೆ ಎನ್ನುವ ಅಂದಾಜು ಏನು ಮಾಡಲಾಗಿದೆ ಅದನ್ನು ಸರ್ವೆ ಮಾಡಿಸಬೇಕೆಂದು ತೀರ್ಮಾನ ಮಾಡಿದಂಥದ್ದು ನನ್ನ ಸರ್ಕಾರದಲ್ಲಿ. ಸರ್ವೆ ಮಾಡಿಸಿ, ಈ 36,000 ಕೋಟಿ ರೂಪಾಯಿಗಳ ಅಂದಾಜನ್ನು ಏನು ಮಾಡಿದ್ದೇವೆ, ಅದಕ್ಕೆ ಇವರು ಕೊಡತಕ್ಕಂಥ ಹಣ ಯಾವ ರೀತಿ ಉಪಯೋಗಕ್ಕೆ ಬರಬಹುದು? ಬೆಂಗಳೂರು ನಗರಕ್ಕೆ ಈ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮುಂದಿನ ಎಷ್ಟು ವರ್ಷಗಳು ಬೇಕು ಎಂದು ಕೇಳುವುದಕ್ಕೆ ಬಯಸುತ್ತೇನೆ. ಬಹುಶಃ ಕೇಂದ್ರ ಸರ್ಕಾರದಿಂದ JNNURM ಅಡಿಯಲ್ಲಿ ಸ್ವಲ್ಪ ಹಣ ಬಿಡುಗಡೆಯಾಗದೇ ಹೋಗಿದ್ದರೆ ನಗರದ ಪರಿಸ್ಥಿತಿ ಏನಾಗುತ್ತಿತ್ತು ಎನ್ನುವುದನ್ನು ನಾನು ಇವತ್ತು ಕೇಳಬೇಕಾಗುತ್ತದೆ.

ಇವತ್ತು 60,000 ನಿವೇಶನಗಳ ಬಡಾವಣೆಯನ್ನು ನಿರ್ಮಿಸಲಾಗುವುದು. ಇದರಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ 20% ಕೊಡುತ್ತೇವೆಂದು ಹೇಳಿದ್ದೀರಿ. ಈ ಬಡಾವಣೆಗಳನ್ನು ನಮ್ಮ ಸರ್ಕಾರದಲ್ಲಿ ತೀರ್ಮಾನ ಮಾಡಿ ಒಂದು ಸದನದ ಸಮಿತಿಯ ಮುಖಾಂತರ ನಾವು ಬೆಂಗಳೂರು ನಗರದಲ್ಲಿರತಕ್ಕಂಥ ಸರ್ಕಾರಿ ಭೂಮಿಯನ್ನು ವಶಪಡಿಸಿಕೊಳ್ಳುವಂಥ ಕೆಲಸವನ್ನು ಮಾಡಿದ್ದೆವು. ಅದರ ಆಧಾರದ ಮೇಲೆ ಇವತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮನೆಗಳನ್ನು ಕಟ್ಟತಕ್ಕಂಥದ್ದಕ್ಕೆ ಭೂಮಿಯನ್ನೇನು ಕೊಟ್ಟಿದ್ದೇವೆ, ಅದು ಹಿಂದಿನ ಸರ್ಕಾರದಲ್ಲಿ ತೆಗೆದುಕೊಂಡಂಥ ಕಾಮಗಾರಿಗಳು. ಅದನ್ನು ನೀವು ಹೊಸದಾಗಿ ತೋರಿಸುತ್ತಿದ್ದೀರಿ.

ಹೋದ ವರ್ಷದಲ್ಲೇ ನಾವು ತೀರ್ಮಾನ ಮಾಡಿದ್ದೇವೆ. ನಾಡಪ್ರಭು ಕೆಂಪೇಗೌಡರ ಬಡಾವಣೆ, ಶಿವರಾಮಕಾರಂತರ ಬಡಾವಣೆ, ಡಿ.ದೇವರಾಜ ಅರಸು ಬಡಾವಣೆ, ನಿಜಲಿಂಗಪ್ಪ ಬಡಾವಣೆ, ಕೆ.ಸಿ.ರೆಡ್ಡಿ ಬಡಾವಣೆ ಹೀಗೆ ಐದು ಬಡಾವಣೆಗಳನ್ನು ನಿರ್ಮಾಣ ಮಾಡತಕ್ಕಂಥದ್ದು ಇರಬಹುದು, peripheral road ಗಳ ಬಗ್ಗೆ ಏನು ಚರ್ಚೆ ಮಾಡಿದ್ದಾರೆ, ಇವುಗಳ ಬಗ್ಗೆ ಹಲವಾರು ಸಭೆಗಳನ್ನು ಮಾಡಿ, proceedings ಆಗಿ, ಸರ್ಕಾರದಿಂದ ನಾವೇನು ಆದೇಶ ಕೊಟ್ಟಿದ್ದೇವೆ, ಈ ಎಲ್ಲಾ ಕಾರ್ಯಕ್ರಮಗಳು ಹಿಂದಿನ ಸರ್ಕಾರದಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳು ಹೊಸದಾಗಿ ಇವತ್ತು ಈ ಸರ್ಕಾರದಲ್ಲಿ ಮಾಡುವುದಕ್ಕೆ ಹೊರಟಿದ್ದಾರೆ, ಘೋಷಣೆ ಮಾಡುತ್ತಿದ್ದಾರೆ. ಬೆಂಗಳೂರು ನಗರದ ಭೂಮಿ ವಿಷಯ ಬಂದಾಗ ಬಹಳ ಜನ ಒಂದು ರೀತಿಯಾಗಿ ಮಾತನಾಡುತ್ತಾರೆ. ಯಾವುದಕ್ಕೋಸ್ಕರ 24 ಗಂಟೆ ರಾಜಕಾರಣ ಮಾಡಬೇಕಾಗುತ್ತದೆ ಎನ್ನುವುದಕ್ಕೆ ನಾನು ಉದಹರಣೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಅದನ್ನು ಮಾಡದೇ ಇದ್ದರೆ, ಈ ರಾಜ್ಯದಲ್ಲಿ ಎಲ್ಲೋ ಒಂದು ಕಡೆ ನಮ್ಮ ಸರ್ಕಾರದ ಆಸ್ತಿಗಳು ಸ್ವೇಚ್ಛಾಚಾರವಾಗಿ, ಕಬಳಿಕೆಯಾಗುವುದಕ್ಕೆ ಇವತ್ತು ಅವಕಾಶ ಕೊಟ್ಟಹಾಗೆ ಆಗುತ್ತದೆ. Townshipಗಳ ಬಗ್ಗೆ ಚರ್ಚೆ ಮಾಡುವುದಾದರೆ townshipಗಳನ್ನು ಮಾಡಬೇಕೆನ್ನುವಂಥ ನಿರ್ಧಾರವನ್ನು ನಮ್ಮ ಸರ್ಕಾರದಲ್ಲಿ ಮಾಡಿದೆವು. ಹಲವಾರು ಸಭೆಗಳನ್ನು ಮಾಡಿದೆವು. BMRDA ವತಿಯಿಂದ ಆ ಕಾರ್ಯಕ್ರಮಗಳನ್ನು ತರಬೇಕು ಎಂದು ಯೋಜನೆ ಮಾಡಿ ಹೊರಟೆವು. ಹಲವಾರು ಸರ್ಕಾರಗಳು ಬದಲಾವಣೆ ಆದಾಗ, ಸರ್ಕಾರದ ಮುಖಂಡತ್ವವನ್ನು ವಹಿಸಿಕೊಳ್ಳುವವರು ಬದಲಾವಣೆಯಾದಾಗ ಏನಾಗುತ್ತದೆ ಎನ್ನುವುದಕ್ಕೆ 1996ನೇ ಇಸವಿಯಲ್ಲೇ ಈ township ಮಾಡಬೇಕು ಎಂದು ನಿರ್ಧಾರ ಮಾಡುತ್ತಾರೆ. Comprehensive development plan ಎಂದು 1994ರಲ್ಲೇ ಮಾಡಿದ್ದಾರೆ. ಅದಕ್ಕೆ objection ಎಲ್ಲಾ call for ಮಾಡಿ, objection ಎಲ್ಲಾ overrule ಮಾಡಿ, BDAದಿಂದ resolution ಮಾಡಿ ಸರ್ಕಾರಕ್ಕೆ 1994ರಲ್ಲಿ ಕಳುಹಿಸಿಕೊಟ್ಟಿದ್ದಾರೆ. ಈಗ ನಾವು ನಾಲ್ಕು township ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಒಂದು ರಾಮನಗರದಲ್ಲಿ, ಒಂದು ತುಮಕೂರಿನಲ್ಲಿ, ಒಂದು ಅತ್ತಿಬೆಲೆಯಲ್ಲಿ ಹಾಗೂ ಮತ್ತೊಂದು ಕಡೆ ಅದೇ ರೀತಿ super express highway ಮಾಡಬೇಕೆಂದು ಹೇಳಿ ನಿರ್ಣಯ ಮಾಡಿ cabinateನಲ್ಲಿ clear ಮಾಡಿದ್ದೇವೆ. 1994ರಲ್ಲೇ super express highway ಮಾಡಬೇಕೆಂದು ತೀರ್ಮಾನ ಮಾಡುತ್ತಾರೆ. ಆದರೂ ನಾವು ಇವತ್ತಿಗೂ ಚರ್ಚೆಯ ಹಂತದಲ್ಲೇ ಇದ್ದೇವೆ.

ಶ್ರೀ ವಿ.ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಮಾಜಿ ಮುಖ್ಯಮಂತ್ರಿಯವರು ಮಾತನಾಡುತ್ತಿದ್ದಾರೆ, ಅವರು ಹಾಲಿ ಮುಖ್ಯಮಂತ್ರಿಯವರ ಗಮನಕ್ಕೆ ಕೆಲವು

ವಿಚಾರಗಳನ್ನು ತರುತ್ತಿದ್ದಾರೆ ನಾನು ಒಂದೇ ಒಂದು ಪ್ರಶ್ನೆಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಮತ್ತು ಸನ್ಮಾನ್ಯ ಕುಮಾರಸ್ವಾಮಿಯವರಿಗೆ ಕೇಳಬಯಸುತ್ತೇನೆ. ಬೆಂಗಳೂರು ನಗರವನ್ನು ಇನ್ನು ಎಷ್ಟು ಬೆಳೆಸಬೇಕೆಂದು ಇದ್ದೀರಿ? ಈ ನಗರದ ಜನ ಸಾಂದ್ರತೆಗೆ ಇರತಕ್ಕಂಥ infrastructure ಏನು? ಈ ನಗರವನ್ನು ಇದೇ ರೀತಿಯಲ್ಲಿ ಬೆಳೆಸಿಕೊಂಡು ಹೋದರೆ, ಇನ್ನು ಕೇವಲ 10 ರಿಂದ 15 ವರ್ಷಗಳಲ್ಲಿ ಈ ನಗರದ ಜನರ ಜೀವನಮಟ್ಟ ಯಾವ ರೀತಿಯಲ್ಲಿ ಇರಬಹುದು. ಬೆಂಗಳೂರು ನಗರದ ಬೆಳವಣಿಗೆಗೆ ಬೇಕಾದಂಥ ಪೂರಕ ವ್ಯವಸ್ಥೆಗಳನ್ನು ನಾವು ಭರಿಸುವ ಸಾಧ್ಯತೆಗಳು ಇದೆಯಾ? ಈಗ ಇರುವಂಥ ಬೆಂಗಳೂರು ನಗರವನ್ನು ತಹಬದಿಗೆ ತಂದು ಅದನ್ನು ಏನಾದರೂ ಮಾಡಿ ಬೇರೆ ಬೇರೆ ಉಪನಗರಗಳನ್ನು ಮಾಡುವುದಕ್ಕೆ ಅಥವಾ ಬೆಂಗಳೂರು ನಗರದ ಪಕ್ಕದಲ್ಲಿರುವಂಥ ಜಿಲ್ಲೆಗಳನ್ನು ನಾವು ಅಭಿವೃದ್ಧಿಪಡಿಸುವುದಕ್ಕೆ ಚಿಂತನೆ ಮಾಡುವಂಥದ್ದು ಒಳ್ಳೆಯದಾ, ಅಥವಾ ಬೆಂಗಳೂರು ನಗರವನ್ನು ಇನ್ನು ಏನೆಲ್ಲಾ ಮಾಡಿ ಇರುವಂಥ 50 ವರ್ಷಗಳ ಹಳೆಯ ರಸ್ತೆಗಳನ್ನೇ ಇಟ್ಟುಕೊಂಡು ಕಿರಿದಾದಂಥ ಅವೆನ್ಯೂ ರೋಡ್ ಇರಬಹುದು, ಮಾಮೂಲು ಪೇಟೆ ರಸ್ತೆ ಇರಬಹುದು, ಬೆಂಗಳೂರು ನಗರದಲ್ಲಿ 120 ಅಡಿಇರುವಂಥ ರಸ್ತೆಗಳು ಕೇವಲ ನಾಲ್ಕೈದು ಇರಬಹುದು. ಇಂಥ ನಗರದಲ್ಲಿ ಈಗಾಗಲೇ 75 ಲಕ್ಷ ಜನಸಂಖ್ಯೆ ಇದ್ದಾರೆ. ನಾನು ಸರ್ಕಾರವನ್ನು ಮತ್ತು ಮಾನ್ಯ ಕುಮಾರಸ್ವಾಮಿಯವರು ಸಹ ಸುಮಾರು 20 ತಿಂಗಳುಗಳು ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದಾರೆ. ಬೆಂಗಳೂರು ನಗರವನ್ನು ಕಾವು ಇನ್ನೂ ಎಷ್ಟು ಬೆಳೆಸುತ್ತೀರಿ? ಇದರ ಗತಿ ಏನು? ಇನ್ನು 10 ವರ್ಷ ಇದೇ ರೀತಿಯಾಗಿ ಬೆಂಗಳೂರು ನಗರ ಬೆಳೆದರೆ ಹಾಲಿ 26 ಲಕ್ಷ ವಾಹನಗಳು ಇರುವಂಥ ಈ ಬೆಂಗಳೂರಿಗೆ ಇನ್ನು ಎಷ್ಟು ಲಕ್ಷ ವಾಹನಗಳು ಬರುತ್ತವೆ? ಈಗ ವಾಯು ಮಾಲಿನ್ಯ ಏನು? ಕುಡಿಯುವ ನೀರು ಏನು? ರಸ್ತೆ ಏನು? ಒಳ ಚರಂಡಿ ಏನು? ಈಗ ಇರುವಂಥ ಸಣ್ಣ ರಸ್ತೆಗಳಿಗೆ ಸರ್ಕಾರ ಯಾವ ರೀತಿಯಾಗಿ ಕಾರ್ಯೋನ್ಮುಖರಾಗಬೇಕೆನ್ನುವುದರ ಬಗ್ಗೆ ಕೂಡ ತಾವು ಬೆಳಕು ಚೆಲ್ಲಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಮ್ಮ ಹಿರಿಯ ಸದಸ್ಯರು ಬೆಂಗಳೂರು ನಗರದ ಮುಂದಿನ ದಿನಗಳಲ್ಲಿ ಜನರ ಜೀವನಮಟ್ಟ ಯಾವ ರೀತಿಯಾಗಬಹುದೆನ್ನುವುದರ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿ, ಇದಕ್ಕೆ ಸರ್ಕಾರದ ಕಾರ್ಯಕ್ರಮಗಳೇನು ಎನ್ನುವುದರ ಬಗ್ಗೆ ಬೆಳಕು ಚೆಲ್ಲಬೇಕೆಂದು ಹೇಳುತ್ತಿದ್ದಾರೆ. ಇವತ್ತು ಬೆಂಗಳೂರು ನಗರದಲ್ಲಿ 7 CMC, 1 TMC ಹಾಗೂ ಮಹಾ ನಗರ ಪಾಲಿಕೆಯಾಗಿ ಕೆಲಸವನ್ನು ನಿರ್ವಹಿಸುತ್ತಿತ್ತು. ನಮ್ಮ ಕಾಲದಲ್ಲಿ BBMP ಆಗಿ ಏನು

ಪರಿವರ್ತನೆ ಮಾಡಿದ್ದೇವೆ, ಇದನ್ನು ಮಾಡಲು ನಿರ್ಧಾರ ಮಾಡುವುದಕ್ಕೆ ಕಾರಣ ಬೆಂಗಳೂರಿಗೆ ಏನಾದರೂ ಒಂದು ಹೊಸ ರೂಪವನ್ನು ಕೊಡಬೇಕೆಂಬ ದೃಷ್ಟಿಯಿಂದಲೇ ಮಾಡಿರುವುದು. ಆದರೆ ಈ ಕಾರ್ಯಕ್ರಮವನ್ನು ನಾವು ಮಾಡಬೇಕಾದರೆ ಅದಕ್ಕೆ ಒಂದು ಸರಿಯಾದ ರೀತಿಯಲ್ಲಿ ಯೋಜನೆ ಮಾಡಿ ಮುಂದಿನ 50 ವರ್ಷಗಳಲ್ಲಿ ಆ ಯೋಜನೆಗಳ ಫಲ ಜನರಿಗೆ ಸದ್ಬಳಕೆಯಾಗುವಂತೆ ದೂರದೃಷ್ಟಿಯನ್ನು ಇಟ್ಟುಕೊಂಡು ಈ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಸೋಮಣ್ಣನವರು ಹೇಳುವಂಥ ವಿಚಾರಗಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. 1995ನೇ ಇಸವಿಯಲ್ಲಿ ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ - ನೀವು ಬಹಳ ಹತ್ತಿರವಾಗಿದ್ದಂಥವರು. ಅವರ ಕಾಲದಲ್ಲಿ ಬೆಂಗಳೂರು ನಗರ congestion ಏನು ಆಗುತ್ತದೆ, ಅದು ಆಗಬಾರದೆಂಬ ದೃಷ್ಟಿಯಿಂದಲೇ, ಆಗ ಅವರು townshipಗಳನ್ನು ತರಬೇಕೆಂಬ ನಿರ್ಧಾರವನ್ನು ಮಾಡಿ, ಬೆಂಗಳೂರು ನಗರದ ಬೆಳವಣಿಗೆಯನ್ನು ಸ್ವಲ್ಪ ಬೆಂಗಳೂರು ನಗರದಿಂದ ಹೊರಗಡೆ ತೆಗೆದುಕೊಂಡು ಹೋಗಬೇಕೆಂಬ ದೃಷ್ಟಿಯಿಂದ ಆಗ ಅವರು ದೂರದೃಷ್ಟಿಯನ್ನು ಏನು ಇಟ್ಟರು, ಆ ದೃಷ್ಟಿಯಿಂದಲೇ ನಾನು ಭಾಷಣವನ್ನು ಪ್ರಾರಂಭ ಮಾಡಬೇಕಾದರೆ ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದೆ. ಇವತ್ತು ಬಜೆಟ್‌ನ ಆರ್ಥಿಕ ಚಿತ್ರಣವನ್ನು ಇಡುವುದರ ಜೊತೆಗೆ, ಈ ಒಂದು ಬಜೆಟ್‌ನಲ್ಲಿ ಮುಂದಿನ ದೂರದೃಷ್ಟಿ ಏನು ಎನ್ನುವಂಥದ್ದನ್ನು ಸದನದ ಮುಂದೆ ಇಟ್ಟು ಮಾನ್ಯ ಸದಸ್ಯರ ಗಮನ ಸೆಳೆಯುವುದರಲ್ಲಿ ನೀವು ವಿಫಲರಾಗಿದ್ದೀರೆಂಬ ಮಾತನ್ನು ಹೇಳುವುದಕ್ಕೆ ಅದೇ ಕಾರಣ. ಇವತ್ತು complexಗಳನ್ನು ಮತ್ತು ಬೇರೆ ಬೇರೆ ರೀತಿಯಲ್ಲಿ townshipಗಳನ್ನು ಮಾಡಬೇಕೆಂದು ಅವತ್ತು ತೀರ್ಮಾನವನ್ನು ಮಾಡಿದ್ದರು. ಇವತ್ತು ರಾಮಸ್ವಾಮಿಯವರ ಸಿಮಿತಿಯನ್ನು ರಚನೆ ಮಾಡಿ ಸುಮಾರು 35,000 ದಿಂದ 40,000 ಎಕರೆ ಭೂಮಿ ಕಬಳಿಕೆಯಾಗಿರುವುದನ್ನು ಏನು ಪತ್ತೆ ಹಚ್ಚಿದ್ದಾರೆ, ಇದು ಇವತ್ತು ನಿನ್ನೆಯದಲ್ಲವೆನ್ನುವುದಕ್ಕೆ 1996ರ, 5th Marchನಲ್ಲಿ ಇಲ್ಲಿ ನಡೆದಿಉವಂಥ debateನ ಒಂದು ವರದಿಯನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಸದನದಲ್ಲಿ ನಾನು ಸ್ವಲ್ಪ ಸಮಯವನ್ನು ಹೆಚ್ಚಿಗೆ ತೆಗೆದುಕೊಂಡಿದ್ದಕ್ಕೆ ಬೇಜಾರು ಆಗುವುದೇನೋ ಗೊತ್ತಿಲ್ಲ. ಇದು 1996ರಲ್ಲಿ ಸದನದಲ್ಲಿ ಚರ್ಚೆಯಾಗಿದೆ. ನಿಮ್ಮ ಹಿಂದುಗಡೆ ಕುಳಿತಿದ್ದಾರಲ್ಲಾ ಅವರ ನೆರವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ, ಏಕೆಂದರೆ ಬೆಂಗಳೂರು ಹೇಗೆ ಬೆಳೆದಿದೆ, notified areaದಲ್ಲಿ ಏನಾಗಿದೆ? ಇವತ್ತು BDA Areaದಲ್ಲಿ ಏನಾಗಿದೆ? Corporation areaದಲ್ಲಿ ಏನಾಗಿದೆ? ಯಾವ land,

ಖಾತೆ ಯಾರ ಹೆಸರಿನಲ್ಲಿ ಇತ್ತು? ಯಾರ ಹೆಸರಿಗೆ ಹೋಗಿದೆ? ಇದನ್ನು ನೋಡುವಿದೇ ಇವತ್ತು ದೊಡ್ಡ ಕಷ್ಟವಾಗಿದೆ. ನನ್ನ assesmentನಲ್ಲಿ ಮಾನ್ಯ ಅಧ್ಯಕ್ಷರೆ, ಅಂದೇ ಮಾನ್ಯ ಜಾಲಪ್ಪನವರು ಒಂದು preliminary report ತಯಾರು ಮಾಡಿಸಿದ್ದಾರೆ. ಸುಮಾರು 1850 ಎಕರೆ ಭೂಮಿ ಬೆಂಗಳೂರಿನ ಸುತ್ತ ಮುತ್ತ ಅಂದರೆ ಬೆಂಗಳೂರಿಗೆ ಹೊಂದಿಕೊಂಡಂತೆ 1850 ಎಕರೆ ಭೂಮಿ ಇವತ್ತು ಬೇರೆ ಬೇರೆಯವರ ವಶವಾಗಿದೆ. ಇದಕ್ಕೆ ಇವತ್ತು court ಅಡ್ಡ ಬರುತ್ತಿದೆ ನಾನು court ಅನ್ನು ದೂರುತ್ತಿಲ್ಲ, ಅದನ್ನು vacat ಮಾಡಿ action ಮಾಡೋಣವೆಂದರೆ, ಅದರ ಮಧ್ಯೆ ನಮ್ಮ ಸಹೋದರಿಯರು ಅಲ್ಲೇ ಕುಳಿತಿದ್ದಾರೆ. ಆದರೆ ನನ್ನ ಆಸೆ ಏನು ಇದೆಯೆಂದರೆ 1850 ಎಕರೆ ಭೂಮಿಯನ್ನು ವಶಪಡಿಸಿಕೊಂಡರೆ, ಅವತ್ತಿನ rateನಲ್ಲಿ 2,000 ಕೋಟಿ ರೂಪಾಯಿಗಳ ಹಣ ಸಂಗ್ರಹವಾಗುತ್ತದೆಂದು ಮಾನ್ಯ ದೇವೇಗೌಡರು 1996ನೇ ಇಸವಿಯಲ್ಲಿ ಅವತ್ತಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ್ದಾರೆ. ಇವತ್ತು ನಾವು 2008ನೇ ಇಸವಿಯಲ್ಲಿದ್ದೇವೆ. ಇವತ್ತು ತಾವು ಬೆಂಗಳೂರು ನಗರದ ಲ್ಯಾಂಡ್ ಬಗ್ಗೆಯೇ ಒಂದು ನಿಗಮವನ್ನು ಮಾಡುತ್ತೇನೆಂದು ಹೇಳಿದ್ದೀರಿ, ನಾನು ಅದರ ಬಗ್ಗೆ ಮುಂದೆ ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಏನಾಗಿದೆಯೆನ್ನುವಂಥದ್ದನ್ನು 12–13 ವರ್ಷಗಳ ಹಿಂದೆಯೇ ಯಾವ ಒಂದು ಚಿಂತನೆಯನ್ನು ಮಾಡಿದರೋ, ಆ ರೀತಿಯಲ್ಲಿ ಇಲ್ಲಿಯವರೆಗೆ ಯಾವುದೇ ರೀತಿಯಾದಂಥ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ನಗರಾಭಿವೃದ್ಧಿಗೆ ಸಂಬಂಧಪಟ್ಟಂತೆ ಒಂದೆರಡು ವಿಷಯಗಳನ್ನು ನಾನು ಹೇಳತಕ್ಕಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರ ಸಹಕಾರವನ್ನು ನಾನು ಕೋರಬಯಸುತ್ತೇನೆ, ಏಕೆಂದರೆ ಕಳೆದ ಸಮ್ಮಿಶ್ರ ಸರ್ಕಾರ ನಡೆಸುವಂಥ ಸಂದರ್ಭದಲ್ಲಿ ಅತ್ಯಂತ ಹೆಚ್ಚಿನ ಟೀಕೆಗೆ ಒಳಗಾಗಿರುವಂಥವರು ಹಿಂದಿನ ಮಾಜಿ ಪ್ರಧಾನ ಮಂತ್ರಿಯವರು, ಅವರ ಮೇಲೆ ಪ್ರತಿಯೊಂದು development work ವಿಷಯದಲ್ಲಿ ಎಲ್ಲೋ ಒಂದು ಕಡೆ ಅವರು ಸರ್ಕಾರಗಳಿಗೆ ತೊಂದರೆಗಳನ್ನು ಕೊಡುತ್ತಾರೆಂಬ ದೂರನ್ನು ಅವರ ಮೇಲೆ ಇಟ್ಟಿದ್ದಾರೆ. ಇವತ್ತು ಅದರಲ್ಲೂ ಪ್ರಮುಖವಾಗಿ ಬೆಂಗಳೂರು ನಗರದ ವಿಷಯದಲ್ಲಿ ಸನ್ಮಾನ್ಯ ದೇವೇಗೌಡರು ಪದೇ ಪದೇ ಹಿಂದೆ ಇದ್ದಂಥ ಸಮ್ಮಿಶ್ರ ಸರ್ಕಾರಗಳ ಮೇಲೆ ಒತ್ತಡಗಳನ್ನು ತಂದಿದ್ದಾರೆ, ಕೆಲಸಗಳು ಆಗುವುದಕ್ಕೆ ಬಿಟ್ಟಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಇವತ್ತು ಬೆಂಗಳೂರು ನಗರದ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ನನ್ನ ಕನಸಿನ ಬೆಂಗಳೂರು ಎನ್ನುವಂಥ ದೊಡ್ಡ ಜಾಹೀರಾತನ್ನು ಏನು ಕೊಟ್ಟಿದ್ದಾರೆ. ಆ ಕನಸಿನ ಬೆಂಗಳೂರು ಏನಾಗಿದೆಯೆನ್ನುವುದರ ಬಗ್ಗೆ ಸನ್ಮಾನ್ಯ ದೇವೇಗೌಡರು ದಿನಾಂಕ: 22.11.2005ನೇ

ಇಸವಿಯಲ್ಲಿ ಅಂದರೆ ಮಾನ್ಯ ಧರ್ಮಸಿಂಗ್‌ರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಈ ರಾಷ್ಟ್ರದ ಪ್ರಧಾನಮಂತ್ರಿಯವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರದಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಪ್ರಮುಖವಾಗಿ, "Though I am neither a sophisticated politician nor a visionary, I have clear concept of my own not only to protect Banglore but also to develop Bangalore" ಎಂದು ಹೇಳಿ, ಅವರು 1985ನಲ್ಲಿ ಲೋಕೋಪಯೋಗಿ ಸಚಿವರಾಗಿದ್ದ ಸಂದರ್ಭದಲ್ಲಿ ಅವರು ತೆಗೆದುಕೊಂಡ ನಿರ್ಧಾರಗಳು ಏನಿವೆ, 1994ನಲ್ಲಿ ಲಕ್ಷ್ಮಣ್‌ರಾವ್ ಕಮಿಟಿಯನ್ನು ಮಾಡಿದ್ದು ಆಗ ದಿವಂಗತ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಇವರು ಲೋಕೋಪಯೋಗಿ ಸಚಿವರಾಗಿ ಅವತ್ತು ಲಕ್ಷ್ಮಣ್‌ರಾವ್‌ರವರ Chairmanship ನಲ್ಲಿ ಒಂದು ಕಮಿಟಿಯನ್ನು ಮಾಡಿದರು. ಆಕಮಿಟಿಯಲ್ಲಿ ಮಾಡಿರುವಂಥ findings ಅನ್ನು ನಾನು ಸದನದ ಗಮನಕ್ಕೆ ತರಬಯಸುತ್ತಿದ್ದೇನೆ. " you are aware that Bangalore is situated at 3,500 ft. above MSL. The city has to drain the rain water that falls in the city limits. Therefore, the said Expert Committee constituted by me was requested to examine all the aspects of the preservation, restoration or otherwise of the existing tanks of the metropolitan area with a view to maintain a nice environment in the metropolitan limits of the city of Bangalore. Accordingly, Sri Laxman Rao Committee gave a detailed report in which it identified about 262 live tanks located in conversion area of Bangalore. Another Government Order was issued in 1980 by me to protect all the tanks listed in the annexure" ಎಂದು ಹಲವಾರು ವಿಷಯಗಳನ್ನು ಏನು ಪ್ರಸ್ತಾಪ ಮಾಡಿದರು. ಇವರು ಮುಖ್ಯಮಂತ್ರಿಗಳಾದ ನಂತರ ಈ tankಗಳನ್ನು ಉಳಿಸಬೇಕೆನ್ನುವಂಥ ದೃಷ್ಟಿಯಿಂದ ಒಂದು Bangalore metropolitan taskforce ಅನ್ನು 1996ನೇ ಇಸವಿಯಲ್ಲಿ ಈ ರಾಜ್ಯದ ಬೆಂಗಳೂರಿನಲ್ಲಿ ಅನುಷ್ಠಾನಕ್ಕೆ ತಂದರು. ಆ ವ್ಯಾಪ್ತಿಯಲ್ಲಿ BMP, BDA, BWSSB, CMCಯಲ್ಲಿ Slum Clearance Boardನಲ್ಲಿ ಆಗುವಂಥ ಹಲವಾರು ಅವ್ಯವಹಾರಗಳಿಗೆ ಇವತ್ತು ಕ್ರಮ ತೆಗೆದುಕೊಳ್ಳುವಂಥದ್ದಕ್ಕೆ ಆ ಕಮಿಟಿಗೆ ಒಂದು ಹೆಚ್ಚಿನ ಶಕ್ತಿಯನ್ನು ಕೊಟ್ಟು form ಮಾಡಿದರು.

ನಂತರದ ಸರ್ಕಾರಗಳು ಬಂದಾಗ ಆ ಕಮಿಟಿಯ ಹಣೆಬರಹ ಏನಾಯಿತು ಎಂದರೆ, the result now is, there are no storm water drains, no planned system of disposal of water, no tanks to absorb water run due to rain, water sources are interfered and tampered with preventing free flow of water and the city is suffering from inefficient sewage disposal. Tanks have been either breached or have been encroached and built upon and the residential areas substituted. The nalas and valleys which have been efficiently functioning have all been encroached and rendered non-functional. All low lying areas which have been illegally occupied are sold to the poor and the innocent. ಈ ರೀತಿಯ ಒಂದು ಸ್ವೇಚ್ಛಾಚಾರದ ಕೆಲಸಗಳು ಹಿಂದೆ ಏನು ನಡೆದವು, ಅದರ ಆಧಾರದ ಮೇಲೆ ಇವತ್ತು ಬೆಂಗಳೂರು ನಗರದಲ್ಲಿ ಮಳೆ ಆದಂಥ ಪರಿಸ್ಥಿತಿಯಲ್ಲಿ ಒಂದು ಕಡೆ ನಮ್ಮ ಅಧಿಕಾರಿಗಳಿಗೂ ಕಷ್ಟ, ಇನ್ನೊಂದು ಕಡೆ ನಾಗರೀಕರಿಗೆ ಮಳೆ ಆದಂಥ ಸಂದರ್ಭದಲ್ಲಿ ಜೀವನವನ್ನೇ ಸಾಗಿಸಲಿಕ್ಕೆ ಆಗದೇ ಇರುವಂಥ ಒಂದು ಕೆಟ್ಟ ವಾತಾವರಣವನ್ನು ನಾವು ನಿರ್ಮಾಣ ಮಾಡಿದ್ದೇವೆ. ಆವತ್ತು ಪ್ರಧಾನ ಮಂತ್ರಿಗಳಿಗೆ ಏನು request ಮಾಡುತ್ತಾರೆ, ಅವುಗಳನ್ನೆಲ್ಲಾ ಅವರ ಗಮನಕ್ಕೆ ತರುತ್ತೇನೆ. ಇವತ್ತು ಬೆಂಗಳೂರಿನಲ್ಲಿ ರಿಂಗ್ ರಸ್ತೆಯಾಗಿದೆ. ರೋಷನ್ ಬೇಗ್‌ರವರಿಗೂ ಗೊತ್ತಿದೆ, ಸೋಮಣ್ಣನವರಿಗೂ ಗೊತ್ತಿದೆ, ಬಹುಶಃ ದೇವೇಗೌಡರು ಪ್ರಧಾನ ಮಂತ್ರಿ ಆಗದೇ ಇದ್ದಿದ್ದರೆ, 85 ಎಕರೆ defence land ಅನ್ನು ಅವರು ತೆರವುಗೊಳಿಸಿಕೊಟ್ಟು ಆ ರಸ್ತೆಯ ಕೆಲಸಕ್ಕೆ ಅವಕಾಶವನ್ನು ಕಲ್ಪಿಸಿ ಕೊಡದೇ ಹೋಗಿದ್ದರೆ, ಇವತ್ತಿಗೂ ಆ ರಿಂಗ್ ರಸ್ತೆ complete ಆಗುತ್ತಿರಲಿಲ್ಲ. ಬೆಂಗಳೂರು ನಗರಕ್ಕೆ ದೇವೇಗೌಡರು ಮಾಡಿರತಕ್ಕಂಥ contribution ಏನು ಎನ್ನತಕ್ಕಂಥಾದ್ದನ್ನು ಯಾರೂ ನೆನೆಸಿಕೊಳ್ಳಲಿಲ್ಲ. ಆ ದೃಷ್ಟಿಯಿಂದ ಕೆಲವು ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅದಕ್ಕೆ ಕಾರಣವೆಂದರೆ, ಕಳೆದ ಸಮ್ಮಿಶ್ರ ಸರ್ಕಾರದ ಆಡಳಿತದಲ್ಲಿ . ದೇವೇಗೌಡರು ಪ್ರತಿಯೊಂದು development workಗೆ, ಅದರಲ್ಲೂ ಬೆಂಗಳೂರು ನಗರಕ್ಕೆ ಕೆಲಸಗಳು ಆಗಲಿಕ್ಕೆ ಬಿಡಲಿಲ್ಲ ಎನ್ನತಕ್ಕಂಥ ವಿಷಯಗಳನ್ನು ಪದೇಪದೇ ಹೇಳಿದರು. ಆ ದೃಷ್ಟಿಯಿಂದ ಈ ವಿಷಯವನ್ನು ಹೇಳುತ್ತಿದ್ದೇನೆ. Metro Rail Systemಅನ್ನು 1996ನೇ ಇಸವಿಯಲ್ಲೇ ತರತಕ್ಕಂಥಾದ್ದಕ್ಕೆ ಅವತ್ತೇ ನಿರ್ಧಾರಗಳನ್ನು ಮಾಡಿದರು. ಆ ನಿರ್ಧಾರಗಳನ್ನು ನಾನು ಮತ್ತೆ ಇಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. Mass Rapid Transport System workಅನ್ನು ಪ್ರಾರಂಭಿಸಲು ಇಲ್ಲಿ ಒಂದು legislation ತಂದು, levy cess ಅನ್ನು

collect ಮಾಡಬೇಕೆಂದು ಆವತ್ತು ತೀರ್ಮಾನ ಮಾಡಿದರು. ಅದರ ಆಧಾರದ ಮೇಲೆ ಇವತ್ತು ಎಷ್ಟು ಕೋಟಿ ಹಣ ಬೆಂಗಳೂರು ನಗರದ ಅಭಿವೃದ್ಧಿಗೆ collect ಆಗಿದೆ ಎನ್ನುವುದನ್ನು ಸೋಮಣ್ಣನವರು ಹೇಳಬೇಕಾಗುತ್ತದೆ. ಆ ರೀತಿ ಸಂಗ್ರಹಿಸಿದ ಹಣ ಏನಾಯಿತು? ಅದರಿಂದ ಬೆಂಗಳೂರು ನಗರದ ಅಭಿವೃದ್ಧಿಗೆ ಒಂದು ಚಾಲನೆ ಸಿಕ್ಕಿದೆ. ಅದರ ಜೊತೆಗೆ, Metro Rail Project ವಿಷಯದಲ್ಲಿ ದೆಹಲಿಯಲ್ಲಿ ಕೇಂದ್ರ ಸರ್ಕಾರದವರು ಯಾವ ರೀತಿಯ ಸಬ್ಸಿಡಿಯನ್ನು ಕೊಟ್ಟು ಕೆಲಸ ಮಾಡಿಸುತ್ತಿದ್ದಾರೋ, ಅದೇ ರೀತಿ ಕರ್ನಾಟಕದ ಬೆಂಗಳೂರು ನಗರಕ್ಕೂ ಆ ಒಂದು ರೀತಿಯಲ್ಲೇ ಕೆಲಸ ಆಗಬೇಕು ಎನ್ನತಕ್ಕಂಥ ಒಂದು objectionಅನ್ನು ಅವರು raise ಮಾಡಿದರೇ ಹೊರತು Metro Rail Project ಆಗಬಾರದು ಎನ್ನುವ ಉದ್ದೇಶ ಅವರಿಗೆ ಇರಲಿಲ್ಲ. Bangalore International Airport ವಿಷಯದಲ್ಲಿ 1996ರಲ್ಲಿ ತೆಗೆದುಕೊಂಡಂಥ ನಿರ್ಧಾರ ಏನಿದೆ, ದೇವೇಗೌಡರು ಪ್ರಧಾನ ಮಂತ್ರಿಗಳಾಗಿ ಹೋದ ಮೇಲೆ ಅದಕ್ಕೆ ಸಂಬಂಧಿಸಿದ ಭೂಮಿಯ ವಿಷಯದಲ್ಲಿ ನಡೆದಂಥ ತಕರಾರುಗಳು ಏನಿದೆ, ಆ ತಕರಾರಿನಿಂದಾಗಿ ಕಾಮಗಾರಿ 10–12 ವರ್ಷ ಪ್ರಾರಂಭವಾಗಲಿಲ್ಲ. ಇಲ್ಲಿ ಧರಂಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರವಿದ್ದಾಗ, ದೇವೇಗೌಡರ ಒತ್ತಡಗಳಿಂದ ಸುಮಾರು 400 ಎಕರೆ ಭೂಮಿಯನ್ನು ಉಳಿಸಿದ್ದಾರೆ. ಆವತ್ತು ಧರಂಸಿಂಗ್‌ರವರ ಮೇಲೆ, ನೀವು ಈ ಬೆಲೆ ಬಾಳತಕ್ಕಂಥ ಭೂಮಿಯನ್ನು ಉಳಿಸಲೇ ಬೇಕಾಗುತ್ತದೆ ಎಂದು ಒತ್ತಡ ಹಾಕುವುದರ ಜೊತೆಗೆ ರಾಜ್ಯ ಸರ್ಕಾರಕ್ಕೆ 30 ಕೋಟಿ ಹಣ save ಆಗತಕ್ಕಂಥಾದ್ದಕ್ಕೆ ತೀರ್ಮಾನ ತೆಗೆದುಕೊಳ್ಳಲು ಅವರು ಆ ಸಂದರ್ಭದಲ್ಲಿ ಒತ್ತಡ ಹೇರಿದರು. ಇಂಥ ವಿಷಯಗಳಿಗೆ ಸಂಬಂಧಿಸಿದಂತೆ ಆ ಸಂದರ್ಭದಲ್ಲಿ ದೇವೇಗೌಡರು ಸರ್ಕಾರಗಳಿಗೆ ಪತ್ರಗಳನ್ನು ಬರೆದಿದ್ದಾರೆಯೇ ಹೊರತು, ಯಾವುದೇ ರೀತಿಯ ಅಭಿವೃದ್ಧಿಗೆ ಮಾರಕವಾಗತಕ್ಕಂಥ, ಅಭಿವೃದ್ಧಿಯನ್ನು ನಿಲ್ಲಿಸತಕ್ಕಂಥಾದ್ದಕ್ಕೆ ಪ್ರೇರೇಪಣೆಯಾಗಬೇಕೆನ್ನುವ ದೃಷ್ಟಿಯಿಂದ ಮಾಡಲಿಲ್ಲ. ಇವತ್ತು ಇದೇ 400 ಎಕರೆ ಭೂಮಿಯ ವಿಷಯದಲ್ಲಿ ಇಲ್ಲಿ ಚರ್ಚೆ ನಡೆಯುತ್ತಿದೆ. ಅದನ್ನು ಹರಾಜು ಹಾಕಬೇಕೋ, ಇಲ್ಲವೆಂದರೆ ಅದನ್ನು lease base ಮೇಲೆ ಕೊಡಬೇಕೋ, ಇಲ್ಲವೆಂದರೆ ಅದನ್ನು ಯಾವ ರೀತಿ ಹಂಚಿಕೊಳ್ಳಬೇಕು ಎನ್ನುವುದರ ಬಗ್ಗೆ ಕೆಲವು ಚರ್ಚೆಗಳು ಪ್ರಾರಂಭವಾಗಿವೆ. ಅದನ್ನೆಲ್ಲಾ ನಾನು ಇಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ದಿನಾಂಕ 22–11–2005ನೇ ಇಸವಿಯಲ್ಲಿ ಕೇಂದ್ರ ಸರ್ಕಾರಕ್ಕೆ ಒಂದು ಮನವಿಯನ್ನು ಮಾಡುತ್ತಾರೆ. ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಸರ್ಕಾರಗಳಿಗೆ ನೀವು special financial grants ಅನ್ನು ಹೆಚ್ಚಿನ ರೀತಿಯಲ್ಲಿ ಕೊಡುತ್ತಿದ್ದೀರಿ, ಕರ್ನಾಟಕ ರಾಜ್ಯ, ಅದರಲ್ಲೂ ಬೆಂಗಳೂರು ನಗರ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿ

ತೊಂದರೆಗೊಳಗಾಗಿದ್ದೇವೆ. ಇವತ್ತು ಇಡೀ ವಿಶ್ವವೇ ಬೆಂಗಳೂರು ನಗರವನ್ನು ನೋಡುತ್ತಿದೆ. 50 ಸಾವಿರ ಕೋಟಿ ರೂಪಾಯಿಗಳ Urban Development Plan ಈ ಒಂದು ಭಾಗದಲ್ಲಿ ಆಗಬೇಕಾಗುತ್ತದೆ. ಅದಕ್ಕೆ Integrated Comprehensive Development Plan ಏನು ಮಾಡಿದ್ದೇವೆ, ಅದಕ್ಕೆ 5 ಸಾವಿರ ಕೋಟಿ ರೂಪಾಯಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎನ್ನತಕ್ಕಂಥ ಒಂದು ಪತ್ರವನ್ನು ಬರೆದಿದ್ದಾರೆ. ಇದನ್ನು ಏಕೆ ಸದನದ ಗಮನಕ್ಕೆ ತಂದೆ ಎಂದರೆ, ಇವತ್ತು ಈ ಸರ್ಕಾರವೇನು ಬೆಂಗಳೂರು ನಗರಕ್ಕೆ ಮೂಲಭೂತ ಸೌಕರ್ಯಗಳನ್ನು ಕೊಡತಕ್ಕಂಥ ವಿಷಯದಲ್ಲಿ ನಾವು ದೊಡ್ಡ ಕನಸನ್ನು ಇಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ, ಅದಕ್ಕೆ supportiveಆಗಿ ಕೆಲಸ ಮಾಡತಕ್ಕಂಥಾದ್ದಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಇವತ್ತು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರು: ಇನ್ನೂ ಎಷ್ಟು ಹೊತ್ತು ಆಗುತ್ತದೆ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಇನ್ನೊಂದು ಹತ್ತು ನಿಮಿಷಗಳಲ್ಲಿ ಮುಗಿಸುತ್ತೇನೆ. ಇನ್ನು 2–3 subjectಗಳಿವೆ. ತಾವು ನನಗೆ ಹೆಚ್ಚಿನ ಸಮಯ ಕೊಟ್ಟಿದ್ದೀರಿ. ಅದಕ್ಕೆ ನಾನು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇನ್ನು, ಹೊಸದಾಗಿ ಬಂದಂಥ ನಿರಾಣಿಯವರು, ಹೊಸ ಕೈಗಾರಿಕಾ ನೀತಿಯನ್ನು ತರುತ್ತೇವೆ ಎಂದು ಹೇಳಿದ್ದಾರೆ. ಹೋದ ವರ್ಷ ತಾನೇ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರ ಅಧ್ಯಕ್ಷತೆಯಲ್ಲಿ ಒಂದು ಹೊಸ ಕೈಗಾರಿಕಾ ನೀತಿಯನ್ನು ತಂದಿದ್ದೇವೆ. ಈಗ ಮತ್ತೆ ಯಾವ ರೀತಿ ಹೊಸ ನೀತಿ ತರುತ್ತಿದ್ದೀರಿ ಎಂದು ನನಗೆ ಗೊತ್ತಾಗುತ್ತಿಲ್ಲ. ಕಳೆದ ಸಮ್ಮಿಶ್ರ ಸರ್ಕಾರದ ಆಡಳಿತದಲ್ಲಿ ನಾವು Swiss Challenge Method ಎನ್ನತಕ್ಕಂಥ ಒಂದು ತೀರ್ಮಾನವನ್ನು ಮಾಡಿದ್ದೇವೆ. ಆ Swiss Challenge Methodನಲ್ಲಿ ಸರ್ಕಾರಕ್ಕೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದೇ, ಯಾವುದೇ ರೀತಿಯ ದುರ್ಬಳಕೆಗಳಾಗದೇ ಸರ್ಕಾರದ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯತಕ್ಕಂಥಾದ್ದಕ್ಕೆ, ಆ ಕಾರ್ಯಕ್ರಮವನ್ನು ತರಲಿಕ್ಕೆ ನಾವು ಕಳೆದ ನಮ್ಮ ಆಡಳಿತ ಇದ್ದಂಥ ಸಂದರ್ಭದಲ್ಲಿ Swiss Challenge Method ಎಂದು ಏನು introduce ಮಾಡಿದ್ದೇವೆ ಅದಕ್ಕೆ ಹೆಚ್ಚಿನ ಶಕ್ತಿಯನ್ನು ಕೊಟ್ಟರೆ, ಯಾವುದೇ ರೀತಿಯ ಅನುಮಾನಗಳಿಗೆ ಆಸ್ಪದವಾಗದೇ transparency decisionಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಅದರ ಕಡೆ ಹೆಚ್ಚಿನ ಗಮನ ಕೊಟ್ಟರೆ ಸಾಕು, ಹೊಸ ಕೈಗಾರಿಕಾ ನೀತಿಯ ಅವಶ್ಯಕತೆ ಇಲ್ಲ. ಏಕೆಂದರೆ, ಇಲ್ಲಿ ಒಂದು ಮಾತನ್ನು ಹೇಳಿದ್ದೀರಿ, "ರಾಜ್ಯದಲ್ಲಿ ಕೈಗಾರಿಕೆಗಳನ್ನು ಉತ್ತೇಜಿಸುವಂಥ ಹೂಡಿಕೆಗೆ ಸ್ನೇಹಪರವಾದ ಪರಿಸರವನ್ನು ಕಲ್ಪಿಸುವ ಅಗತ್ಯವಿದೆ." ಸ್ನೇಹಪರವಾದ ಎಂದರೆ

ಅದಕ್ಕೆ ಅರ್ಥವೇನು ಎನ್ನುವುದು ನನಗೆ ಗೊತ್ತಿಲ್ಲ> ಅದು ಯಾವ ರೀತಿಯಲ್ಲಿ ಸ್ನೇಹಪರವಾದ ಒಂದು ಪರಿಸರವನ್ನು ನಿರ್ಮಾಣ ಮಾಡುತಾರೆ ಎಂದು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ದಯವಿಟ್ಟು ಹೇಳಬೇಕಾಗುತ್ತದೆ. ಹೊಸ ನೀತಿಯ ಅವಶ್ಯಕತೆ ಇಲ್ಲ. Swiss Challenge Methodನಲ್ಲಿ transparencyಗೆ ಅವಕಾಶಗಳಿವೆ, ಇದರ ಕಡೆ ತಾವು ಗಮನ ಹರಿಸಿದರೆ ಸಾಕು ಎನ್ನುವ ವಿಷಯವನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೆನೆ.

ಇನ್ನು, ರೈಲ್ವೆ ಯೋಜನೆಗಳ ಬಗ್ಗೆ ಹೇಳುವುದಾದರೆ, ಮೊದಲನೇ ಬಾರಿಗೆ ಹಣವನ್ನು ಕೆಲವು ಭಾಗಗಳಿಗೆ ಕೊಟ್ಟಿದ್ದೀರಿ. ಇವತ್ತು ನಾಲ್ಕು railway projectಗ ಳಿಗೆ ಹಣ ಇಟ್ಟಿದ್ದೀರಿ. ಶಿವಮೊಗ್ಗ-ತಾಳಗುಪ್ಪ ಮಾರ್ಗಕ್ಕೆ 100 ಕೋಟಿ, ಬೀದರ್-ಗುಲ್ಬರ್ಗ ಮತ್ತು ಅಲ್ಲಿಂದ ಗದಗ್-ಬೆಟಗೇರಿ, ಕೊಟ್ಟೂರು-ಹರಿಹರ ಇವುಗಳಿಗೆಲ್ಲಾ ಹಣ ಇಟ್ಟಿದ್ದಾರೆ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ, ಇವತ್ತು ಕರ್ನಾಟಕ ರಾಜ್ಯಕ್ಕೆ railway projectಗಳಿಗೆ ಏನಾದರೂ ಹೆಚ್ಚಿನ ಒಂದು ಮುತುವರ್ಜಿ ವಹಿಸಿದ್ದರೆ ಅದು ಜಾಫರ್ ಷರೀಫ್‌ರವರ ಕಾಲದಲ್ಲಿ. ಹಿಂದೆ ಮಹಾರಾಜರ ಕಾಲದಲ್ಲಿ ಮಾಡಿದಂಥ ರೈಲ್ವೆ ಯೋಜನೆಗಳೇನಿವೆ, ಅವುಗಳನ್ನು ಬಿಟ್ಟರೆ ಪ್ರಜಾಪ್ರಭುತ್ವದ ವ್ಯವಸ್ಥೆ ಬಂದ ನಂತರ ಬಂದಂಥ ಎಲ್ಲಾ ಕೇಂದ್ರ ಸರ್ಕಾರಗಳು ನಮ್ಮ ರಾಜ್ಯಕ್ಕೆ ಕೇವಲ 400 ಕಿ.ಮೀ.ಗಳವರೆಗೆ ಕಾಮಗಾರಿಗಳನ್ನು 50-60 ವರ್ಷಗಳಲ್ಲಿ ಕೊಟ್ಟಿದ್ದರು. ಜಾಫರ್ ಷರೀಫ್‌ರವರು ಕೇಂದ್ರದ ಸಚಿವರಾಗಿದ್ದಾಗ ಸ್ವಲ್ಪ ಕೆಲಸ progress ಆಗಿರತಕ್ಕಂಥಾದ್ದನ್ನು ಸದನದ ಗಮನಕ್ಕೆ ತರುತ್ತೇನೆ. ದೇವೇಗೌಡರು ಆ ಸಂದರ್ಭದಲ್ಲಿ ಆಕಸ್ಮಿಕವಾಗಿ ಪ್ರಧಾನ ಮಂತ್ರಿಗಳಾದರು. ಕರ್ನಾಟಕಕ್ಕೆ ಹಲವಾರು ಯೋಜನೆಗಳನ್ನು sanction ಮಾಡಿದರು. ಅದರಲ್ಲಿ ಪ್ರಮುಖವಾಗಿ ಹುಬ್ಬಳ್ಳಿ-ಅಂಕೋಲಾ ಮಾರ್ಗ. ಇವತ್ತು ದೇಶಪಾಂಡೆಯವರು ಈ ಸದನದಲ್ಲಿಲ್ಲ. ಅವತ್ತು ಅವರು ಕೈಗಾರಿಕಾ ಸಚಿವರಾಗಿದ್ದರು. ದೇವೇಗೌಡರು ಪ್ರಧಾನ ಮಂತ್ರಿಗಳಾಗಿ ದೆಹಲಿಯಿಂದ ಒಂದು ಹತ್ತು ಬಾರಿ ಅವರೊಂದಿಗೆ ಮಾತನಾಡಿದ್ದಾರೆ.

'ನಾನು ಹುಬ್ಬಳ್ಳಿ-ಅಂಕೋಲ ರಸ್ತೆಯನ್ನು ಏನು sanction ಮಾಡಿದ್ದೇನೆ, ಇದನ್ನು ಹಾಳು ಮಾಡಿಕೊಳ್ಳಬೇಡಿ, ಕೆಲಸ ಮಾಡುವುದಕ್ಕೆ ನಿಧಾನ ಮಾಡಿ, ನಾನು ಬಂದು ಉದ್ಘಾಟನೆ ಮಾಡಿಬಿಡುತ್ತೇನೋ, ಇದನ್ನು ಶಂಕುಸ್ಥಾಪನೆ ನೆರವೇರಿಸುತ್ತೇನೋ ಎನ್ನುವುದು ನಿಮ್ಮೆಲ್ಲರ ಮನಸ್ಸಿನಲ್ಲಿದ್ದರೆ ನಾನು ಬರುವುದು ಬೇಕಿಲ್ಲ, ನೀವೇ ಅದಕ್ಕೆ ಚಾಲನೆ ಕೊಟ್ಟು ಕೆಲಸ ಪ್ರಾರಂಭ ಮಾಡಿಸಿ' ಎನ್ನುವ ಮಾತನ್ನು ಹೇಳಿದರು. ಮಾನ್ಯ ಸಿಂಧ್ಯರವು ಈ ಸದನದಲ್ಲಿ ಇಲ್ಲ. ಅವರ

ಜೊತೆಯಲ್ಲಿಯೂ ಈ ಬಗ್ಗೆ ಚರ್ಚೆ ಮಾಡಿದ್ದಾರೆ. ನಾನೂ ಕೂಡ ಆ ಸಂದರ್ಭದಲ್ಲಿ ಲೋಕಸಭಾ ಸದಸ್ಯರಾಗಿ ಕೆಲಸ ಮಾಡುತ್ತಿದ್ದೆ. ಅವತ್ತು ಹಲವಾರು ಯೋಜನೆಗಳಿಗೆ ಏನು ಅನುಮತಿ ಕೊಟ್ಟರು, ನೈಋತ್ಯ ವಲಯವನ್ನು ಮಾಡುವ ವಿಷಯದಲ್ಲಿ ಬೆಂಗಳೂರು ನಗರಕ್ಕೆ ತಾಂತ್ರಿಕ ಕಮಿಟಿಯವರು ಕೊಟ್ಟ ವರದಿಯ ಆಧಾರದ ಮೇಲೆ ಅವರೇನು ತೀರ್ಮಾನ ಮಾಡಿದರು, ಅದರಿಂದ ಅವರು ಕೊಟ್ಟಂಥ ಎಲ್ಲಾ ರೈಲ್ವೆ ಯೋಜನೆಗಳ ವಿಷಯದಲ್ಲಿ ಈ ರಾಜ್ಯದ ಜನರ ಕಣ್ಣು ತೆರೆಯಲಿಲ್ಲ ಎನ್ನುವುದು ನನ್ನ ಭಾವನೆ. ಹುಬ್ಬಳ್ಳಿಗೆ ಒಂದು ನೈಋತ್ಯ ವಲಯ ಕೊಡಲಿಲ್ಲವೆನ್ನುವುದು ಆ ಭಾಗದ ಜನರ ಆಕ್ರೋಶದಿಂದ ಅವರು ಕೊಟ್ಟ ಎಲ್ಲಾ ಯೋಜನೆಗಳು ಪ್ರಾರಂಭವಾಗುವ ವಿಷಯದಲ್ಲಿ ಅವರು ಕೊಟ್ಟಂಥ ವಿಷಯಗಳ ಬಗ್ಗೆ ಹೆಚ್ಚಿನ ಪ್ರಚಾರ ಸಿಗಲಿಲ್ಲ. ಪ್ರಚಾರ ಎನ್ನುವುದಕ್ಕಿಂತ ಹೆಚ್ಚಾಗಿ ಅವರು ಮಾಡಿದ ಕಾರ್ಯಕ್ರಮಗಳ ಬಗ್ಗೆ ರಾಜ್ಯದ ಜನತೆಯ ಕಣ್ಣು ತೆರೆಸಲಿಕ್ಕೆ ಆಗಲಿಲ್ಲ. ಇವತ್ತು ನಾನು ಕೇಳಲಿಕ್ಕೆ ಬಯಸುತ್ತೇನೆ. ನೀವು ಕೆಲವೆಲ್ಲ ಯೋಜನೆಗಳನ್ನು ಕೊಟ್ಟಿದ್ದೀರಲ್ಲ, ಕಡೂರು–ಚಿಕ್ಕಮಗಳೂರು ರಸ್ತೆಗೆ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ sanction ಆಯಿತೆಂದು ನಿನ್ನೆಯ ದಿವಸ ಮಾನ್ಯ ಸದಸ್ಯರಾದ ರವಿಯವರು ಮಾತನಾಡುದತ್ತಿದ್ದರಂತೆ. ಕಡೂರು–ಚಿಕ್ಕಮಗಳೂರು ರಸ್ತೆಗೆ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ survey ಕಾರ್ಯಕ್ಕೆ ಅವರು permission ಕೊಟ್ಟಿದ್ದರಷ್ಟೆ. ಆದರೆ, ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ, ಇದರ ಕಾಮಗಾರಿಗಳನ್ನು ಪ್ರಾರಂಭ ಮಾಡುವುದಕ್ಕೆ ಚಾಲನೆ ಕೊಟ್ಟಿರುವುದು ಮತ್ತು ಅದರ ಜೊತೆಗೆ ಬೆಂಗಳೂರು–ಸತ್ಯಮಂಗಲ ರೈಲ್ವೆ ಯೋಜನೆ ಇರಬಹುದು, ಅವರು ಚಾಲನೆ ಕೊಟ್ಟ ಮೇಲೆ ಎಲ್ಲಾ ಯೋಜನೆಗಳು ನಿಂತುಹೋಯಿತು. ಆಮೇಲೆ NDA ಸರ್ಕಾರ ಅಧಿಕಾರಕ್ಕೆ ಬಂದು 6 ವರ್ಷಗಳ ಕಾಲ ಈ ದೇಶದಲ್ಲಿ ಸರ್ಕಾರವನ್ನು ನಡೆಸಿದರು. ರೈಲ್ವೆ ಯೋಜನೆಯ ಇಷ್ಟೊಂದು ಕಾರ್ಯಕ್ರಮ ಕೊಟ್ಟಿದ್ದೇವೆಂದು ಇವತ್ತು ನೀವೇನು ಹೇಳುತ್ತಿದ್ದೀರಿ, ಆವತ್ತು NDA ಸರ್ಕಾರದಲ್ಲಿ ಯಾರು ಪ್ರಧಾನ ಮಂತ್ರಿಗಳಾಗಿದ್ದರು? ಅಂದರೆ ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದರು. ಅವರ ಕೈಯಲ್ಲಿ ರೈಲ್ವೇ ಮಾರ್ಗದ ಕಾಮಗಾರಿಯನ್ನು ಪ್ರಾರಂಭಿಸುವುದಕ್ಕೆ ಹುಬ್ಬಳ್ಳಿ–ಅಂಕೋಲ railway lineಗೆ ಶಂಕುಸ್ಥಾಪನೆ ನೆರವೇರಿಸಿದಿರಿ. ಇವತ್ತು ಆ ಕಲ್ಲು ಎಲ್ಲಿದೆಯೆಂದಾದರೂ ಹುಡುಕಿಸಲಿ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ವಾಜಪೇಯಿಯವರು ಈ ರಾಷ್ಟ್ರದಲ್ಲಿ ಅತ್ಯಂತ ಗೌರವಯುತ ಸ್ಥಾನದಲ್ಲಿ ಅತ್ಯಂತ ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ. NDA ಸರ್ಕಾರವಿದ್ದಾಗ ಅವರನ್ನು ಕರೆದುಕೊಂಡು

ಬಂದು ತಾವೇನು ಆ ಗುದ್ದಲಿ ಪೂಜೆ ನೆರವೇರಿಸಿದ್ದೀರಿ, ಆ ಕಲ್ಲನ್ನು ಎಲ್ಲಿಟ್ಟಿದ್ದೀರಿ? ದಯವಿಟ್ಟು ಗೌರವ ಕೊಟ್ಟು ಆ ಕಲ್ಲನ್ನಾದರೂ ತಂದು ನೈಋತ್ಯ ವಲದಯ ಕಛೇರಿಯಲ್ಲಾದರೂ ಇಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ. ಇಲ್ಲವೆಂದರೆ ಅವರಿಗೆ ಅವಮಾನವಾಗಬಹುದೆನ್ನುವ ವಿಷಯವನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಬಸವರಾಜ ಎಸ್.ಬೊಮ್ಮಾಯಿ(ಜಲ ಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಾಜಪೇಯಿಯವರು ಏನು ಹುಬ್ಬಳ್ಳಿ-ಅಂಕೋಲ railway line ಗೆ foundation ಹಾಕಿದ್ದರು, ಈಗಾಗಲೇ ಕಲಘಟಗಿವರೆಗೂ 24 ಕಿ.ಮೀ.ವರೆಗೆ railway line ಆಗಿದೆ. ಆವತ್ತಿನಿಂದ ಇವತ್ತಿನವರೆಗೆ forest clearance ಇಲ್ಲದಿರುವುದಕ್ಕಾಗಿ ಈ ಕೆಲಸ ನಿಂತಿದೆ. Forest clearance ಕೇಂದ್ರ ಸರ್ಕಾರದಿಂದ ಬಂದಂಥ objections ಅನ್ನು...

ಶ್ರೀ ಆರ್.ರೋಷನ್ ಬೇಗ್: 6 ವರ್ಷ ನಿಮ್ಮ ಪಕ್ಷದ ಸರ್ಕಾರ ಕೇಂದ್ರದಲ್ಲಿರಲಿಲ್ಲವೇ?

ಶ್ರೀ ಬಸವರಾಜ ಎಸ್.ಬೊಮ್ಮಾಯಿ: Forest clearance ಗೆ 6 ವರ್ಷ ಅಲ್ಲ, 60 ವರ್ಷಗಳ ಹಿಂದಿನ cases ಸಹ ಇವೆ. ಇಂದಿರಾಗಾಂಧಿಯವರ ಕಾಲದಲ್ಲಿ survey ಮಾಡಿದರು, ಮಾನ್ಯ ದೇವೇಗೌಡರ ಸರ್ಕಾರ ಅಧಿಕಾರಕ್ಕೆ ಬರುವ ವರೆಗೆ ಟಾರ್ ಹಾಕಿರಲಿಲ್ಲವೆಂದು ಅವರು ಹೇಳಲಿಲ್ಲವೇ? ಹಾಗಾದರೆ ಎಷ್ಟು ವರ್ಷಗಳು ಬೇಕಾಯಿತು? ಈ ದೇಶದಲ್ಲಿ ನಡೆಯುತ್ತಿರುವುದನ್ನು ಹೇಳಿತ್ತಿದ್ದೇನೆ. ಅವರು ಇದ್ದಾಗ, ಇವರು ಇದ್ದಾಗ ಎನ್ನುವ ಪ್ರಶ್ನೆ ಅಲ್ಲ. ವ್ಯವಸ್ಥೆ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದಿಂದ ಬಂದಂಥದ್ದನ್ನು re-model ಮಾಡಿ ಕಳುಹಿಸಿದ ಮೇಲೆಯೂ ಅವುಗಳಿಗೆಲ್ಲ objection ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರದ ಅರಣ್ಯ ಇಲಾಖೆ ಮತ್ತು Railway Department ಕುಳಿತುಕೊಂಡು ಬಗೆಹರಿಸಲು ಮೂರು ಮೀಟಿಂಗ್ ಮಾಡಿದರೂ ಕೂಡ ಬಗೆಹರಿಸಲಿಕ್ಕೆ ಆಗಲಿಲ್ಲ. ನಿಮಗೆ ಗೊತ್ತಿರುವ ಹಾಗೆ ಅಂಕೋಲದಲ್ಲಿ ದಟ್ಟವಾದ ಅರಣ್ಯವಿದೆ. ಆ ಹಿನ್ನೆಲೆಯಲ್ಲಿ ಅದು ನಿಂತಿದೆಯೇ ಹೊರತಾಗಿ ಅವರು ಅಡಿಗಲ್ಲು ಹಾಕಿದರೆಂದು ನಿಂತಿಲ್ಲ ಅಥವಾ ಇನ್ನೊಬ್ಬರು ಹಾಕಲಿಲ್ಲವೆಂದು ನಿಂತಿಲ್ಲ. ಆ ಪ್ರಶ್ನೆ ಇಲ್ಲಿ ಇಲ್ಲ. ಈ ರೀತಿಯ ಯೋಜನೆಗಳ ಬಗ್ಗೆ ಅವರು ಬೆಳಕು ಚೆಲ್ಲುತ್ತಿದ್ದಾರೆ. ಅವರು ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಉದಾಹರಣೆಗೆ ಬಹಳಷ್ಟು ಕೆಲಸ ಮರೆಮಾಚಿ ಹೋಗುತ್ತದೆ. ಮಾನ್ಯ ಖರ್ಗೆ ಸಾಹೇಬರಿಗೆ ಚೆನ್ನಾಗಿ ಗೊತ್ತಿದೆ. ನಾವೇನು bore well ಗಳನ್ನೆಲ್ಲ 1983-84ರಲ್ಲಿ ಹಾಕುವುದಕ್ಕೆ ಪ್ರಾರಂಭ ಮಾಡಿದ್ದೆವು, ಅದಕ್ಕೆ ಪೂರ್ವಬಾವಿಯಾಗಿ

ದಿವಂಗತ ಗುಂಡೂರಾವ್‌ರವರು Canadaದಿಂದ 12 borewell ಗಳನ್ನು ತರಿಸಿ ಮಾಡಿರುವುದು ಸತ್ಯ. But ಆ ಸತ್ಯವನ್ನು ನೀವ್ಯಾರೂ ಸದನದಲ್ಲಿ ಹೇಳುತ್ತಿಲ್ಲ. ದಿವಂಗತ ಗುಂಡೂರಾವ್‌ರವರು ಅದಕ್ಕೆಲ್ಲ ಪೂರ್ವ ತಯಾರಿ ಮಾಡಿ ಅದನ್ನೆಲ್ಲ ಮಾಡಿದರು. ಆ ಪುಣ್ಯಾತ್ಮ ಮಾಡಿದ್ದನ್ನು ಇವತ್ತು ಯಾರೂ ಹೇಳುತ್ತಿಲ್ಲ. ಆ ರೀತಿ ಹಲವಾರು ಉದಾಹರಣೆಗಳನ್ನು ನಾವು ಕೊಡಬಹುದು.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಬಸವರಾಜು ಬೊಮ್ಮಾಯಿಯವರು ಈಗ 26 ಕಿ.ಮೀ. ಹುಬ್ಬಳ್ಳಿ–ಅಂಕೋಲ railway line ಆಗಿದೆ ಎಂದು ಹೇಳಿದರು. ಹಾಗಾದರೆ, forest clearance ಇಲ್ಲದೆ ಒಬ್ಬ ಪ್ರಧಾನ ಮಂತ್ರಿಗಳ ಕೈಯಿಂದ ಏಕೆ ಅಡಿಗಲ್ಲನ್ನು ಹಾಕಿಸಿದಿರಿ? ನಿಮ್ಮ ಪಕ್ಷ ಕೇಂದ್ರದಲ್ಲಿ 6 ವರ್ಷ ಆಡಳಿತ ಮಾಡುತ್ತಿದ್ದರಲ್ಲ, forest clearance ತೆಗೆದುಕೊಳ್ಳುವುದಕ್ಕೆ, ಕೊಡುವುದಕ್ಕೆ NDA Government ಗೆ 6 ವರ್ಷ ಬೇಕೇ? ಕರ್ನಾಟಕ ರಾಜ್ಯಕ್ಕೆ railway line ಸಲುವಾಗಿ ಎಷ್ಟು ಹಣವನ್ನು ಕೊಟ್ಟಿದ್ದಾರೆಂಬುದನ್ನು ದಯಮಾಡಿ ಬಹಿರಂಗಪಡಿಸಿ. ಮಾನ್ಯ ಬಸವರಾಜು ಬೊಮ್ಮಾಯಿಯವರು ಹೊಸದಾಗಿ ಮಂತ್ರಿಯಾಗಿದ್ದೀರಿ, ನಿಮ್ಮ ಹತ್ತಿರ ಏನಾದರೂ information ಇದ್ದರೆ ಹೇಳಿ. ಇಲ್ಲದಿದ್ದರೆ ಸುಮ್ಮನೆ ಇದ್ದುಬಿಡಿ. ನೀವು ಈಗ ಹೊಸದಾಗಿ ನೀರಾವರಿ ಮಂತ್ರಿಯಾಗಿದ್ದೀರಿ.

ಶ್ರೀ ಬಸವರಾಜ ಎಸ್.ಬೊಮ್ಮಾಯಿ: ನೀವು ಕೇಳಿದ ಮೇಲೆ ಹೇಳಲೇಬೇಕಲ್ಲವೆ ಸ್ವಾಮಿ. ಈ ರಾಜ್ಯದಲ್ಲಿ ನೀವು ಕೇಳಿದ ಮೇಲೆ ಹೇಳಲಿಲ್ಲವೆಂದರೆ ನಾನು ಬದುಕುವುದು ಕಷ್ಟ. ಸತ್ಯ ಏನೆಂದರೆ, Central Government ನಿಂದ ಅಲ್ಲಿ modification ಮಾಡಿ ಬಂದರೂ ಕೂಡ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯವರ co-operation ಇಲ್ಲದೆ ಇವತ್ತಿನವರೆಗೂ ನಿಂತಿದೆ.

ಶ್ರೀ ಹೆಚ್.ಡಿ.ರೇವಣ್ಣ: Government of India ದಿಂದ permission ಕೊಡಿಸುವುದಕ್ಕೆ ವಿಷಯ ಏನಿತ್ತು ಸರ್?

ಶ್ರೀ ಬಸವರಾಜ ಎಸ್.ಬೊಮ್ಮಾಯಿ: ಅಲ್ಲಿಂದ ಇಲ್ಲಿಯವರೆಗೆ ಅನೇಕ ಸರ್ಕಾರಗಳು ಬದಲಾವಣೆಯಾಗಿವೆ. ನಮ್ಮ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯವರು clearance ಮಾಡಿ ಕೊಟ್ಟಿಲ್ಲ. ಒಪ್ಪಿಗೆ ಕೊಟ್ಟಿಲ್ಲ. ನೀವೂ ಸಹ ಸರ್ಕಾರದಲ್ಲಿ ಮಂತ್ರಿಯಾಗಿದ್ದಿರಿ. ಅದರ ಹಿಂದಿನ ಸರ್ಕಾರವಿತ್ತು. ಅದರ ಹಿಂದಿನ ಸರ್ಕಾರ, ಹೀಗೆ ಮೂರು ಸರ್ಕಾರ ಬದಲಾವಣೆಯಾಗಿ ನಾಲ್ಕನೇ ಸರ್ಕಾರ ಬಂದಿದೆ. ಅರಣ್ಯ ಇಲಾಖೆ ಇವತ್ತಿಗೂ ಕೂಡ ಅದರ ಬಗ್ಗೆ ಒಪ್ಪಿಗೆ ಕೊಟ್ಟಿಲ್ಲ. ರಾಜ್ಯ ಸರ್ಕಾರದ ಅರಣ್ಯ ಇಲಾಖೆ ಒಪ್ಪಿಗೆ ಕೊಟ್ಟರೆ ಆಗುತ್ತದೆ. ಅದನ್ನು re-survey ಮಾಡಿ

ಎಂದು ಹೇಳಿದ್ದರು, re-survey ಕೂಡ ಆಗಿದೆ. ಪರಿಸರವಾದಿಗಳು ಕೂಡ Court ಗೆ ಹೋಗಿದ್ದಾರೆ. ಇದು ಸತ್ಯ.

ಶ್ರೀ ಹೆಚ್.ಡಿ ರೇವಣ್ಣ: ಒಂದು ನಿಮಿಷ ಹೇಳಿಬಿಡುತ್ತೇನೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಈಗ ಸಾಕು. ನೀವು ಮೊನ್ನೆಯೂ ಮಾತನಾಡಿದ್ದೀರಿ. ಈಗ ಸಾಕುಮಾಡಿ. Members ಬಹಳ ಜನ ಬಜೆಟ್ ಮೇಲೆ ಮಾತನಾಡುವವರಿದ್ದಾರೆ. ರೇವಣ್ಣನವರೆ ಇನ್ನು ಸಾಕು. ಕುಮಾರಸ್ವಾಮಿಯವರು ಹೇಳುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ: ಸರ್, ಎರಡೇ ನಿಮಿಷ ಹೇಳಿಬಿಡುತ್ತೇನೆ. ಇರುವ ವಿಷಯ ಹೇಳಿಬಿಡುತ್ತೇನೆ. ಬಜೆಟ್‌ನ ಬುಕ್‌ನಲ್ಲಿ ಕೆಲವು ಅಂಶಗಳನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿ.ಸಿ.ಪಾಟೀಲ್: ಮಾನ್ಯ ಕುಮಾರಸ್ವಾಮಿಯವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ ರೇವಣ್ಣನವರೆ.

(ಗೊಂದಲ)

ಅಧ್ಯಕ್ಷರು: ರೇವಣ್ಣನವರೆ, ನೀವು ಕುಮಾರಸ್ವಾಮಿಯವರಿಗೆ ಮಾತನಾಡುವುದಕ್ಕೆ ಬಿಡಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಎಲ್ಲ ಸದಸ್ಯರಿಗೆ ಏಕೆ ಇಷ್ಟೊಂದು ಅನುಮಾನವಾಯಿತು?

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ಅವರು ಇಷ್ಟು ಹೊತ್ತಿಗೆ ಮಾತನಾಡಿ ಮುಗಿಸುತ್ತಿದ್ದರು ಅವರು ಮಾತನಾಡುವುದಕ್ಕೆ ಬಿಡಿ, ಎಲ್ಲರು ಸುಮ್ಮನಿರಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಅಧಿಕಾರವಿದ್ದಾಗ ಕಾರುಬಾರು ಅವರದೇ, ಈಗ ಮಾತೂ ಅವರದ್ದೇ.

ಶ್ರೀ ಹೆಚ್.ಡಿ.ರೇವಣ್ಣ: ಪಾಪ, ರವಿಗೆ NDA Governmenvt ಇದ್ದಾಗ ಕಡೂರು-ಚಿಕ್ಕಮಗಳೂರು ಬಗ್ಗೆ ಜ್ಞಾಪಕವಿರಲಿಲ್ಲ. ಶಾಲು ಹೊದ್ದುಕೊಂಡು ಭಜನೆ ಮಾಡುತ್ತಿದ್ದ. ರವಿ, ಸುಮ್ಮನೆ ಕುಳಿತುಕೊಳ್ಳಪ್ಪ, ನಿನಗೇನು ಗೊತ್ತಿದೆ? ನಿಮ್ಮ NDA ಸರ್ಕಾರ 6 ವರ್ಷ ಆಡಳಿತದಲ್ಲಿತ್ತಲ್ಲ, ಕಡೂರು-ಚಿಕ್ಕಮಗಳೂರು ರಸ್ತೆಗೆ ಅವರು ಏಕೆ ಆಗ ಮಾಡಿಸಲಿಕ್ಕಾಗಲಿಲ್ಲ? ಪಾಪ, ಆವತ್ತು ಅವರು ಅಲ್ಲಿ ಕಾವಿ ಬಟ್ಟೆ ಹಾಕಿಕೊಂಡಿದ್ದರು.

(ಗೊಂದಲ)

ಅಧ್ಯಕ್ಷರು: ರೇವಣ್ಣನವರೆ, please ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ರೇವಣ್ಣ: ರವಿ, ನಿಮ್ಮಿಂದ ನಾನು ಕಲಿಯಬೇಕಾಗಿಲ್ಲ. ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ: ಅದಕ್ಕೂ ಉತ್ತರ ಕೊಡಬೇಕೆನ್ನುವುದಾದರೆ ಕೊಡುತ್ತೇನೆ. ನಿಮ್ಮ ಕೈಯಲ್ಲಿಯೇ ಅಧಿಕಾರವಿತ್ತಲ್ಲ. ಆ road ಕೆಲಸ file ಅನ್ನು ಎಲ್ಲಿ ಅಡಿಗೆ ಹಾಕಿಕೊಂಡು ಕುಳಿತಿದ್ದಿರಿ? ಮುಖ್ಯಮಂತ್ರಿಯಾಗಿದ್ದಂಥ ಕುಮಾರಸ್ವಾಮಿಯವರ ಬಗ್ಗೆ ನಾನು ಮಾತನಾಡುವುದಿಲ್ಲ. ಅವರು ಹಣವನ್ನು ಕೊಟ್ಟರು, ಹಣಕಾಸಿನ ಸಚಿವರು ಕೊಟ್ಟರು, ನೀವು ಆ file ಅನ್ನು ಅಡಿಗೆ ಹಾಕಿಕೊಂಡು ಕುಳಿತಿಬಿಟ್ಟರಲ್ಲಾ. ನಿಮ್ಮ ಕಾಳಜಿ ಏನು ಎನ್ನುವುದನ್ನು ಹೇಳಿ.

ಅಧ್ಯಕ್ಷರು: ವಿಷಯಾಂತರ ಆಗುತ್ತಿದೆ. ಮಾನ್ಯ ಕುಮಾರಸ್ವಾಮಿಯವರೆ, ತಾವು ಮುಂದುವರೆಸಿ. ರೇವಣ್ಣನವರೆ, please, ಕುಳಿತುಕೊಳ್ಳಿ. ಇಲ್ಲದಿದ್ದರೆ ಮತ್ತೆ ಬೇರೆ ವಿಷಯಕ್ಕೆ ಹೋಗುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: Road ನ ವಿಷಯ ಅವರಿಗೆ ಗೊತ್ತಿದೆಯೇ?

ಅಧ್ಯಕ್ಷರು: ರೇವಣ್ಣನವರೆ, ಸಾಕಷ್ಟು ಶಾಸಕರು ಮಾತನಾಡುವವರಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೇ, ರವಿಯವರಿಗೆ road ನ ವಿಷಯ ಗೊತ್ತಿರಲಿಲ್ಲ. ದೇವನಹಳ್ಳಿಯಲ್ಲಿ ಯಾವ ಜಮೀನನ್ನು de-notificatioin ಮಾಡಿಸಬೇಕೆಂದು ಕುಮಾರಸ್ವಾಮಿಯವರ ಹತ್ತಿರ ತಲೆ ಕೆರೆದುಕೊಂಡು ನಿಂತಿದ್ದರೆನ್ನುವುದನ್ನು ಜ್ಞಾಪಕ ಇಟ್ಟುಕೊಳ್ಳುವುದಕ್ಕೆ ಹೇಳಿ. ಹೇಳುವುದಕ್ಕೆ ಹೆದರಿಕೆ ಏಕೆ ಬೇಕು? ಹೇಳುತ್ತೇನೆ. ನಾನು ಧೈರ್ಯವಾಗಿ ಹೇಳುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೆ Railway ಯೋಜನೆಯನ್ನು ಪ್ರಸ್ತಾಪ ಮಾಡಿದೆನೆಂದರೆ ಮಾನ್ಯ ದೇವೇಗೌಡರು ಆಕಸ್ಮಿಕವಾಗ ಈ ರಾಷ್ಟ್ರದ ಪ್ರಧಾನ ಮಂತ್ರಿಗಳಾದಾಗ ಕೈಗೊಂಡಂಥ ಹಲವಾರು ಯೋಜನೆಗಳೇನಿವೆ, ಆ ಯೋಜನೆಗಳಿಗೆ ಮುಂದಿನ ಕೇಂದ್ರ ಸರ್ಕಾರಗಳು ಬಂದಾಗ ಯಾವ ರೀತಿ ಆ ಯೋಜನೆಗಳ ಬಗ್ಗೆ ಕಾರ್ಯೋನ್ಮುಖರಾದರು ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಇವತ್ತು ಈ ಹುಬ್ಬಳ್ಳಿ-ಅಂಕೋಲ ವಿಷಯವನ್ನು ಏತಕ್ಕೆ ಪ್ರಸ್ತಾಪ ಮಾಡಿದೆನೆಂದರೆ, ಅರಣ್ಯ ಇಲಾಖೆಯಿಂದ ತಡೆ ಆಯಿತೆಂದು ಅವರು ಹೇಳುತ್ತಿದ್ದಾರೆ.

ನಾನು ಮೊದಲೇ ಹೇಳಿದ ಹಾಗೆ, ಬೆಂಗಳೂರು ನಗರದ ಅಭಿವೃದ್ಧಿಗೆ ಸಂಬಂಧಪಟ್ಟಹಾಗೆ, 85 ಎಕರೆ defence land ಅನ್ನು ಬಿಡಿಸಿದರು. ಬದ್ಧತೆ ಇದ್ದರೆ, ಯಾವುದಾದರೊಂದು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕೆನ್ನುವ commitment ಇದ್ದರೆ, ಇವತ್ತು ಪ್ರಧಾನ ಮಂತ್ರಿಯವರಿಗೆ ಆ ಕೆಲಸವನ್ನು ಮಾಡತಕ್ಕಂಥದ್ದಕ್ಕೆ ಯಾವುದೇ ರೀತಿಯ ಅಡಚಣೆಯಾಗುವುದಿಲ್ಲ. ಅವರು ಹೇಳಿದ ಮೇಲೆ ಮಾಡಲೇಬೇಕಾಗುತ್ತದೆ. ಆ ದೃಷ್ಟಿಯಿಂದ ಅಂದು ಅರಣ್ಯ ಇಲಾಖೆಯು query ಗಳಿದ್ದಿದ್ದರೆ, usually ನನಗೆ ತಿಳಿದ ಮಟ್ಟಿಗೆ ಪ್ರಧಾನ ಮಂತ್ರಿಯವರು ಯಾವುದಾದರೊಂದು ಕಾರ್ಯಕ್ರಮಕ್ಕೆ ಹೋಗುವುದಾದರೆ, inauguration ಅಥವಾ foundation stone ಹಾಕುವುದಕ್ಕೆ ಹೋಗುವುದಾದರೆ, ಅದರಲ್ಲಿ ಯಾವುದೇ technical problem ಇದ್ದರೆ ಅವರು ಅಂಥ ಕಾರ್ಯಕ್ರಮಗಳಿಗೆ ಹೋಗುವುದಿಲ್ಲ. ಅದರ ಬಗ್ಗೆ ಅವರಿಗೆ ಮೊದಲೇ ಮಾಹಿತಿ ಸಿಗುತ್ತದೆ. ಅದರ ಆಧಾರದ ಮೇಲೆ ನಾವು ಹೇಳಬೇಕೆನ್ನುವುದಾದರೆ, ಅಂದೇನು ಅವರನ್ನು ಕರೆದುಕೊಂಡು ಬಂದು foundation stone ಹಾಕಿಸಿದ್ದೀರಿ, ಇವತ್ತು ಬೇರೆ ಯೋಜನೆಗಳ ಬಗ್ಗೆ, railway ಯೋಜನೆ ಬಗ್ಗೆ ಇವತ್ತು ಹಣ ಬಿಡುಗಡೆ ಮಾಡುತ್ತಿದ್ದೀರಿ, ಕೇಂದ್ರ ಸರ್ಕಾರ ನಿಮಗೆ ಹಣ ಕೊಟ್ಟಾಗ ತಾನೆ? ಈ ಯೋಜನೆಗಳ ಬಗ್ಗೆ ಮನವಿ ಮಾಡಲು Railway ಸಚಿವರ ಹತ್ತಿರ ನಾನು 20 ಸಲವಾದರೂ ಹೋಗಿ ಭೇಟಿ ಮಾಡಿರಬಹುದು. ಕೇಂದ್ರ ಸರ್ಕಾರ ಯಾವ ರೀತಿ ನಮ್ಮ ರಾಜ್ಯದ ಬಗ್ಗೆ ತೀರ್ಮಾನಗಳನ್ನು ಮಾಡುತ್ತದೆ ಎನ್ನುವ ದೃಷ್ಟಿಯಿಂದ ಈ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಹೊಸದಾಗಿ ಮತ್ತೆ ಕೆಲವು ನಿಗಮಗಳನ್ನು ರಚಿಸಲಿಕ್ಕೆ ಹೊರಟಿದ್ದಾರೆ. ಹೊಸದಾಗಿ ಐದಾರು ನಿಗಮಗಳನ್ನು ಪ್ರಾರಂಭ ಮಾಡಬೇಕೆಂದು ತೀರ್ಮಾನಿಸಿದ್ದಾರೆ. ಸಾರ್ವಜನಿಕ ಜಮೀನುಗಳ ನಿಗಮ ಅದರಲ್ಲೊಂದು. ವಲಯ ಬೇರೆ. ವಲಯಕ್ಕಿಂತ ಹೆಚ್ಚಾಗಿ ನಿಗಮಗಳನು ರಚಿಸುತ್ತಿದ್ದಾರೆ. ನಾನು ಇವತ್ತು ಹೊಸದಾಗಿ 6 ಖಾತೆಗಳಿಗೆ ಸಂಬಂಧಪಟ್ಟ ಹಾಗೆ ನಿಗಮಗಳ ಬಗ್ಗೆ, ಅವರೇ ಈ ಹಿಂದೆ ವಿರೋಧ ಪಕ್ಷದ ನಾಯಕರಾಗಿ ಕುಳಿತು ಕೆಲಸ ಮಾಡುವ ಸಂದರ್ಭದಲ್ಲಿ ಈ ನಿಗಮಗಳ ವ್ಯಾಪ್ತಿ, ನಿಗಮಗಳ ಕೆಲಸಗಳೇನು ಎಂಬ ಬಗ್ಗೆ ಇಲ್ಲೇನು ಚರ್ಚೆ ಮಾಡಿದರೆಂಬ ವಿಷಯವನ್ನು ಪ್ರಸ್ತಾಪಿಸುತ್ತೇನೆ. ಅವರು ಇವತ್ತೇನು ನಿಗಮಗಳನ್ನು ರಚಿಸಲಿಕ್ಕೆ ಹೊರಟಿದ್ದಾರೆ, ಅಂದು ಆ ಸ್ಥಾನದಲ್ಲಿ ಕುಳಿತು ಅವರು ಒಂದು ವಿಷಯ ಪ್ರಸ್ತಾಪ ಮಾಡಿದ್ದಾರೆ.

"ಒಟ್ಟು 76 ಸಾರ್ವಜನಿಕ ಉದ್ಯಮಗಳಲ್ಲಿ 44 ಉದ್ಯಮಗಳಿಂದ accumulated loss 99,441 ಕೋಟಿ ರೂಪಾಯಿಗಳು, ಉಳಿದ 32 ಕಂಪನಿಗಳಲ್ಲಿ

21 ಕಂಪನಿಗಳವರು ಪೂರ್ಣ ಬಂಡವಾಳ ಹಾಕಿದ್ದನ್ನೆಲ್ಲ ನುಂಗಿ ನೀರು ಕುಡಿದುಬಿಟ್ಟಿದ್ದಾರೆ. Share amount ಸಹ ಇಲ್ಲ. ಈ ಸಾರ್ವಜನಿಕ ಉದ್ಯಮಗಳಿಗೆ ಸರ್ಕಾರದಿಂದ 1,000 ಕೋಟಿ ರೂಪಾಯಿಗಳ contribution ಇದ್ದರೂ ಕೂಡ ಹೂಡಿರುವ ಬಂಡವಾಳ 9,059 ಕೋಟಿ ರೂಪಾಯಿಗಳು. ದಯಮಾಡಿ, ಈ ಸಾರ್ವಜನಿಕ ಉದ್ಯಮಗಳಿಗೆ technocrats ನೇಮಕ ಮಾಡಿ. ಈ IAS, ರಾಜಕಾರಣಿಗಳನ್ನು ನಾಳೆಯಿಂದಲೋ, ನಾಡಿದ್ದಿನಿಂದಲೋ ಅಧ್ಯಕ್ಷರನ್ನಾಗಿ ನೇಮಿಸಲು ಹೊರಟಿದ್ದೀರಲ್ಲಾ, ಈ ಅಧ್ಯಕ್ಷರನ್ನು ನೇಮಕ ಮಾಡುವುದನ್ನು ಬಿಡಿ. ಶಾಸಕರಿಗೆ ರಾಜಾಶ್ರಯ ಕೊಟ್ಟು ಮಂಡಳಿಗೆ ಅಧ್ಯಕ್ಷರನ್ನು ನೇಮಕ ಮಾಡುವುದು ಏತಕ್ಕೆ? ಯಾರಿಗೆ? ಆ ಇಲಾಖೆಯನ್ನು ಸರಿಪಡಿಸುವಂಥ ಶಕ್ತಿ ಇಲ್ಲ. ಸ್ವಲ್ಪ ಮೇಯಿಸಿಕೊಂಡು ಆರಾಮವಾಗಿರಿ ಎಂದು ಹೇಳುವುದು ಸರಿಯಲ್ಲ."

ಮಾನ್ಯ ಯಡಿಯೂರಪ್ಪನವರು ಈಗ ಮಾನ್ಯ ಖರ್ಗೆಯವರು ಕುಳಿತಿರುವ ಜಾಗದಲ್ಲಿ ಕುಳಿತಿದ್ದಾಗ ನಿಗಮ ಮಂಡಳಿಗಳ ಬಗ್ಗೆ ಮಾತನಾಡುತ್ತಾ, ಶಾಸಕರನ್ನು ಯಾವ ಕಾರಣಕ್ಕೂ ಅಧ್ಯಕ್ಷರನ್ನಾಗಿ ನೇಮಕ ಮಾಡಬಾರದು ಎನ್ನುವ ವಿಷಯವನ್ನು ಪ್ರಸ್ತಾಪಿಸಿದ್ದರು. ಅದೆಲ್ಲ ಚರ್ಚೆಯಾಗುತ್ತಾ ಕೆಲವು ಶಾಸಕರು–"ಹಾಗಾದರೆ ಶಾಸಕರೆಲ್ಲ ದಡ್ಡರೇ" ಎಂದು ಹೇಳಿದಾಗ,

"ಶಾಸಕರನ್ನು ನೇಮಕ ಮಾಡಬಾರದೆಂಬುದು ನನ್ನ ಸ್ಪಷ್ಟ ಅಭಿಪ್ರಾಯ, ನನ್ನ ಪಕ್ಷದ ಅಭಿಪ್ರಾಯ. Technocrasts ಅನ್ನು ನೇಮಕ ಮಾಡಬೇಕೆಂಬುದು ನನ್ನ ಸ್ಪಷ್ಟ ಅಭಿ ಪ್ರಾಯ. ಸಾರ್ವಜನಿಕ ಉದ್ಯಮಗಳನ್ನು ಉಳಿಸಬೇಕೆನ್ನುವುದಿದ್ದರೆ internal audit ವ್ಯವಸ್ಥೆಯನ್ನು ತರಬೇಕೆಂಬುದು ನನ್ನ ಸ್ಪಷ್ಟ ಅಭಿಪ್ರಾಯ. Responsibility, accountability fix ಆಗಬೇಕು. ಕೊನೆಯಲ್ಲಿ ಅವರು ಶಾಸಕರನ್ನು ನೇಮಕ ಮಾಡುವುದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ" ಎಂದು ಹೇಳಿದ್ದಾರೆ. 'ಸದನದ ಕಲಾಪ ಮುಗಿದ ತಕ್ಷಣವೇ ಎಲ್ಲಾ ನಿಗಮ ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸುತ್ತೇವೆಂದು' ಮೊನ್ನೆ ಎಲ್ಲೋ ನಿಮ್ಮ ಪಕ್ಷದ ಅಧ್ಯಕ್ಷರೇ ಹೇಳಿದ್ದಾರೆ. ಅಂದು ಕಠೋರ ಶಬ್ದಗಳಿಂದ ಶಾಸಕರನ್ನು ನಿಗಮ ಮಂಡಳಿಗಳ ಅಧ್ಯಕ್ಷರನ್ನಾಗಿ ಮಾಡುವುದು ಆರಾಮವಾಗಿ ದುಡ್ಡು ಹೊಡೆಯಲಿಕ್ಕೆ, ಆರಾಮವಾಗಿ ದುಡ್ಡು ಮಾಡಿಕೊಂಡಿರಲಿ ಎನ್ನುವುದಕ್ಕೆ ನಿಗಮ ಮಾಡಿರುವುದು ಎನ್ನುವ ವಿಷಯವನ್ನು ಅವರು ಇಲ್ಲಿ ಪ್ರಸ್ತಾಪ ಮಾಡಿದ್ದರು. ಮುಖ್ಯಮಂತ್ರಿಯಾದ ತಕ್ಷಣ ಅವರಿಗೆ ಈಗ ಇವೆಲ್ಲ ಒಳ್ಳೆಯದಕ್ಕೋಸ್ಕರ ಮಾಡುವುದು ಎನ್ನುವ ಭಾವನೆ ಏನಾದರೂ ಬಂದಿದೆಯೇ?

ಶ್ರೀ ಕೆ.ಎಂ.ವಿರೂಪಾಕ್ಷಪ್ಪ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ವಿರೂಪಾಕ್ಷಪ್ಪನವರೆ, ಕುಳಿತುಕೊಳ್ಳಿ. ಇದನ್ನು ಮುಗಿಸಿಬಿಡೋಣ. Intervene ಮಾಡಬೇಡಿ. (ಗೊಂದಲ) ಕುಮಾರಸ್ವಾಮಿಯವರೆ, ನೀವು yield ಆಗಬೇಡಿ.

ಶ್ರೀ ಕೆ.ಎಂ.ವಿರೂಪಾಕ್ಷಪ್ಪ: ಸಮ್ಮಿಶ್ರ ಸರ್ಕಾರದಲ್ಲಿ ಬಿಜೆಪಿಯಿಂದ ಅಧ್ಯಕ್ಷರನ್ನು ನೇಮಕ ಮಾಡುವಾಗ ಅವರು...

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ವಿರೂಪಾಕ್ಷಪ್ಪನವರೆ, ನೀವು ಇನ್ನೂ ಹೊಸಬರಿದ್ದೀರಿ, ಕುಳಿತುಕೊಳ್ಳಿ. ನಾನು ಏತಕ್ಕೆ ಈ ವಿಷಯ ಪ್ರಸ್ತಾಪ ಮಾಡಿದೆನೆಂದರೆ, ರಾಜ್ಯದ ಬಗ್ಗೆ ರಾಜ್ಯ ಸರ್ಕಾರದ ಬಗ್ಗೆ, ರಾಜ್ಯ ಸರ್ಕಾರದ ಹಣ ಯಾವುದೇ ಕಾರಣಕ್ಕೂ ಪೋಲಾಗಬಾರದೆಂಬ ದೂರದೃಷ್ಟಿ ಅಂದಿನ ಕಾಲದಲ್ಲಿ ಏನಿತ್ತು, ಆ ದೃಷ್ಟಿಯಿಂದ ಅದನ್ನು ಅವರು ಮರೆತಿದ್ದರೆ ಅದನ್ನು ನೆನಪಿಸುತ್ತದ್ದೇನೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬೆಳಗ್ಗೆ ಮಹದೇವ ಪ್ರಸಾದ್‌ರವರು ಮಾತನಾಡುತ್ತಾ, ಅಬಕಾರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಏತಕ್ಕೋಸ್ಕರ ಒಂದು ಸಾವಿರ ಮದ್ಯದ ಅಂಗಡಿಗಳಿಗೆ, 500 bar and restaurant ಗಳಿಗೆ licence ಕೊಡುತ್ತಿದ್ದಾರೆ ಎಂಬ ಬಗ್ಗೆ ಹೇಳಿದರು. ಇವರು ಬಜೆಟ್‌ನಲ್ಲಿ ಹೇಳಿರುವಂತೆ "ಸಾರಾಯಿ ಮಾರಾಟ ನಿಷೇಧದಂಥ ಚಾರಿತ್ರಿಕ ನೀತಿಯನ್ನು ಕಳೆದ ವರ್ಷ ಆಯವ್ಯಯದಲ್ಲಿ ಮಂಡಿಸಿದ್ದು ಮಾನ್ಯ ಸದಸ್ಯರಿಗೆ ತಿಳಿದಂಥ ಅಂಶ. ಈ ನೀತಿ ಸಾಮಾಜಿಕ ಸ್ವಾಸ್ಥ್ಯತೆಗೆ ಪೂರಕವಾದಂಥ ಹೆಜ್ಜೆ ಎಂದು ಸಾರ್ವತ್ರಿಕ ಮನ್ನಣೆ ದೊರೆತಿದ್ದು ಸಾರ್ವಜನಿಕರು, ಸಾಮಾಜಿಕ ಕಾರ್ಯಕರ್ತರು ಮತ್ತು ಮಹಿಳಾ ಸಂಘಟನೆಗಳು ಈ ಕ್ರಮವನ್ನು ಸ್ವಾಗತಿಸಿವೆ. ಇಂಥ ಕ್ರಾಂತಿಕಾರಕ ಹೆಜ್ಜೆಯನ್ನು ಕಳೆದ ವರ್ಷ ಹೆಚ್ಚಿನ ಅಡೆತಡೆಗಳಿಲ್ಲದೆ ಜಾರಿಗೆ ತರಲಾಗಿದೆ. ಆದಾಗ್ಯೂ, ಕೆಲವು ಸಮಾಜಘಾತುಕ ವ್ಯಕ್ತಿಗಳು ಅಕ್ರಮ ಸಾರಾಯಿ ಮತ್ತು ಇತರೇ ಅಪಾಯಕಾರಿ ವಸ್ತುಗಳನ್ನು ತಯಾರಿಸಿ ಸಾರ್ವಜನಿಕರ ಆರೋಗ್ಯವನ್ನು ಕೆಡಿಸುತ್ತಿದ್ದಾರೆ. ಇದನ್ನು ಹೋಗಲಾಡಿಸಲು ಅಬಕಾರಿ ಮತ್ತು ಪೊಲೀಸ್ ಇಲಾಖೆಯ ಜಾರಿ ಮತ್ತು ತನಿಖೆ ಸಾಮರ್ಥ್ಯವನ್ನು ಹೆಚ್ಚಿಸಿ ಇಂಥ ಅಕ್ರಮ ಚಟುವಟಿಕೆಗಳನ್ನು ತೊಡೆದು ಹಾಕಲು ಪ್ರಸ್ತಾಪಿಸಿದ್ದೇನೆ" ಎಂದು ಹೇಳಿದ್ದಾರೆ. ಇದನ್ನು ಸರಿಪಡಿಸಲಿಕ್ಕೆಂದೇ, ಗ್ರಾಮಾಂತರ ಪ್ರದೇಶಗಳಲ್ಲಿ ಮದ್ಯದ ಬೇಡಿಕೆಯನ್ನು ಪೂರೈಸಿಕೊಳ್ಳಲು ಯಾವ ಉದ್ದೇಶದಿಂದ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ನಮ್ಮ ಹಳ್ಳಿಗಳಲ್ಲಿ ಸಾರಾಯಿ ಮರಾಟ ಮಡುವುದನ್ನು ನಿಷೇಧ ಮಾಡಬೇಕೆಂಬ ಒತ್ತಡ ತಂದ ಆಧಾರದ ಮೇಲೆ ನಾನೊಂದು editorial ಓದಿದೆ. ದಡದ ಕಲ್ಲಹಳ್ಳಿಗೆ ಹೋದಾಗ ಅಲ್ಲಿನ ಹೆಣ್ಣುಮಕ್ಕಳು

ನನ್ನ ಹತ್ತಿರ ಬಂದು ಹೇಳಿದ ಸಂದರ್ಭದಲ್ಲಿ, ಆಯಿತು, ನೀವು ಹೇಳಿದ ಮೇಲೆ ನಿಮಗೆ ನೋವು ಆಗುವುದು ಬೇಡ , ಸಾರಾಯಿ ನಿಷೇಧ ಮಾಡುತ್ತೇವೆಂಬ ಪ್ರಕಟಣೆಯನ್ನು ಅಲ್ಲಿ ಮಾಡಿದಾಗ, ಮುಖ್ಯಮಂತ್ರಿಯವರು ಈ ರೀತಿ ಸಾರ್ವಜನಿಕರ ನೋವಿಗೆ ಸ್ಪಂದಿಸಿ ತಕ್ಷಣ ಈ ತರಹ ತೀರ್ಮಾನ ಮಾಡಬಾರದು, ಅದರ ಸಾಧಕಬಾಧಕಗಳನ್ನು ನೋಡಬೇಕು ಎನ್ನುವ ಒಂದು editorial ಅನ್ನು ಓದಿದೆ. ಯಾವ ಉದ್ದೇಶದಿಂದ ನಾವು ಸಾರಾಯಿ ಮಾರಾಟ ನಿಷೇಧ ಮಾಡಿದ್ದೇವೆ, ಅದೇ ಗ್ರಾಮಗಳಿಗೆ ಮತ್ತೆ ಮದ್ಯದ ಬೇಡಿಕೆಯನ್ನು ಪೂರೈಸಲಿಕ್ಕೆ ಇನ್ನೊಂದು ಮಾರ್ಗದಲ್ಲಿ 1,000 CL-2, 500 bar ಗಳಿಗೆ licence ಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಮಹದೇವ ಪ್ರಸಾದ್‌ರವರು ಈ ಬಗ್ಗೆ ಚರ್ಚೆ ಮಾಡಿದರು. ಸರ್ಕಾರ ಬಣ್ಣ ಬಯಲು ಬಡ ಕುಟುಂಬಗಳು ಬೀದಿ ಪಾಲು, ಸಾರ್ವಜನಿಕರ ತಮ್ಮ ಭಾವನೆಗಳನ್ನೇನು ಒಂದು ಪತ್ರಿಕೆಯಲ್ಲಿ ಪ್ರಕಟ ಮಾಡಿದ್ದಾರೆ, ನಾನು ಒಂದು ವಿಷಯವನ್ನು ಕೇಳಲಿಕ್ಕೆ ಬಯಸುತ್ತೇನೆ, ಕಳ್ಳಬಟ್ಟಿ ದುರಂತದಿಂದ ಹಳ್ಳಿಯಲ್ಲಿ ಸಾರಾಯಿ ಸಿಗದಿರುವ ಸಂದರ್ಭದಲ್ಲಿ ಈ ರೀತಿ ಏನು ಬೇರೆ ಬೇರೆ ರೀತಿಯ ಸಮಾಜಘಾತುಕ ಶಕ್ತಿಗಳು ಕೆಲಸ ಮಾಡುತ್ತಿವೆ, ಇದರಿಂದ ಪ್ರಾಣಹಾನಿಯಾಗುತ್ತದೆನ್ನುವ ಉದ್ದೇಶದಿಂದ ನೀವೇನಾದರೂ ಸುಲಭದಲ್ಲಿ ಕೊಡಬೇಕೆಂದು ತಂದರೂ ಈಗಾಗಲೇ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ನಾವು ಸಾರಾಯಿ ನಿಷೇಧ ಮಾಡಿರಲಿಲ್ಲ. ಆ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಒಂದು ಘಟನೆ ನಡೆಯಿತು. 2–3 ಭಾಗಗಳಲ್ಲಿ ಕಳ್ಳಬಟ್ಟಿ ದುರಂತದಿಂದ ಜನ ಮರಣ ಹೊಂದಿದರು. ಆ ಸಂದರ್ಭದಲ್ಲಿ Justice ಸದಾಶಿವ ಆಯೋಗವನ್ನು ರಚನೆ ಮಾಡಿದ್ದೆವು. Justice ಸದಾಶಿವ ಆಯೋಗ ಯಾವುದೇ ರೀತಿಯ ವರದಿಯನ್ನು ಇಲ್ಲಿಯವರೆಗೆ ಸರ್ಕಾರಕ್ಕೆ ಕೊಟ್ಟಿಲ್ಲ. ಯಾವ ಕಾರಣಕ್ಕೋಸ್ಕರ ಕಳ್ಳಬಟ್ಟಿ ಘಟನೆಗಳು ನಡೆದಿವೆ, ಇದಕ್ಕೆ ಏನು ತೀರ್ಮಾನಗಳಾಗಬೇಕೆನ್ನುವುದಕ್ಕೆ Justice ಸದಾಶಿವ ಆಯೋಗವನ್ನು ರಚಿಸಿದ್ದೆವು, ಅವರು ವರದಿಯನ್ನೇ ಕೊಡದಿದ್ದಾಗ ಇಷ್ಟೊಂದು ತರಾತುರಿಯಲ್ಲಿ 1000 ಮದ್ಯದ ಅಂಗಡಿಗಳನ್ನು ತೆರೆಯುವುದಕ್ಕೆ CL-2 ಗೆ ಅನುಮತಿ ಕೊಡುವ ಅವಶ್ಯಕತೆ ಏನಿತ್ತು? ಸಾವಿರ ಸಿಎಲ್–2 ಅಂಗಡಿಗಳನ್ನು ತೆರೆಯತಕ್ಕಂಥದ್ದಕ್ಕೆ ಯಾವ ಅಳತೆಗೋಲನ್ನು ಇಡುತ್ತೀರಿ? ಯಾವ ರೀತಿಯಾಗಿ ಆಯ್ಕೆ ಮಾಡುತ್ತೀರಿ? Justice ಸದಾಶಿವ ಆಯೋಗದ ವರದಿಯೇ ಇನ್ನೂ ಬಾರದೇ ಇದ್ದಾಗ..

ಶ್ರೀ ಬಿ.ಎನ್.ಬಚ್ಚೇಗೌಡ: ಅದು ಕೇವಲ ಪ್ರಸ್ತಾವನೆ.

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ: ಹೊಸದಾಗಿ ನೀಡಲು ಉದ್ದೇಶಿಸಲಾಗಿದೆ ಎಂದರೆ ಏನರ್ಥ? ಹಾಗಾದರೆ ನೀವು ಕೊಡುವುದಿಲ್ಲವೆ, ಈ ಬಗ್ಗೆ ಸರ್ಕಾರ

ಸ್ಪಷ್ಟಪಡಿಸಬೇಕಾಗುತ್ತದೆ. ಹಾಗಾದರೆ ಸರ್ಕಾರದಿಂದ ನಾವು ನಿರೀಕ್ಷೆ ಮಾಡಬಹುದು. ಮತ್ತೊಂದು ವಿಚಾರ ಏನೆಂದರೆ, ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು 58 ರಿಂದ 60 ಕ್ಕೆ ಏರಿಸಿದ್ದೀರಿ ಇವರನ್ನು ಯಾರು ಕೇಳಿದ್ದರು? ಪತ್ರಿಕೆಯಲ್ಲಿ ಬರೆಯುತ್ತಾರೆ, ಸದ್ಯಕ್ಕೆ ಹಣ ಉಳಿತಾಯ. ಒಂದೇ ಕಲ್ಲಿನಲ್ಲಿ ಮೂರು ಹಣ್ಣು, ಈ ಎಲ್ಲಾ ಡಿಟೇಲ್ ಓದಲಿಕ್ಕೆ ಹೋಗುವುದಿಲ್ಲ. ಆದರೆ, ಬಿಜೆಪಿಯ ಪ್ರಣಾಳಿಕೆಯಲ್ಲಿ ಒಂದು ಲಕ್ಷ ನಿರುದ್ಯೋಗ ಯುವಕರಿಗೆ ಉದ್ಯೋಗ ಕೊಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ ಐದನೇ ವೇತನ ಆಯೋಗದ ವರದಿಯಾಧಾರದ ಮೇಲೆ ಹಲವಾರು ಅನುಕೂಲಗಳನ್ನು ನಾವು ಸರಕಾರಿ ನೌಕರರಿಗೆ ಕೊಟ್ಟಿದ್ದೇವೆ. ನಾನೇನು ಸರಕಾಋಇ ನೌಕರರ ವಿರೋಧಿಯಲ್ಲ. ಮಾನ್ಯ ವಾಜಪೇಯಿರವರು ಕೇಂದ್ರ ಸರ್ಕಾರಿ ನೌಕರರಿಗೆ 58 ರಿಂದ 60 ವರ್ಷದವರೆಗೆ ಏರಿಕೆ ಮಾಡಿದರು. ಅವರೇ ನಂತರದ ದಿನಗಳಲ್ಲಿ ನಾನು ಮಾಡಿದ್ದು ತಪ್ಪಾಯಿತು ಅದನ್ನು ಪುನ: ರಿವರ್ಸ್ ಮಾಡುವ ವಿಷಯವನ್ನು ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಹೋಗುತ್ತೇನೆಂದು ಪ್ರಸ್ತಾಪಿಸಿದ್ದರು. ಕೇರಳದಲ್ಲಿ 55 ವರ್ಷಕ್ಕೆ ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು ಸೀಮಿತಗೊಳಿಸಿದ್ದಾರೆ. ಏಕೆ ಇಷ್ಟು ತುರಾತುರಿಯಲ್ಲಿ ಮಾಡಿದಿರಿ? ಇದನ್ನು ಮಾಡುವ ಅವಶ್ಯಕತೆಯಿತ್ತಾ? ಇದನ್ನು ಯಾರು ಕೇಳಿದ್ದರು? ಇವತ್ತು ನನ್ನ ಬಗ್ಗೆ ಯಾರಾದರೂ ಸರಕಾರಿ ನೌಕರರ ವಿರೋಧಿ ಎಂದು ಕಾಮೆಂಟ್ಸ್ ಮಾಡಬಹುದು. ಈ ಬಗ್ಗೆ ಪತ್ರಿಕೆಗಳಲ್ಲಿ ಹಲವಾರು ಆರ್ಟಿಕಲ್ಸ್ ಬಂದಿದೆ. ವಿಜಯ ಕರ್ನಾಟಕ ಪತ್ರಿಕೆಯು, ಬ್ಯಾಂಕ್ವೆಟ್ ಹಾಲ್‌ನಲ್ಲಿ ಈ ರಾಜ್ಯದ ಜನರ ಅನಿಸಿಕೆಗಳನ್ನು ಅನುಷ್ಠಾನಕ್ಕೆ ತರಬೇಕು ಎನ್ನುವ ನಿಟ್ಟಿನಲ್ಲಿ ಒಂದು ದೊಡ್ಡ ಕಾರ್ಯಕ್ರಮವನ್ನು ಹಾಕಿಕೊಂಡು, ಆ ಅನಿಸಿಕೆಗಳನ್ನು ಇಲ್ಲಿ ಪ್ರಕಟಿಸಲಾಯಿತು. ಆದರೆ, ಅದೇ ಪತ್ರಿಕೆಯಲ್ಲಿ ಒಂದು ವಿಶೇಷ ಅಂಕಣ ಬಮದಿದೆ ಇದರಲ್ಲಿ "ಯಡಿಯೂರಪ್ಪನವರು, ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು 60ಕ್ಕೆ ಏರಿಸಿರತಕ್ಕಂಥದ್ದಕ್ಕೆ ನನ್ನನ್ನು ಅಭಿನಂದಿಸಬೇಕಾಗಿತ್ತು ಯಾರು ಅಭಿನಂದಿಸಲಿಲ್ಲ, ಎಂದಿದ್ದಕ್ಕೆ, ಮುಖ್ಯಮಂತ್ರಿಗಳು ಯಾವ ಸಾಧನೆಯನ್ನು ಮಾಡಿದ್ದಾರೆಂದು ಅಭಿನಂದಿಸಬೇಕಿತ್ತು" ಎನ್ನುವ ಒಂದು ಅಂಕಣವನ್ನು ಅದೇ ಪತ್ರಿಕೆಯಲ್ಲಿ ಬರೆದಿದ್ದಾರೆ. ಅವರ ಕಾರ್ಯಕ್ರಮಗಳು ಯಾವ ರೀತಿಯಾಗಿ ಅನುಷ್ಠಾನಕ್ಕೆ ತರಬೇಕೆಂದು ತಿಳುವಳಿಕೆ ಮೂಡಿಸುತ್ತಿದ್ದಾರೆ ಅದೇ ಪತ್ರಿಕೆಯವರು ಈ ರೀತಿಯಾಗಿ ವಿಶೇಷ ಅಂಕಣವನ್ನು ಬರೆದಿದ್ದಾರೆ. ನಾನು ಇದನ್ನು ಏಕೆ ಹೇಳುತ್ತೇನೆಂದರೆ, ಸಿದ್ದರಾಮಣ್ಣನವರು ಇದರ ಬಗ್ಗೆ ಮಾತನಾಡುತ್ತಾರೆಂದು ನಾನು ಭಾವಿಸಿದ್ದೆ. ಸಾಮಾಜಿಕ ನ್ಯಾಯವನ್ನು ಇವತ್ತೇನು ಕೊಡಬೇಕೆಂದು ಹೇಳುತ್ತೀರಿ, ಈ ವರ್ಷ ಮುಂದಿನ ವರ್ಷ ನಿವೃತ್ತಿ ಹೊಂದುತ್ತಿರುವ ನೌಕರರು ಯಾವ ಸಂದರ್ಭದಲ್ಲಿ

ಆಯ್ಕೆಯಾಗಿರತಕ್ಕಂಥವರು? 1970 ರ ಅಂಚಿನಲ್ಲಿ ಆಯ್ಕೆಯಾಗಿದ್ದಾರೆ. ಆ ದಿವಸ ರೊಸ್ಟರ್ ಪದ್ದತಿಗಳು ಇರಲಿಲ್ಲ. ಮೀಸಲಾತಿ ಇರಲಿಲ್ಲ. ಆ ದಿವಸ ಆಯ್ಕೆಯಾಗಿರುವವರು ಅವರಿಗೆ ಇರುವ ಇನ್‌ಫ್ಲೂಯೆನ್ಸ್‌ನಿಂದ ಯಾವುದೆ ರೋಸ್ಟರ್ ಪದ್ಧತಿಯನ್ನು ಪಾಲಿಸದೇ ಆಯ್ಕೆಯಾಗಿದ್ದಾರೆ. ಇದು ಕೇವಲ ಮೇಲ್ವರ್ಗದ ಜನರಿಗೆ ಅನುಕೂಲವಾಗುವ ಕಾರ್ಯಕ್ರಮ. ಇದರ ಮೂಲಕ ಹಲವಾರು ಹಿಂದುಳಿದ ವರ್ಗದವರಿಗೆ ಹಾಗೂ ದಲಿತರಿಗೆ, ಈ ನಿವೃತ್ತಿ ವಯಸ್ಸನ್ನು 60 ಏರಿಸುವುದರ ಮೂಲಕ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವುದಕ್ಕೆ ಈ ಸರ್ಕಾರದಲ್ಲಿ ತೀರ್ಮಾನಿಸಿಲ್ಲ. ಯಾವ ಪುರುಷಾರ್ಥಕ್ಕಾಗಿ ಈ ನಿವೃತ್ತಿ ವಯಸ್ಸನ್ನು ಏರಿಸಿದಿರಿ? ಈ ಬಗ್ಗೆ ಮುಖ್ಯಮಂತ್ರಿಗಳು ಸದನದ ಮುಂದೆ ಮಾಹಿತಿ ಇಡಬೇಕಾಗುತ್ತದೆ. ಆ ದಿವಸ ಯಾವ ಸಮಾಜಗಳಿಗೆ ಅನ್ಯಾಯವಾಗಿದೆ ಆ ಸಮಾಜಗಳಿಗೆ ನ್ಯಾಯವನ್ನು ಕೊಡಬೇಕೆಂದು ನೀವೇನು ಹೇಳುತ್ತೀರಿ, ರೋಸ್ಟರ್ ಪದ್ಧತಿಯ ಮೂಲಕ ಆಯ್ಕೆಯಾಗಿಲ್ಲದಿರುವವರು ಆಯ್ಕೆಯಾಗಿದ್ದಾರೆ, ಅದರ ಮೂಲಕ ಸಾಮಾಜಿಕ ನ್ಯಾಯವನ್ನು ಕೊಡತಕ್ಕಂಥದ್ದರಲ್ಲಿ ಈ ಸರ್ಕಾರ ವಂಚನೆ ಮಾಡಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಏಕೆ ಈ ವಿಷಯಗಳನ್ನು ಹೇಳುತ್ತೇನೆಂದರೆ, ರಾಷ್ಟ್ರ ಕವಿ ಡಾ:ಜಿ.ಎಸ್.ಶಿವರುದ್ರಪ್ಪನವರ ಕವನವನ್ನು ಇಲ್ಲಿ ಹೇಳೀದ್ದಾರೆ.

"ಪ್ರೀತಿ–ಕರುಣೆ–ಸ್ನೇಹ–ಮರುಕ
ಇವೇ ನಮ್ಮ ದೇವರು
ಇಲ್ಲಿ ಇಲ್ಲ ಜಾತಿ ಗೀತಿ
ಇಲ್ಲಿ ಇರುವುದೊಂದೆ ಪ್ರೀತಿ
ಅಳೆಯಲಾರದಿದನು ನೀತಿ
ಇಲ್ಲಿ ನೀತಿಯೊಂದೆ ಪ್ರೀತಿ"

ಅಧ್ಯಕ್ಷರೆ ಯಾವುದು ನೀತಿ? ನಾನು ಕಳೆದ ಬಾರಿಯೂ ಪ್ರಸ್ತಾಪಿಸಿದೆ. ಸರಕಾರದಲ್ಲಿ ಹಲವು ರೀತಿಯ ವರ್ಗಾವಣೆಯನ್ನು ತಾವೇನು ಮಾಡುತ್ತೀದ್ದೀರಿ. ಯಾವ ಅಳತೆ ಗೋಲು ಇಟ್ಟಿದ್ದೀರಿ? ಕೆಲವರನ್ನು ಒಂದು ಒಂದೂವರೆ ತಿಂಗಳಿನಿಂದ ವರ್ಗಾವಣೆ ಮಾಡಿದ್ದೀರಿ ಅವರಿಗೆ ಪೋಸ್ಟಿಂಗ್ಸ್ ಕೊಟ್ಟಿಲ್ಲ. ನಾನು ಅವರು ಯಾವ ಸಮಾಜಕ್ಕೆ ಸೇರಿದವರು ಎಂದು ಈ ಸದನದ ಮುಂದೆ ಹೇಳುವುದಕ್ಕೆ ನನಗೆ ಅಂಜಿಕೆಯಿಲ್ಲ. ನಾನು ಹೇಳಲಿಕ್ಕೆ ಸಿದ್ದನಿದ್ದೇನೆ. ನೀವು ಯಾವ ಅಳತೆಗೋಳನ್ನು ಇಟ್ಟಿದ್ದೀರಿ? ಅವರಿಗೆ ಏಕೆ ನೀವು ಮತ್ತೇ ಪ್ಲೇಸ್ ಕೊಡುತ್ತಿಲ್ಲ? ಅವರೇನಾದರೂ ತಪ್ಪುಗಳು ಮಾಡಿದ್ದಾರಾ? ಅವರೇನು ಭ್ರಷ್ಟ ಅಧಿಕಾರಿಗಳೇ? ಸದನದ ಮುಂದೆ ಇಡಬೇಕಾಗುತ್ತದೆ.

ಮನವಿಯನ್ನು ಮಾಡುವುದಕ್ಕೆ ಹೋದಾಗ ಅವರ ಪ್ರಿನ್ಸಿಪಲ್ ಸೆಕ್ರೇಟರಿಯವರು ಹೇಳುವ ಪದಗಳು ಏನಿವೆ, ನಾನು 20 ತಿಂಗಳು ಅಧಿಕಾರ ನಡೆಸಿದ್ದೇನೆ. ನಾನು ಯಾವುದೇ ರೀತಿಯ, ಮಂತ್ರಿಗಳು ಕೆಲಸ ಮಾಡುವ ಸಂದರ್ಭದಲ್ಲಿರಬಹುದು, ಅವರು ಕೆಲವು ವಿಷಯಗಳನ್ನು ಪ್ರಸ್ತಾಪಿಸಬಹುದು ಆದರೆ, ನಾನು ಸಣ್ಣತನಕ್ಕೆ ಇಳಿಯಬಾರದು ಎನ್ನುವ ದೃಷ್ಟಿಯಲ್ಲಿ ಹೋಗುತ್ತಿಲ್ಲ. ಹಿಂದೆ ಈ ಸದನದಲ್ಲಿ ಹಲವಾರು ಹಗರಣಗಳ ಬಗ್ಗೆ ಚರ್ಚಿಸಿದ್ದಾರೆ. ಸನ್ಮಾನ್ಯ ರೇವಣ್ಣನವರೇನು ಮುಖ್ಯಮಂತ್ರಿಗಳ ಚೇರ್ ಮೇಲೆ ಕುಳಿತರು ಎನ್ನುವ ಬಗ್ಗೆ ಇಲ್ಲಿ ಅವರೇನು ಚರ್ಚೆ ಮಾಡಿದ್ದಾರೆ, ನಾನು ಅದನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ರಚನೆಯಾದಾಗ, ಸದನದಲ್ಲಿ ಯಾರು ತಪ್ಪು ತಿಳಿದುಕೊಳ್ಳುವುದು ಬೇಕಿಲ್ಲ. ನಾನು ಪ್ರತಿನಿತ್ಯ ಚಿತ್ರದಲ್ಲಿ, ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಒಂದು ಚಿತ್ರವನ್ನು ಗಮನಿಸುತ್ತಿದ್ದೆ. ಉಪಮುಖ್ಯಮಂತ್ರಿಗಳ ಹಿಂದೆ ಯಾರೋ ಒಬ್ಬ ಎತ್ತರದ ಮನುಷ್ಯ. ಯಾವ ಫೋಟೋ ನೋಡಿದರೂ ಅವರೇ ಇರುವವರು. ನಾನು ಅವರಿಗೆ ರಕ್ಷಣೆ ಕೊಡುವ ಗನ್‌ಮ್ಯಾನ್ ಎಂದುಕೊಂಡಿದ್ದೆ. ನಂತರ ನನಗೆ ಅವರು ಅವರ ಪುತ್ರ ಎಂದು ಗೊತ್ತಾಯಿತು. ಏನು ಕೆಲಸ ನಡೆಯುತ್ತದೆಂದು ನಾನು ಅವರ ಮಾತನಾಡಿದ ಹಾಗೆ ಆಧಾರವಿಲ್ಲದೇ ಮಾತನಾಡುವುದು ತಪ್ಪಾಗುತ್ತದೆ ಎನ್ನುವ ದೃಷ್ಟಿಯಿಂದ ಮಾತನಾಡುವುದಿಲ್ಲ. ಒಂದು ನಿಮಿಷ ಅವರು ಏನೇನು ಮಾತನಾಡಿದ್ದಾರೆ ನಿಮಗೆ ಗೊತ್ತೇ? ಏಕೆ ಎಂದು ಹೇಳುತ್ತೇನೆ ಒಂದು ನಿಮಿಷ ಕೇಳಿ.

ಶ್ರೀ ಕೆ.ಎಸ್.ಈಶ್ವರಪ್ಪ: ಖಾಸಗಿಯ ವಿಚಾರ ಇಲ್ಲಿ ಏಕೆ ತರುತ್ತೀರಿ?

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ: ಅವರು ಯಾವ ರೀತಿ ಮಾತನಾಡಿದ್ದಾರೆಂಬುದು ನನ್ನ ಹತ್ತಿರ ಮಾಹಿತಿ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ: ತಂದೆ ಹೋಗುತ್ತಿದ್ದಾಗ ಮಗ ಜೊತೆಗಿದ್ದ ಎಂಬುದನ್ನೇ ಇಷ್ಟು ದೊಡ್ಡದು ಮಾಡುತ್ತಿರಲ್ಲ. ದಯವಿಟ್ಟು ಖಾಸಗಿಯ ವಿಚಾರ ಇಲ್ಲಿ ಹೇಳುವುದು ಬೇಡ. ವೈಯಕ್ತಿಕವಾಗಿ ಹೋದರೆ ನಿಮ್ಮ ಬಗ್ಗೆಯೂ ವೈಯಕ್ತಿಕ ವಿಚಾರ ಶುರುಮಾಡಬೇಕಾಗುತ್ತದೆ. ಈ ಸದನ ದುರುಪಯೋಗ ಮಾಡಿಕೊಳ್ಳುವುದು ಅಷ್ಟು ಒಳ್ಳೆಯದಲ್ಲ. ಏಕೆ ಈ ಸದನವನ್ನು ದುರುಪಯೋಗ ಮಾಡಿಕೊಳ್ಳುತ್ತೀರಿ? ದಯವಿಟ್ಟು ಖಾಸಗಿ ವಿಚಾರ ಇಲ್ಲಿ ಬೇಡ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ನಮಗೂ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಕೆ.ಎಸ್.ಈಶ್ವರಪ್ಪ: ಖಾಸಗಿಯ ವಿಚಾರ ಹೇಳಿದರೆ, ನಿಮಗೂ ಗೌರವ ಬರುವುದಿಲ್ಲ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ತಂದೆ ಜತೆ ಮಗನಿರದೆ ಇನ್ಯಾರು ಇರಬೇಕಾಗಿದೆ?

ಶ್ರೀ ಕೆ.ಎಸ್.ಈಶ್ವರಪ್ಪ: ಖಾಸಗಿ ವಿಚಾರ ಇಲ್ಲಿ ದಯವಿಟ್ಟು ಬೇಡ. ದಯವಿಟ್ಟು ಇಲ್ಲಿಗೆ ಇದನ್ನು ಬಿಟ್ಟು ಬಿಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಾನು ಹೇಳುವುದಿಲ್ಲವೆಂದು ಹೇಳಿದೆ. ಈ ಭಾಗದಲ್ಲಿ ಕುಳಿತುಕೊಂಡು ಅವರು ಯಾವ ಯಾವ ರೀತಿಯಾಗಿ ಮಾತನಾಡಿದ್ದಾರೆ, ನಾನು ಈ ಬಗ್ಗೆ ಮಾತನಾಡುವುದಿಲ್ಲವೆಂದು ಹೇಳಿದೆ. ಸದನದಲ್ಲಿ......

ಶ್ರೀ ಕೆ.ಎಸ್.ಈಶ್ವರಪ್ಪ: ದಯವಿಟ್ಟು ಅದನ್ನು ಮುಗಿಸಿಬಿಡಿ.

ಅಧ್ಯಕ್ಷರು: ಸದನದಲ್ಲಿ ಇಲ್ಲದಂತಹ ವ್ಯಕ್ತಿಗಳ ಬಗ್ಗೆ ಮಾತನಾಡುವುದು ಬೇಡ.

ಒಬ್ಬ ಮಾನ್ಯ ಸದಸ್ಯರು: ಇಲ್ಲದಿರುವಂತಹ ವಿಚಾರಗಳನ್ನು ಏನಾದರೂ ಹೇಳುವುದಕ್ಕಾಗುತ್ತದೆಯೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಆಯಿತು. ನಾನು conclude ಮಾಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು: ಮಾನ್ಯ ಬಚ್ಚೇಗೌಡರೆ, please

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಿಮ್ಮ ಸದಸ್ಯರು ಕೂಡ ರಾತ್ರಿ ಸೇರುವುದಕ್ಕೆ ಈಗ ಪ್ರಾರಂಭ ಮಾಡಿದ್ದಾರೆ.

ಶ್ರೀ ಬಿ.ಎನ್.ಬಚ್ಚೇಗೌಡ: ರಾತ್ರಿ ತಂದೆಯ ಜೊತೆ ನೀವು ಸೇರುತ್ತೀರಿ. ಹಗಲು ನಮ್ಮವರು ಸೇರುತ್ತಾರೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು yield ಆಗಿಲ್ಲ.

ಅಧ್ಯಕ್ಷರು: ಸದನದಲ್ಲಿ ಇಲ್ಲದಿರುವಂತಹ ವ್ಯಕ್ತಿಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಈ ವಿಷಯವನ್ನು ನಾನು ಏತಕ್ಕಾಗಿ ಪ್ರಸ್ತಾಪ ಮಾಡಿದ್ದೇನೆಂದರೆ, ನಾನು ಈ ವಿಚಾರವನ್ನು ಮಾತನಾಡುವುದಿಲ್ಲವೆಂದು ಹೇಳಿದೆ. ನಾನು ಉದಾಹರಣೆಯನ್ನು ಕೊಟ್ಟಿದ್ದೇನೆ. ನಾನು ಹೇಳುತ್ತೇನೆ ತಾವು ಕೇಳಿ. ನಾನು ಅದಕ್ಕೋಸ್ಕರವಾಗಿಯೇ ಆ ಮಟ್ಟಕ್ಕೆ ಇಳಿಯುವುದು ಬೇಡವೆಂದು ಉದಾಹರಣೆಯನ್ನು ಕೊಟ್ಟಿದ್ದೇನೆ. 24 ಗಂಟೆಗಳ ಕಾಲ ಅವರು ಜೊತೆಯಲ್ಲಿಯೇ ಇರಲಿ ನನಗೆ ಅಭ್ಯಂತರವಿಲ್ಲ. ಆದರೆ ಯಾವ ಯಾವ ರೀತಿಯಾಗಿ ನಡೆಯುತ್ತಿದೆ ಎಂದು ನನಗೆ ಗೊತ್ತಿದೆ. ಅದನ್ನು ನಾನು ಸದನದ ಮುಂದೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಹಂತಹಂತವಾಗಿ ನಾವು ಕೊಟ್ಟಿರುವಂತಹ ಕಾರ್ಯಕ್ರಮಗಳನ್ನು

ಅನುಷ್ಠಾನಕ್ಕೆ ಮುಂದಿನ 5 ವರ್ಷಗಳಲ್ಲಿ ತರುತ್ತೇವೆಂದು ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಕಬ್ಬಿನ ಬೆಲೆಗಳ ಬಗ್ಗೆ ಕೇಳಿದರೆ ಹಂತಹಂತವಾಗಿ ಎಂದು ಹೇಳುತ್ತಾರೆ, ಕಬ್ಬಿನ ಬೆಲೆಗಳ ವಿಷಯದಲ್ಲಿ ರೈತರು 160 ರೂಪಾಯಿಗಳನ್ನು ಬೆಂಬಲ ಬೆಲೆಯನ್ನು ಕೊಡುವುದಕ್ಕೆ ಏನು ರಾಜ್ಯಪಾಲರ ಆಡಳಿತದಲ್ಲಿ ತೀರ್ಮಾನ ಮಾಡಿದ್ದಾರೆ ಇವತ್ತಿನವರೆಗೂ ಕೂಡ ಅದು settle ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೂಡ ಒಂದು ಸಭೆಯನ್ನು ಮಾಡಿದರು. ಕೊನೆಗೆ ಸಭೆ ಆದ ಮೇಲೆ ಸಕ್ಕರೆ ಕಾರ್ಖಾನೆ ಮಾಲೀಕರಿಗೆ "ನಿಮ್ಮ ದಾರಿ ನಿಮಗೆ ನಮ್ಮ ದಾರಿ ನಮಗೆ" ಎಂದು ಇವರು ಹೇಳುತ್ತಾರೆ. ಹಾಗಾದರೆ ಇವತ್ತು ರೈತರು ಯಾವ ದಾರಿಯನ್ನು ಹುಡುಕಬೇಕು? 2.00 ರೂಪಾಯಿಗೆ ಅಕ್ಕಿಯನ್ನು ಕೊಡುತ್ತೇವೆಂದು ಘೋಷಣೆ ಮಾಡಿದರು ಇವತ್ತು ರೇಟ್ ಇಷ್ಟು ಆಗುತ್ತದೆ ಎಂದು ನಮಗೆ ಗೊತ್ತಾಗಲಿಲ್ಲ ಎಂದು ಹೇಳಿದರು. ಕೇಂದ್ರ ಸರ್ಕಾರ ಇವತ್ತು ಆಡಳಿತ ನಡೆಸುವುದಕ್ಕೆ ಪ್ರಾರಂಭ ಮಾಡಿ ಇಷ್ಟು ದಿನಸಿ ರೇಟುಗಳು ಜಾಸ್ತಿಯಾಯಿತು, ಎಂದು ಜನತೆಯ ಮುಂದೆ ಪ್ರಚಾರ ಮಾಡಿ ಮತ ಕೊಡಿ, ನಾವು ಅಧಿಕಾರಕ್ಕೆ ಬಂದರೆ ರೇಟನ್ನು ಕಡಿಮೆ ಮಾಡುತ್ತೇವೆನ್ನುವಂತಹ ರೀತಿಯಲ್ಲಿ ಚರ್ಚೆ ಮಾಡಿಕೊಂಡು ಮತವನ್ನು ಹಾಕಿಸಿಕೊಂಡಿದ್ದೀರಿ. ಈ ಕಾರ್ಯಕ್ರಮವನ್ನು ಕೊಡುತ್ತೇವೆಂದು ಜನಗಳ ಮುಂದೆ ಹೇಳುವಾಗ ಅವತ್ತು ನಿಮಗೆ ಈ ರೀತಿಯಾಗಿ ದಿನಸಿ ಬೆಲೆಯು ಇಷ್ಟು ಗಗನಕ್ಕೆ ಹೋಗುತ್ತದೆಂದು ಗೊತ್ತಾಗಲಿಲ್ಲವೇ? ಇವತ್ತು ಹಂತಹಂತವಾಗಿ ನಾನು ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತೇವೆನ್ನುವಂತಹ ಮಾತನ್ನು ಒಂದು ಕಡೆಯಲ್ಲಿ ಹೇಳುತ್ತಾರೆ. ವೀರಶೈವ ಸಮಾಜದ ಪಂಚಮಸಾಲಿ ಲಿಂಗಾಯಿತರ ಸಭೆಗೆ ಸನ್ಮಾನ ಮಾಡಿಸಿಕೊಳ್ಳುವುದಕ್ಕೆ ಹೋಗುತ್ತಾರೆ ಅವರು ಆ ಸಭೆಯಲ್ಲಿ ಏನು ಹೇಳಿದ್ದಾರೆಂದರೆ, ನನ್ನ ಸರ್ಕಾರವನ್ನು ನನ್ನ ಮುಖ್ಯಮಂತ್ರಿ ಸ್ಥಾನವನ್ನು ಇವತ್ತು ಚ್ಯುತಿಗೊಳಿಸುವಂತಹ ಚಿತಾವಣೆಗಳು ನಡೆಯುತ್ತಿದೆ. ಎಲ್ಲಾ ಪಕ್ಷಗಳ ವೀರಶೈವ ಸಮಾಜದ ಮುಖಂಡರುಗಳು, ಶಾಸಕರುಗಳು ನನಗೆ ಬೆಂಬಲವನ್ನು ಕೊಡಬೇಕು, ನನಗೆ ರಕ್ಷಣೆಯನ್ನು ಕೊಡಬೇಕೆಂದು, ಅವರ ಮುಖಾಂತರ ನನ್ನ ಸ್ಥಾನವನ್ನು ಉಳಿಸಿ ಎನ್ನುವಂತಹ ಮಾತನ್ನು ಆ ಸಭೆಯಲ್ಲಿ ಇವರು ಹೇಳುತ್ತಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ವೀರಶೈವ ಪಂಚಮಸಾಲಿ ಮಹಾಸಭಾ ಸಮಾರಂಭದಲ್ಲಿ ಕರೆದಾಗ....

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ವೀರಶೈವ ಮಹಾಸಭಾ ಸಮಾರಂಭದಲ್ಲಿ ಅದು ಕರೆಕ್ಷನ್ ಅಷ್ಟೇ correct, O.K.

ಶ್ರೀ ಬಸವರಾಜ ಬೊಮ್ಮಾಯಿ: ಪಂಚಮಸಾಲಿ ಸ್ವಾಮಿಗಳು ಅಲ್ಲಿಗೆ ಬಂದಿರಲಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ವೀರಶೈವ ಮಹಾಸಭಾದ ಸಭೆಯಲ್ಲಿ ಅವರೇ ವ್ಯಕ್ತಪಡಿಸಿದ್ದಾರೆ. ನನ್ನನ್ನು ಅಸ್ಥಿರಗೊಳಿಸುವುದಕ್ಕೆ ಹೊರಟಿದ್ದಾರೆ ಎಂದು ಹೇಳಿದ್ದಾರೆ. ನಾವಂತೂ ಅಸ್ಥಿರಗೊಳಿಸುವುದಕ್ಕೆ ಹೊರಟಿಲ್ಲ. ಇವತ್ತು ಕಾಂಗ್ರೆಸ್ ಪಕ್ಷ 80 ಸ್ಥಾನವನ್ನು ಚುನಾವಣೆಯಲ್ಲಿ ಗಳಿಸಿದೆ. ನಾವು ಚುನಾವಣೆಯಲ್ಲಿ 28 ಸ್ಥಾನಗಳನ್ನು ಗಳಿಸಿದ್ದೇವೆ. 6 ಜನ ಪಕ್ಷೇತರರು ಇದ್ದರು. ಅವತ್ತು ಕಾಂಗ್ರೆಸ್ ಪಕ್ಷದವರು ತೀರ್ಮಾನ ಮಾಡಿದ್ದರೆ ಸರ್ಕಾರವನ್ನು ರಚನೆ ಮಾಡಬಹುದಾಗಿತ್ತು, ಅವರು ಸರ್ಕಾರ ರಚನೆ ಮಾಡುವುದರ ಬಗ್ಗೆ ಹಿಂದೆ ಸರಿದರು. ಇವತ್ತು ಬಿಜೆಪಿಯವರೇ ಅಧಿಕಾರವನ್ನು ನಡೆಸಲಿ ಎಂದು ತೀರ್ಮಾನವನ್ನು ಹಾಗೂ ನಿರ್ಣಯವನ್ನು ಮಾಡಿದರು. ಈ ಎಲ್ಲಾ ದೃಷ್ಟಿಯಿಂದಲೇ, ಇಲ್ಲಿರುವಂತಹ ಶಾಸಕರುಗಳನ್ನು ಒಬ್ಬೊಬ್ಬರನ್ನೇ ಆ ಭಾಗಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಹಾಗಿದ್ದರೆ ಈ ಸ್ಥಿರತೆಯನ್ನು ಉಳಿಸಿಕೊಳ್ಳುವುದಕ್ಕೆ ನಿಮಗೆ ಅನುಮಾನವಿದೆ. ನಾನು ಸಂಪೂರ್ಣವಾಗಿ 5 ವರ್ಷಗಳ ಕಾಲ ಸರ್ಕಾರವನ್ನು ನಡೆಸುತ್ತೇನೆಯೋ ಅಥವಾ ಇಲ್ಲವೋ ಎಂದು ನಿಮಗೆ ಅನುಮಾನವಿದೆ. ನೀವು ಚುನಾವಣೆಯ ಪ್ರಣಾಳಿಕೆಯಲ್ಲಿ ಕೊಟ್ಟಂತಹ ಭರವಸೆಯನ್ನು ನಾನು ನೋಡಿದ್ದೇನೆ. ಅದರಲ್ಲಿ ಯಾವ ನಾಯಕರುಗಳ photoಗಳೂ ಇಲ್ಲ. ಬಿಜೆಪಿಯ ಸಂಕಲ್ಪ ಪ್ರಣಾಳಿಕೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಒಬ್ಬರದೇ photo ಇರುವುದು.

ಅಧ್ಯಕ್ಷರು: ಅದು ಅವರ ಪಕ್ಷದ ವಿಚಾರ. ಅದನ್ನು ಪ್ರಸ್ತಾಪ ಮಾಡುವಂತಹ ಅವಶ್ಯಕತೆ ಇಲ್ಲ. ಅದು ಅವರ ಪಾರ್ಟಿಗೆ ಬಿಟ್ಟಿರುವಂತಹ ವಿಚಾರವಾಗಿದೆ. ತಾವು conclude ಮಾಡಿಬಿಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅಸ್ಥಿರಗೊಳಿಸುವುದಕ್ಕೆ ಹೊರಟಿದ್ದಾರೆಂದು ಹೇಳಿದ್ದಾರೆ. ಅವರ ಪಕ್ಷಕ್ಕೆ ಸೇರಿರುವಂತಹ ವಿಚಾರ, ಆದರೆ ಅವರಿಗೆ ಏತಕ್ಕಾಗಿ ಈ ಅನುಮಾನಗಳು ಬಂದಿವೆ, ಏತಕ್ಕಾಗಿ ನಮ್ಮ ಸಮಾಜದ ಎಲ್ಲಾ ಪಕ್ಷಗಳ ಶಾಸಕರುಗಳು ನಮಗೆ ಬೆಂಬಲವನ್ನು ಕೊಡಿ ಎಂದು ಕೇಳಿದರು.

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂ ಸಚಿವರು): ನಾವು ಅದನ್ನು ಅಕ್ಷೇಪ ಮಾಡಿಲ್ಲ. ಮಾನ್ಯ ಕುಮಾರಸ್ವಾಮಿಯವರ photo ಚೆನ್ನಾಗಿ ಕಾಣುತ್ತದೆಂದು ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಾನು ತಪ್ಪು ಎಂದು ಹೇಳಿಲ್ಲ. ಅದರಲ್ಲಿ..

ಶ್ರೀ ಬಸವರಾಜ ಬೊಮ್ಮಾಯಿ: ನಮ್ಮ ನಾಯಕರುಗಳ photoವನ್ನು ಹಾಕಿಕೊಂಡಿದ್ದೇವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಇದೇನು ಅವರ ಕಾರ್ಯಕ್ರಮವೇ ಎಂದು ನನಗೆ doubt ಅಯಿತು ಅದಕ್ಕಾಗಿ ಹೇಳಿದೆ.

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ, ತಾವು conclude ಮಾಡಿ.

ಶ್ರೀ ಚಿಕ್ಕನಗೌಡ ಈಶ್ವರಗೌಡ ಸಿದ್ದೇಗೌಡ: ಇವರು ಮಾಡಿದ ಮೇಲೆ ಕೆಲವೊಂದು ಆಗಿದೆ.

ಅಧ್ಯಕ್ಷರು: ನಾವು ಕುಳಿತುಕೊಳ್ಳಿ. ಮಾನ್ಯ ಕುಮಾರಸ್ವಾಮಿಯವರೆ, ತಾವು conclude ಮಾಡಿ please.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಾನು conclude ಮಾಡುವುದಕ್ಕಿಂತ ಮುಂಚೆ, ಒಂದು ವಿಷಯವನ್ನು ತಮ್ಮ ಮುಂದೆ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ನಾನು ಬೆಳಿಗ್ಗೆ ಕೈಗಾರಿಕಾ ನೀತಿಯ ಬಗ್ಗೆ ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಭ್ರಷ್ಟಾಚಾರದ ಬಗ್ಗೆ ಒಂದು ಚರ್ಚೆ ಬಂತು, ಅದು ಅಲ್ಲಿಗೆ ನಿಂತು ಹೋಯಿತು. ಭ್ರಷ್ಟಾಚಾರದ ಬಗ್ಗೆ ಇವತ್ತು ಚರ್ಚೆ ಮಾಡುವಂತಹ ಯಾವ ನೈತಿಕತೆಯನ್ನು ಯಾವ ಪಕ್ಷಗಳು, ಯಾವ ಸರ್ಕಾರಗಳು ಉಳಿಸಿಕೊಳ್ಳದೇ ಇರುವಂತಹ ವಾತಾವರಣವನ್ನು ನಾವೇಲ್ಲರೂ ಸೇರಿ ನಿರ್ಮಾಣ ಮಾಡಿದ್ದೇವೆ. ದೆಹಲಿಯ ರಾಜಕಾರಣದಲ್ಲಿ ಇತ್ತೀಚೆಗೆ ನಡೆದಂತಹ ಘಟನೆಗಳು, ದೆಹಲಿಯಲ್ಲಿ 25 ಕೋಟಿ ರೂಪಾಯಿಗಳನ್ನು ಸಂಸತ್ ಸದಸ್ಯರಿಗೆ ಕೊಟ್ಟಿದ್ದಾರೆಂದು ಅವರು ಹೇಳಿದರು. ಯಾವ ರೀತಿಯಾಗಿ ಎಂದರೆ ರಾಜಕಾರಣಿಗಳು ಇವತ್ತು ಜನಪ್ರತಿನಿಧಿಗಳನ್ನು ಎಲ್ಲಿಗೆ ತಂದು ನಿಲ್ಲಿಸಿದ್ದಾರೆ? ನಾವು ಜನಗಳಿಗೆ ಅನುಮಾನ ಬರದೇ ಇರುವಂತಹ ರೀತಿಯಲ್ಲಿ ಓಡಾಡುವುದಕ್ಕೆ ಆಗದೇ ಇರುವಂತಹ ವಾತಾವರಣವನ್ನು ನಿರ್ಮಾಣ ಮಾಡಿಕೊಂಡಿದ್ದೇವೆ. ಇವತ್ತು ದೆಹಲಿಯಲ್ಲಿ ವಿಶ್ವಾಸಮತವನ್ನು ಪಡೆಯುವಂತಹ ಸಂದರ್ಭದಲ್ಲಿ ಅಲ್ಲಿ ನಡೆದಿರುವಂತಹ ಘಟನೆಗಳು ಇಲ್ಲಿ ಸರ್ಕಾರದ ಬಲವನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ಏನು ಘಟನೆಗಳು ನಡೆದಿದೆ. ಆ ಬಗ್ಗೆ ಶಕ್ತಿಯನ್ನು ತುಂಬಿಸಿಕೊಳ್ಳುವುದಕ್ಕೆ ಬೀದಿಯೊಳಗಡೆ ಏನು ಚರ್ಚೆ ನಡೆಯುತ್ತಿದೆ, ಮಾಧ್ಯಮಗಳಲ್ಲಿ ಏನು ಚರ್ಚೆ ಮಾಡುತ್ತಿದ್ದಾರೆ. 25 ರಿಂದ 30 ಕೋಟಿ ರೂಪಾಯಿಗಳಿಗೆ ಶಾಸಕರ ಖರೀದಿ ಎಂದು ಇವುಗಳು ಮಾಧ್ಯಮಗಳಲ್ಲಿ ಬರುತ್ತಿವೆ. ಇವತ್ತು ಯಾರೋ ಹೊರಗಡೆ ಪ್ರಶ್ನೆ ಮಾಡಿದರು. ಮೈಸೂರಿನ ಮಹಾನಗರಪಾಲಿಕೆಯ ಸದಸ್ಯರುಗಳನ್ನು ಹಣದಲ್ಲಿ ಕೊಂಡುಕೊಂಡಿದ್ದಾರೆ ಅದಕ್ಕೆ ನಿಮ್ಮ ಉತ್ತರವೇನು ಎಂದು ಕೇಳಿದರು. ನಮ್ಮ ಪಕ್ಷದ ಶಾಸಕರುಗಳನ್ನು ನಮ್ಮ ಪಕ್ಷದ ಯಾವುದೇ ಸದಸ್ಯರುಗಳನ್ನು

ಸೆಳೆಯುವಂತಹದ್ದಕ್ಕೆ ನಾವು ಯಾವುದೇ ಅಡಚಣೆ ಮಾಡುವುದಿಲ್ಲವೆಂದು, ಯಾರನ್ನು ಬೇಕಾದರೂ ಕೂಡ ಅವರು ಕರೆದುಕೊಳ್ಳಬಹುದು ಎಂದು ನಾನು ಹಲವಾರು ಬಾರಿ ಸಾರ್ವಜನಿಕ ಸಭೆಯಲ್ಲಿ ಹೇಳಿದ್ದೇನೆ. ಇವತ್ತು ನಾನು ಈ ಜಾಗದಲ್ಲಿ ಕುಳಿತು ಕೆಲಸವನ್ನು ಮಾಡಬೇಕಾದರೆ ಶಾಸಕರಿಗಿಂತ ಹೆಚ್ಚಾಗಿ ನನಗೆ ನೈತಿಕತೆ ಇರಬೇಕು. ಆ ಭಾಗದಲ್ಲಿ ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳುವಂತಹ ಚಿಂತೆ. ನನಗೆ ಯಾವುದೇ ರೀತಿಯ ಅಸೂಯೆಯಾಗಲಿ, ದ್ವೇಷವಾಗಲಿ ಇಲ್ಲ. ಇವತ್ತು ನೀವು ಮಾಡುತ್ತಿರುವಂತಹ ಘಟನೆಗಳಿಂದ ರಾಜಕಾರಣದಲ್ಲಿ ಸಾರ್ವಜನಿಕವಾಗಿ ಯಾವ ಯಾವ ರೀತಿಯಲ್ಲಿ ಜನಗಳಲ್ಲಿ ರಾಜಕಾರಣಿಗಳ ಬಗ್ಗೆ ಸರ್ಕಾರಗಳ ಬಗ್ಗೆ ಈ ವ್ಯವಸ್ಥೆಗಳ ಬಗ್ಗೆ ಅನುಮಾನಗಳು ಬರುತ್ತದೆ ಆದ್ದರಿಂದ ಈ ಒಂದು ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಬುಡಮೇಲು ಮಾಡುವಂತಹ ಈ ರೀತಿಯ ವಾತಾವರಣ ಮುಂದಿನ ದಿನಗಳಲ್ಲಿ ಯಾವ ದಿಕ್ಕಿನಲ್ಲಿ ಹೋಗುತ್ತದೆ ಎಂಬುದನ್ನು ಸದನದ ಸದಸ್ಯರ ಒಂದು ವಿವೇಚನೆಗೆ ಬಿಡುತ್ತೇನೆ. 45 ದಿವಸಗಳಲ್ಲಿ ಪಾಪ ಶಾಸಕರುಗಳು ಅವರ ಕ್ಷೇತ್ರಗಳನ್ನು ಅಭಿವೃದ್ಧಿ ಮಾಡಿಕೊಳ್ಳಬೇಕಾಗಿದೆ. ಅವರ ಕ್ಷೇತ್ರದ ಅಭಿವೃದ್ಧಿಯನ್ನು ಮಾಡಬೇಕೆಂದು ಅವರ ಕ್ಷೇತ್ರದ ಜನರು ಹೇಳಿದ್ದಾರಂತೆ. ಏತಕ್ಕೋಸ್ಕರವಾಗಿ ಯಾವ ಯಾವ ಶಾಸಕರುಗಳು ಯಾವ ಯಾವ ತರಹ ಅಭಿವೃದ್ಧಿಪಡಿಸಿಕೊಳ್ಳಬೇಕಾಗಿದೆ, ಅವರ ತೊಂದರೆಗಳು ಏನಿದೆ, ಎಂಬ ಮಾತನ್ನು ಅವರು ಹೇಳುತ್ತಾರೆ. ಅವರಿಗಿಂತ ಹತ್ತಿರದಿಂದ ಶಾಸಕರುಗಳ ಜೊತೆಯಲ್ಲಿ ನಾನು ಒಂದು ಪ್ರೀತಿ ವಿಶ್ವಾಸವನ್ನು ಇಟ್ಟುಕೊಂಡವನಾಗಿದ್ದೇನೆ. ನನಗೆ ಆ ಬಗ್ಗೆ ಗೊತ್ತಿದೆ, ನಾನು ಆ ವಿಷಯಗಳನ್ನು ಸದನದಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವು ಸತ್ಯಗಳನ್ನು ಈ ಸದನದ ಮುಂದೆ ಪ್ರಸ್ತಾಪ ಮಾಡುವುದರ ಮುಖಾಂತರ ಆ ಒಂದು ಕಹಿಯ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ನಾನು ಸಿದ್ಧವಾಗಬಾರದೆನ್ನುವಂತಹ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಿಮಗೆ ಬೇಕೆ, ನಾನು ಇವತ್ತು ಬೇಕಾದರೂ ಹೇಳುತ್ತೇನೆ. ಇನ್ನು 10 ಜನರನ್ನು ಕರೆದುಕೊಳ್ಳಿ, ಅವರನ್ನು ಮಂತ್ರಿಗಳನ್ನಾಗಿ ಮಾಡುತ್ತೀರಾ, ಮಾಡಿಕೊಳ್ಳಿ. ನನಗೇನು ಯಾವುದೇ ರೀತಿಯ ತೊಂದರೆಯಿಲ್ಲ. ನಾನು ಈಗಾಗಲೇ ಬಂದು ಒಂದು ಸಲ ಅನುಭವಿಸಿ ಸಾಕಾಗಿಹೋಗಿದೆ. ನನಗೆ ಅದು ಬೇಕಾಗಿಲ್ಲ ಇದರ ಜೊತೆಗೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವಂತಹದ್ದು, ಈ ಶಾಸಕರ ನಿಧಿ ಏನಿದೆ ಆ ಬಗ್ಗೆ ಹೇಳುವುದಾದರೆ.....

ಶ್ರೀ ಕೆ.ಎಂ.ಶಿವಲಿಂಗೇಗೌಡ(ಅರಸೀಕೆರೆ): ಸನ್ಮಾನ್ಯ ಅಧ್ಯಕ್ಷರೆ, ನಿಮ್ಮನ್ನು ಸಹ ಕರೆಯುತ್ತಿದ್ದಾರೆ. ತಾವು ಬಹಳ ಎಚ್ಚರಿಕೆಯಿಂದ ಮಾತನಾಡಬೇಕು. ಅವರು ಈ

ರಾಜ್ಯದ ಒಬ್ಬ ಮಾಜಿ ಮುಖ್ಯಮಂತ್ರಿಗಳಾಗಿದ್ದವರು, ಈ ರಾಜ್ಯದ ಒಬ್ಬ ಜವಾಬ್ದಾರಿಯಲ್ಲಿದ್ದಂತಹ ವ್ಯಕ್ತಿಯನ್ನು ಈ ರೀತಿಯಾಗಿ ಅಸಡ್ಡೆಯಾಗಿ ಮಾತನಾಡುವಂತಹದ್ದು ಔಚಿತ್ಯತೆ ಅಲ್ಲ. ಶಾಸಕರುಗಳು ಮಾತನಾಡಬೇಕು. ನಾನು ಮಾತನಾಡಬಾರದೆಂದು ಹೇಳುತ್ತಿಲ್ಲ. ತಮಾಷೆಯಾಗಿಯೂ ಮಾತನಾಡಬಾರದು. ಅವರು ಮಾತನಾಡುವಂತಹ ಸಂದರ್ಭ ಅನಿವಾರ್ಯತೆಯೂ ಇದೆ. ಸದನದಲ್ಲಿ ಬಹಳ ಗಾಂಭಿರ್ಯತೆಯಿಂದ ಇರಬೇಕಾಗುತ್ತದೆ.

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, please ಆಯಿತು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡುತ್ತೇನೆ. ವಿರೋಧಪಕ್ಷದಲ್ಲಿರುವಂತಹ ಶಾಸಕರುಗಳಿಗಾದರೂ ಕಳೆದ ಬಾರಿ 1 ಕೋಟಿ ರೂಪಾಯಿಗಳನ್ನು ಶಾಸಕರ ನಿಧಿ ಎಂದು ಕೊಡುತ್ತಿದ್ದೆವು. ಈ ಬಾರಿ ಅದನ್ನು 5 ಕೋಟಿ ರೂಪಾಯಿಗಳಿಗೆ ಹೆಚ್ಚಿಗೆ ಮಾಡಿದರೆ ಅನುಕೂಲವಾಗುತ್ತದೆ. ಏಕೆಂದರೆ, ಈಗಾಗಲೇ ಅವರೇ ಹೇಳಿದ್ದಾರೆ, ಕೆಲವು ಶಾಸಕರುಗಳಿಗೆ ಏನಾಗಿದೆ ಎಂದರೆ, ಕ್ಷೇತ್ರದ ಅಭಿವೃದ್ಧಿಯಾಗಬೇಕೆಂದರೆ ಆಡಳಿತ ಪಕ್ಷದಲ್ಲಿಯೇ ಇರಬೇಕೆಂಬ ಏನೋ ಒಂದು ಮನೋಭಾವ ಪ್ರಾರಂಭವಾಗಿದೆ ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಆ ದೃಷ್ಟಿಯಿಂದ ವಿರೋಧ ಪಕ್ಷದಲ್ಲಿರುವ ಶಾಸಕರುಗಳಿಗಾದರೂ ವೈಯಕ್ತಿಕವಾಗಿ ಅಲ್ಲ, 5 ಕೋಟಿ ರೂ.ಗಳ ಹಣವನ್ನು ಸರ್ಕಾರದಿಂದ ಕೊಡತಕ್ಕಂಥ ಶಾಸಕರ ನಿಧಿಯನ್ನು ತಂದರೆ ಇದು ನಿಜಕ್ಕೂ ವಿರೋಧ ಪಕ್ಷಕ್ಕೆ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡತಕ್ಕಂಥದ್ದಕ್ಕೆ ಮತ್ತು ಆಡಳಿತ ಪಕ್ಷದ ಸದಸ್ಯರು ಸಹ ಸದಾ ಸಹಕಾರವನ್ನು ನಿಮಗೆ ಕೊಟ್ಟಂತಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ಈ ಕಾಯಿಲೆ ಕಳೆದ ಸರ್ಕಾರದಿಂದಲೂ ಇದೆ, ಈ ಸರ್ಕಾರದಿಂದ ಅಲ್ಲ. ಆಡಳಿತ ಪಕ್ಷದಲ್ಲಿ ಇದ್ದರೆ ಅಭಿವೃದ್ಧಿಯಾಗುತ್ತದೆ ಎನ್ನುವ ಕಾಯಿಲೆ ಆಗಿನಿಂದ ಪ್ರಾರಂಭವಾಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಇಲ್ಲಿಯವರೆಗೆ ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ ಇವತ್ತು ತಮಗೆ ನನ್ನ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಬಹಳ ದೀರ್ಘವಾಗಿ ಮಾಜಿ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ, ನೀವು ಬಹಳ ತಾಳ್ಮೆಯಿಂದ ಕೇಳಿದ್ದೀರಿ. ಎಲ್ಲಕ್ಕಿಂಥ ಬಹಳ ತಾಳ್ಮೆ ಎಂದರೆ ರೇವಣ್ಣನವರ ತಾಳ್ಮೆಯೇ ಬಹಳ ದೊಡ್ಡ ತಾಳ್ಮೆ. ಅವರು ಕೇಳಿದ್ದಾರೆಂದರೆ ಬಹಳ ದೊಡ್ಡ ತಾಳ್ಮೆ. ಅವರು ಹೇಳಿದರು, but ಕೊನೆಗೆ ಜಂಟಿ ಸದನ ಸಮಿತಿಯನ್ನು ನಾವು ಕೇಳಿದರು ಕೂಡ ನೀವು ಮಾಡಲಿಲ್ಲವೆಂದು, ಅವರು ಕೆಲವು

ವಿಚಾರಗಳನ್ನು ನಿಧಾನವಾಗಿ ಹೇಳಿದರೂ ಕೂಡ ಗಂಭೀರವಾಗಿ ಕೆಲವು charges ಅನ್ನು ಮಾಡಿದರು. ಅದಕ್ಕೆ ಯಾವ ಪ್ರತಿಕ್ರಿಯೆ ಇಲ್ಲ ಮತ್ತು ಹೇಳುವವರು ಕೇಳುವವರು ಯಾರು ಇಲ್ಲ. ಈಗ ಅವರು ಶಾಸಕರ ನಿಧಿಯ ಬಗ್ಗೆ ಹೇಳಿದರು. ಅದಕ್ಕೆ ಉತ್ತರ ಹೇಳುವವರೇ ಇಲ್ಲ ಅದರ ಬಗ್ಗೆ ಆಸಕ್ತಿಯನ್ನು ವಹಿಸತಕ್ಕಂಥವರು ಇಲ್ಲ. ಅದರ ಬಗ್ಗೆ ಉತ್ತರವನ್ನು ಕೊಡುವಾಗ ಅವರು ಉತ್ತರವನ್ನು ಪಡೆದುಕೊಳ್ಳಲಿ. ಮಾನ್ಯ ಅಧ್ಯಕ್ಷರೆ ನಾನು ಈಗಾಗಲೇ ತಮ್ಮ ಗಮನಕ್ಕೆ ಒಂದು ಪತ್ರವನ್ನು ಬರೆದು ಕೊಟ್ಟಿದ್ದೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು.

ವಿಷಯ: ಬೆಂಗಳೂರು ಮತ್ತೆ ಅಹಮದಾಬಾದ್ ನಗರಗಳಲ್ಲಿ ಇತ್ತೀಚೆಗೆ ಆದ ಬಾಂಬ್ ಸ್ಫೋಟದ ಬಗ್ಗೆ ಕಾಂಗ್ರೆಸ್ ನಡೆಸಿದ ಪಿತೂರಿ ಎಂದು ಬಣ್ಣಿಸಿರುವ ಬಗ್ಗೆ

ಅಧ್ಯಕ್ಷರು: ಅದನ್ನು ಈಗಲೇ ಹೇಳುತ್ತೀರೋ ಅಥವಾ ನಾಳೆ ದಿವಸ ಪ್ರಸ್ತಾಪವನ್ನು ಮಾಡುತ್ತೀರೋ? ಏಕೆಂದರೆ ಈ ದಿನ ಬಜೆಟ್ ಚರ್ಚೆ continue ಆಗಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ನಾಳೆ ಮುಂಜಾನೆ ಅದನ್ನೆ ಚರ್ಚೆಗೆ ಕೊಡುತ್ತೇನೆಂದರೆ ನಾಳೆಯೇ ತೆಗೆದುಕೊಳ್ಳುತ್ತೇನೆ, ನನ್ನದೇನು ಇಲ್ಲ, ನಿಮ್ಮ ಮೇಲೆ ಇರುವುದು.

ಅಧ್ಯಕ್ಷರು: ರಿಪ್ಲೈ ಆದ ಮೇಲೆ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾಳೆ ರಿಪ್ಲೈ ಆದ ಮೇಲೆ ನನಗೆ ಗೊತ್ತಿದೆ ಏನು ಎನ್ನುವುದು. ಯಾವುದೋ ಒಂದು ಕಾರಣವನ್ನು ತೆಗೆದು ಅಡ್ಜರ್ನ್ ಮಾಡಿ ಹೋದರೆ ಆಮೇಲೆ..

ಅಧ್ಯಕ್ಷರು: ನೀವು ಈಗಲೇ ಅಡ್ವಾನ್ಸಾಗಿ ಹೇಳುತ್ತಿದ್ದೀರಿ ಏನು?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ತಾವು ಉತ್ತರವನ್ನು ಕೊಡಿಸತಕ್ಕಂಥದ್ದು ಒಂದು. sorry, ಅದರ ಮೇಲೆ ತಮ್ಮ ರೂಲಿಂಗ್ ಕೊಡತಕ್ಕಂಥದ್ದು ಒಂದು ಬಾಕಿ ಇದೆ ಆ ರೂಲಿಂಗ್ ಬೇಕು. ಏಕೆಂದರೆ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ನಾನು ರೂಲಿಂಗ್ ಅನ್ನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡತಕ್ಕಂಥ ಈ ಪ್ರಮೇಯು ಏಕೆ ಬಂತು ಎಂದರೆ, ನಿಜವಾಗಲೂ ನೋಟಿಸ್ ಕೊಟ್ಟೆ ಮಾತನಾಡಬೇಕು ಎನ್ನತಕ್ಕಂಥ ಒಂದು ಪದ್ದತಿ ಇದ್ದ ಕಾರಣ ನೋಟಿಸ್ ಕೊಟ್ಟಿದ್ದೇನೆ. ಅದಕ್ಕಾಗಿ ದಯವಿಟ್ಟು ಭಾರತೀಯ ಜನತಾ ಪಾರ್ಟಿಯ ನಾಯಕಿಯಾದ ಶ್ರೀಮತಿ ಸುಷ್ಮಾ ಸ್ವರಾಜ್‌ರವರು ನವದೆಹಲಿಯಲ್ಲಿ ನಿನ್ನೇ ನಡೆದ ಪತ್ರಿಕಾಗೋಷ್ಠಿಯಲ್ಲಿ ಬೆಂಗಳೂರು ಮತ್ತು ಅಹಮದಾಬಾದ್ ನಗರಗಳಲ್ಲಿ ಇತ್ತೀಚೆಗೆ ಆದ ಬಾಂಬ್‌ಸ್ಫೋಟದ ಬಗ್ಗೆ ಮಾತನಾಡುತ್ತಾ ಸಂಸತ್ತಿನಲ್ಲಿ ನಡೆದ ವಿಶ್ವಾಸ ಮತದ